೬	೫	೫೧	೫	೪೪	೪	೨೩	೧೦	೨೩	೭	೧೦
೭	೫	೫೧	೫	೪೩	೪	೧೪	೧೦	೧೨	೭	೫೩
೮	೫	೫೧	೫	೪೨	೪	೫೭	೯	೫೯	೮	೩೬
೯	೫	೫೧	೫	೪೧	೫	೪೦	೯	೪೫	೯	೧೯
೧೦	೫	೫೧	೫	೪೦	೫	೨೩	೯	೩೧	೧೦	೨
೧೧	೫	೫೧	೫	೩೯	೫	೬೭	ಮಧ್ಯಾನ್ನ ೧೨	೧೭	ಪ್ರಾತಃ. ೧೦	೪೫
೧೨	೫	೫೧	೫	೩೮	೫	೫೦	೧೨	೫೩	೧೧	೨೮
೧೩	೫	೫೧	೫	೩೭	೬	೩೩	೧೨	೩೦	೧೨	೧೦
೧೪	೫	೫೧	೫	೩೬	೬	೧೬	೧೨	೬	೧೨	೫೩
೧೫	೫	೫೧	೫	೩೫	೬	೫೯	೧೧	೪೩	೧೩	೩೭
೧೬	೫	೫೧	೫	೩೪	೭	೪೨	೧೧	೨೦	೧೪	೨೧
೧೭	೫	೫೧	೫	೩೩	೭	೨೫	ಪ್ರಾತಃ. ೧೧	೫೭	೧೫	೫
೧೮	೫	೫೧	೫	೩೨	೮	೭	೧೧	೩೪	೧೫	೪೯
೧೯	೫	೫೧	೫	೩೧	೮	೪೯	೧೧	೧೧	೧೬	೩೩
೨೦	೫	೫೧	೫	೩೦	೯	೩೨	೧೦	೪೮	೧೭	೧೭
೨೧	೫	೫೧	೫	೨೯	೯	೧೫	೧೦	೨೫	೧೮	೧
೨೨	೫	೫೧	೫	೨೮	೧೦	೦	೧೦	೨	೧೮	೪೫
೨೩	೫	೫೨	೫	೨೭	೧೦	೪೮	೯	೪೦	೧೯	೨೯
೨೪	೫	೫೨	೫	೨೬	೧೧	೩೫	೯	೧೭	೨೦	೧೪
೨೫	೫	೫೨	೫	೨೫	೧೨	೨೨	೮	೫೪	೨೦	೫೯
೨೬	೫	೫೨	೫	೨೪	ಮಧ್ಯಾನ್ನ ೧೨	೧೦	೮	೩೧	೨೧	೪೪
೨೭	೫	೫೨	೫	೨೩	ಪ್ರಾತಃ. ೧೨	೫೭	೮	೮	೨೨	೨೯
೨೮	೫	೫೪	೫	೨೨	೧	೪೪	೭	೪೫	೨೩	೧೪
೨೯	೫	೫೪	೫	೨೧	೧	೩೨	೭	೨೨	೨೩	೫೯
೩೦	೫	೫೪	೫	೨೦	೧	೧೯	೬	೫೯	ಪ್ರಾತಃ. ೦	೪೪
೩೧	೫	೫೪	೫	೧೯	೧	೬	೬	೩೬	೦	೨೯

ಗ್ರಹ	ತಾರೀಖು	ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ		
		ಉದಯ	ಉಚ್ಚ	ಅಸ್ತ
ಕುಜ		ಪ್ರಾತಃ.	ಮಧ್ಯಾ.	ಸಾಯಂ
		ಘ. ನಿ.	ಘ. ನಿ.	ಘ. ನಿ.
	೧	೬ ೧೫	೧೨ ೧೧	೬ ೬
			ಹಗಲು	
	೧೬	೬ ೨	೧೧ ೫೬	೫ ೪೯
	೩೧	೫ ೫೨	೧೧ ೪೨	೫ ೩೨
ಬುಧ		ಘ. ನಿ.	ಘ. ನಿ.	ಘ. ನಿ.
	೧	೬ ೪೮	೧೨ ೩೯	೬ ೩೧
	೧೬	೬ ೧೦	೧೨ ೫೬	೬ ೪೨
	೩೧	೬ ೩೯	೧೧ ೧೧	೬ ೫೨
ಗುರು		ಸಾಯಂ	ರಾತ್ರಿ	ಪ್ರಾತಃ.
		ಘ. ನಿ.	ಘ. ನಿ.	ಘ. ನಿ.
	೧	೫ ೪೩	೧೧ ೪೯	೫ ೫೫
	೧೬	೪ ೫೯	೧೧ ೪	೫ ೧೦
	೩೧	೪ ೧೫	೧೦ ೨೧	೪ ೨೬
ಶುಕ್ರ		ಪ್ರಾತಃ.	ಮಧ್ಯಾ.	ಸಾಯಂ
		ಘ. ನಿ.	ಘ. ನಿ.	ಘ. ನಿ.
	೧	೬ ೨೫	೧೧ ೧೫	೬ ೪
	೧೬	೬ ೫೯	೧೨ ೨೪	೬ ೯
	೩೧	೬ ೫೨	೧೨ ೫೫	೬ ೧೬
ಶನಿ		ಸಾಯಂ	ಪ್ರಾತಃ.	ಪ್ರಾತಃ.
		ಘ. ನಿ.	ಘ. ನಿ.	ಘ. ನಿ.
	೧	೬ ೨೯	೧೨ ೫೯	೬ ೪೮
			ರಾತ್ರಿ	
	೧೬	೫ ೪೨	೧೧ ೫೨	೬ ೧
	೩೧	೫ ೧	೧೧ ೧೦	೫ ೧೪

NOVEMBER.

30 DAYS.

ನವಂಬರ.

೩೦ ದಿವಸಗಳು.

ನವಂಬರ ೨ ⓓ ಆಶ್ವೀಜ ಅಮಾವಾಸ್ಯೆ, ರಾತ್ರಿ ಘಂಟೆ ೯ ನಿಮಿಷ ೫೪
" ೯ ☽ ಶುಕ್ಲಾರ್ಧಚಂದ್ರ, ಮಧ್ಯಾನ್ನ " ೧ " ೧೯
" ೧೨ ⓕ ಕಾರ್ತಿಕಪೂರ್ಣಿಮ, ಪ್ರಾತಃಕಾಲ " ೧ " ೪೯
" ೨೨ ☾ ಕೃಷ್ಣಾರ್ಧಚಂದ್ರ, " " ೭ " ೫೫

ಚಂದ್ರಸ್ಥಿತಿಗಳು.

ಅಂಗ್ಲ				ಚಾಂದ್ರಮಾನ			ನಕ್ಷತ್ರ		ಸೌರಮಾನ		ಮಹಮ್ಮದಿ	
Date	Day	ತಾರೀಕು	ಮಾಸ	ತಿಂಗಳು	ತಿಥಿ	ಘಳಿಗೆ	ಹೆಸರು	ಘಳಿಗೆ	ಸಂಕ್ರಮಣ	ದಿನ	ತಿಂಗಳು	ದಿನ
1	M	೧	ಚ	ಶ್ರಾ. ಕೃ.	೧೪	೪೫ III	ಚಿತ್ರಾ	೪೭ II		೧೭	ಜಿಲ್ಹಾಯಜ್	೨೭
2	Tu	೨	ಮ	ಶ.	⓭	೫೬ II	ಸ್ವಾತೀ	೪೫		೧೮		೨೮
3	W	೩	ಬು		೧	೨೯ II	ವಿಶಾಖಾ	೫೭ III		೧೯		೨೯
4	Th	೪	ಗು		೨	೨೨	ಅನುರಾಧಾ	೫೨		೨೦		೧
5	F	೫	ಶು		೩	೧೪ II	ಜ್ಯೇಷ್ಠಾ	೨೬ II		೨೧		೨
6	S	೬	ಕ		೪	೭	ಮೂಲಾ	೨೧		೨೨		೩
7	SUN	೭	ಆ	ಕಾರ್ತಿಕ ಶುಕ್ಲ	೫	III	ಪೂರ್ವಾಷಾಢ	೧೬ II	(ಬೊಂತೆಳ್)	೨೩		೪
8	M	೮	ಚ		೬	೪೮ III	ಉತ್ತ್ರಾಷಾಢ	೧೨ III		೨೪		೫
9	Tu	೯	ಮ		೭	೪೬	ಶ್ರವಣಾ	೮ III	ಕುಂಭಾ	೨೫		೬
10	W	೧೦	ಬು		೮	೪೫	ಧನಿಷ್ಠಾ	೩ III		೨೬		೭
11	Th	೧೧	ಗು		೯	೪೧	ಶತಭಿಷಾ	೭		೨೭		೮
12	F	೧೨	ಶು		೧೦	೪೦	ಪೂರ್ವಾಭಾದ್ರ	೭		೨೮		೯
13	S	೧೩	ಕ		೧೧	೪೦ III	ಉತ್ತ್ರಾಭಾದ್ರ	೮ II		೨೯		೧೦
14	SUN	೧೪	ಆ		೧೨	೪೨	ರೇವತೀ	೧೦ III		೩೦		೧೧
15	M	೧೫	ಚ		೧೩	೪೪ III	ಅಶ್ವಿನೀ	೧೪		೧		೧೨
16	Tu	೧೬	ಮ		⓭	೪೮ II	ಭರಣೀ	೧೮ III		೨		೧೩
17	W	೧೭	ಬು		೧	೫೩	ಕೃತ್ತಿಕಾ	೨೪		೩	ಜಿಲ್ಹಜ್	೧೪
18	Th	೧೮	ಗು		೨	೫೯	ರೋಹಿಣೀ	೩೦ III		೪		೧೫
19	F	೧೯	ಶು		೩	೬೦	ಮೃಗಶಿರಾ	೩೮		೫		೧೬
20	S	೨೦	ಕ		೪	೫II	ಆರ್ದ್ರಾ	೪೫ III		೬		೧೭
21	SUN	೨೧	ಆ		೫	೧೨	ಪುನರ್ವಸೂ	೫೪ III	(ಜಾರ್ದೆ)	೭		೧೮
22	M	೨೨	ಚ		೬	೧೯	ಪುಷ್ಯಾ	೬೦		೮		೧೯
23	Tu	೨೩	ಮ	ಕಾರ್ತಿಕ ಕೃಷ್ಣ	೭	೨೫	ಪುಷ್ಯಾ	೧		೯		೨೦
24	W	೨೪	ಬು		೮	೨೯ III	ಆಶ್ಲೇಷಾ	೭ III		೧೦		೨೧
25	Th	೨೫	ಗು		೯	೩೩	ಮಘಾ	೧೨ III	ಕನ್ನಿ	೧೧		೨೨
26	F	೨೬	ಶು		೧೦	೩೪	ಹುಬ್ಬಾ	೧೮		೧೨		೨೩
27	S	೨೭	ಕ		೧೧	೩೪ II	ಉತ್ತರಾ	೨೩		೧೩		೨೪
28	SUN	೨೮	ಆ		೧೨	೩೦ III	ಹಸ್ತಾ	೨೮ II		೧೪		೨೫
29	M	೨೯	ಚ		೧೩	೨೬	ಚಿತ್ರಾ	೩೪		೧೫		೨೬
30	Tu	೩೦	ಮ		೧೪	೨೧ II	ಸ್ವಾತೀ	೪ III		೧೬		೨೭

ನಿನ್ನ ಸೃಷ್ಟಿಕರ್ತನನ್ನು ಜ್ಞಾಪಕ ಮಾಡಿಕೋ,—ಸೂರ್ಯನೂ ಚಂದ್ರನೂ ನಕ್ಷತ್ರಗಳೂ ಕತ್ತಲಾಗುವದಕ್ಕಿಂತಲೂ, ಮಳೆಯ ಮೋಡಗಳು ತಿರಿಗಿ ಬರುವದಕ್ಕಿಂತಲೂ ಮುಂಚೆಯೇ. ಪ್ರಸಂಗಿ. ೧೨, ೨.

ನವಂಬರ.

ತಾರೀಕು	ಸೂರ್ಯ				ಚಂದ್ರ						ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ				
	ಉದಯ		ಅಸ್ತ		ಉದಯ		ಉಚ್ಚ		ಅಸ್ತ		ಗ್ರಹ	ತಾರೀಕು	ಉದಯ	ಉಚ್ಚ	ಅಸ್ತ
	ಘಂಟೆ	ನಿಮಿಷ	ಘಂಟೆ	ನಿಮಿಷ	ಘಂಟೆ	ನಿಮಿಷ	ಘಂಟೆ	ನಿಮಿಷ	ಘಂಟೆ	ನಿಮಿಷ					
					ಪ್ರಾತಃ.		ಪ್ರಾತಃ.		ಮಧ್ಯಾನ್ನ						
೧	೫	೫೫೫	೫	೫೨	೪	೨೫	೧೦	೨೬	೪	೨೬			ಪ್ರಾತಃ.	ಮಧ್ಯಾ.	ಸಾಯಂ
೨	೫	೫೫೫	೫	೫೨	೫	೨೦	೧೧	೧೬	೫	೧೫			ಘ. ನಿ.	ಘ. ನಿ.	ಘ. ನಿ.
೩	೫	೫೫೬	೫	೫೨	೬	೨೨	೧೧	೫೫	೬	೬	ಶನಿ	೯	೫ ೪೧	೧೧ ೩೦	೫ ೧೪
೪	೫	೫೫೬	೫	೫೨	೭	೨೪	೧೧	೬	೭	೭		೧೬	೫ ೫೧	೧೧ ೧೪	೫ ೪
೫	೫	೫೫೭	೫	೫೧	೮	೨೦	೧೧	೧೬	೮	೧೪		೨೬	೫ ೨೨	೧೧ ೬	೪ ೫೧
೬	೫	೫೫೭	೫	೫೧	೧೦	೨೮	೧೨	೨೬	೧೦	೧೫			ಮಧ್ಯಾನ್ನ		
೭	೫	೫೫೮	೫	೫೦	೧೧	೨೦	೧೨	೧೬	೧೧	೧೪			ಪ್ರಾತಃ.		
೮	೫	೫೫೮	೫	೫೦	೧೧	೩೫	೧೨	೫೬	೧೧	೧೦			ಘ. ನಿ.	ಘ. ನಿ.	ಘ. ನಿ.
೯	೫	೫೫೯	೫	೫೦	೧೨	೫೫	೧೩	೨೬	೧೨	೫೫	ಶನಿ	೯	೬ ೫೬	೧ ೧೬	೬ ೫೫
೧೦	೫	೫೫೯	೫	೫೦	೧೨	೫೫	೧೩	೫೬	೧೨	೫೫		೧೬	೬ ೨೨	೧೧ ೪೯	೬ ೨೨
೧೧	೫	೫೫೯	೫	೫೦	೧೩	೫೫	೧೪	೨೬	೧೩	೫೫		೨೬	೫ ೪೦	೧೧ ೩೫	೫ ೧೦
೧೨	೫	೫೫೯	೫	೫೦	೧೪	೫೬	೧೫	೨೬	೧೪	೫೬			ಮಧ್ಯಾನ್ನ		
೧೩	೫	೫೫೯	೫	೫೦	೧೫	೫೬	೧೬	೨೬	೧೫	೫೬			ಪ್ರಾತಃ.		
೧೪	೫	೦	೫	೧೯	೫	೫೮	೧೦	೨	೫	೫೮			ಘ. ನಿ.	ಘ. ನಿ.	ಘ. ನಿ.
೧೫	೫	೦	೫	೧೯	೬	೧೦	೧೦	೪೬	೬	೧೧	ಶನಿ	೯	೭ ೫೬	೧೦ ೫೬	೭ ೫೬
೧೬	೫	೧	೫	೧೯	೬	೫೦	೧೦	೧೦	೬	೫೦		೧೬	೭ ೨೨	೧೦ ೨೨	೭ ೨೨
೧೭	೫	೧	೫	೧೯	೭	೩೦	೧೧	೧೦	೭	೩೦		೨೬	೭ ೪೮	೧೦ ೪೮	೭ ೪೮
೧೮	೫	೧	೫	೧೯	೮	೧೦	೧೧	೫೬	೮	೧೦			ಮಧ್ಯಾನ್ನ		
೧೯	೫	೨	೫	೧೯	೮	೫೦	೧೨	೪೬	೮	೫೦			ಪ್ರಾತಃ.		
೨೦	೫	೨	೫	೧೯	೯	೩೨	೧೩	೩೬	೯	೩೨			ಘ. ನಿ.	ಘ. ನಿ.	ಘ. ನಿ.
೨೧	೫	೩	೫	೧೯	೧೦	೧೩	೧೪	೨೬	೧೦	೧೩	ಶನಿ	೯	೮ ೩೦	೧೦ ೩೦	೮ ೩೦
೨೨	೫	೩	೫	೧೯	೧೦	೫೪	೧೫	೧೬	೧೦	೫೪		೧೬	೮ ೫೭	೧೦ ೫೭	೮ ೫೭
೨೩	೫	೪	೫	೧೯	೧೧	೩೫	೧೬	೫	೧೧	೩೫		೨೬	೯ ೨೪	೧೧ ೨೪	೯ ೨೪
೨೪	೫	೪	೫	೧೯	೧೨	೧೬	೧೬	೫೫	೧೨	೧೬			ಮಧ್ಯಾನ್ನ		
೨೫	೫	೫	೫	೧೯	ಪ್ರಾತಃ.		೧೭	೪೫	೧೨	೫೭			ಪ್ರಾತಃ.		
೨೬	೫	೫	೫	೨೦	೧೩	೧೬	೧೮	೩೫	೧೩	೧೭			ಘ. ನಿ.	ಘ. ನಿ.	ಘ. ನಿ.
೨೭	೫	೫	೫	೨೦	೧	೨೦	೧೯	೨೫	೧೩	೩೮	ಶನಿ	೯	೯ ೧೯	೧೧ ೧೯	೯ ೧೯
೨೮	೫	೬	೫	೨೦	೨	೨೬	೨೦	೧೫	೧೪	೧೯		೧೬	೯ ೪೬	೧೧ ೪೬	೯ ೪೬
೨೯	೫	೬	೫	೨೦	೩	೩೩	೨೧	೫	೧೪	೫೯		೨೬	೧೦ ೧೩	೧೨ ೧೩	೧೦ ೧೩
೩೦	೫	೭	೫	೨೦	೪	೪೧	೨೧	೫೫	೧೫	೪೦			ಮಧ್ಯಾನ್ನ		

DECEMBER.

31 DAYS.

ದಶಂಬರ.

೩೧ ದಿವಸಗಳು.

ದಶಂಬರ ೨ ☉ ಕಾರ್ತಿಕ ಅಮಾವಾಸ್ಯೆ, ಪ್ರಾತಃಕಾಲ ಘಂಟೆ ೭ ನಿಮಿಷ ೫೬
.. ೯ ☽ ಕುಕ್ಷ್ಲಾರ್ಧಚಂದ್ರ, ರಾತ್ರಿ ,, ೧೧ ,, ೫೪
.. ೧೬ ☉ ಮಾರ್ಗಶಿರ ಪೂರ್ಣಿಮೆ, ,, ,, ೯ ,, ೫೫
.. ೨೪ ☽ ಕೃಷ್ಣಾರ್ಧಚಂದ್ರ, ,, ,, ೧೧ ,, ೫೬
.. ೩೧ ☉ ಮಾರ್ಗಶಿರ ಅಮಾವಾಸ್ಯೆ, ಸಾಯಂಕಾಲ ೬ ,, ೫೬

ಚಂದ್ರಸ್ಥಿತಿಗಳು.

DATE	DAY	ಅಂಗ್ಲ ತಾರೀಖು	ಅಂಗ್ಲ ವಾರ	ಜಾಂದ್ರಮಾನ ತಿಂಗಳು	ಜಾಂದ್ರಮಾನ ತಿಥಿ	ಜಾಂದ್ರಮಾನ ಘಳಿಗೆ	ನಕ್ಷತ್ರ ನಕ್ಷತ್ರ	ನಕ್ಷತ್ರ ಘಳಿಗೆ	ಸೂರಮಾನ ಸೂರಮಾನ	ಸೂರಮಾನ ಘಂಟೆ	ಮಹಮ್ಮದಿ ತಿಂಗಳು	ಮಹಮ್ಮದಿ ತಾ
1	W	೧	ಬು	ಕಾರ್ತಿಕ	೧೪	೧೨	ವಿಶಾಖಾ	೪೧		೧೭	ಜುಮಾದಿ ೨	೨೮
2	Th	೨	ಗು	☉	೩೫	೫೫	ಜ್ಯೇಷ್ಠಾ	೫೧		೧೮		೨೯
3	F	೩	ಶು	೨	೪೬	ಮೂಲಾ	೪೪	(ಜ್ಞಾದೆ)	೧೯		೩೦	
4	S	೪	ಶ	೩	೫೮	ಪೂರ್ವಾಷಾಢ	೩೭		೨೦		೧	
5	SUN	೫	ಆ	೪	೫೦	ಉತ್ತ್ರಾಷಾಢ	೩೦		೨೧		೨	
6	M	೬	ಚ	೫	೬೩	ಶ್ರವಣಾ	೨೩		೨೨		೩	
7	Tu	೭	ಮ	೬	೭೮	ಧನಿಷ್ಠಾ	೧೫		೨೩		೪	
8	W	೮	ಬು	೭	೮೪	ಶತಭಿಷಾ	೨೮		೨೪		೫	
9	Th	೯	ಗು	೮	೯೨	ಪೂರ್ವಾಭಾದ್ರ	೧೦	ನೈಋತ್ಯ	೨೫		೬	
10	F	೧೦	ಶು	೯	೯೮	ಉತ್ತ್ರಾಭಾದ್ರ	೨೨		೨೬		೭	
11	S	೧೧	ಶ	೧೦	೧೦೫	ರೇವತೀ	೨೪		೨೭		೮	
12	SUN	೧೨	ಆ	೧೧	೧೧೩	ಅಶ್ವಿನೀ	೨೮		೨೮		೯	
13	M	೧೩	ಚ	೧೨	೧೨೦	ಭರಣೀ	೩೪		೨೯		೧೦	
14	Tu	೧೪	ಮ	೧೩	೧೨೮	ಕೃತ್ತಿಕಾ	೪೦		೦		೧೧	
15	W	೧೫	ಬು	೧೪	೧೩೫	ರೋಹಿಣೀ	೪೭		೧		೧೨	
16	Th	೧೬	ಗು	☽	೧೪೩	ಮೃಗತಿರಾ	೫೪		೨		೧೩	
17	F	೧೭	ಶು	೧	೧೫೦	ಆರ್ದ್ರಾ	೬೦		೪		೧೪	
18	S	೧೮	ಶ	೨	೧೫೮	ಆರ್ದ್ರಾ	೧		೫		೧೫	
19	SUN	೧೯	ಆ	೩	೧೬೫	ಪುನರ್ವಸೂ	೭೦		೬		೧೬	
20	M	೨೦	ಚ	೪	೧೭೩	ಪುಷ್ಯಾ	೧೩		೭		೧೭	
21	Tu	೨೧	ಮ	೫	೧೮೧	ಆಶ್ಲೇಷಾ	೨೧	(ಪೂರಾದೆ)	೮		೧೮	
22	W	೨೨	ಬು	೬	೧೮೮	ಮಾಘಾ	೨೮		೯		೧೯	
23	Th	೨೩	ಗು	೭	೧೯೬	ಹುಬ್ಬಾ	೩೫		೧೦		೨೦	
24	F	೨೪	ಶು	೮	೨೦೪	ಉತ್ತರಾ	೪೨		೧೧		೨೧	
25	S	೨೫	ಶ	೯	೨೧೨	ಹಸ್ತಾ	೪೯	ನೈಋ	೧೨		೨೨	
26	SUN	೨೬	ಆ	೧೦	೨೧೯	ಚಿತ್ರಾ	೫೬		೧೩		೨೩	
27	M	೨೭	ಚ	೧೧	೨೨೭	ಸ್ವಾತೀ	೬೩		೧೪		೨೪	
28	Tu	೨೮	ಮ	೧೨	೨೩೫	ವಿಶಾಖಾ	೭೦		೧೫		೨೫	
29	W	೨೯	ಬು	೧೩	೨೪೨	ಅನುರಾಧಾ	೭೭		೧೬		೨೬	
30	Th	೩೦	ಗು	೧೪	೨೫೦	ಜ್ಯೇಷ್ಠಾ	೮೪		೧೭		೨೭	
31	F	೩೧	ಶು	☾	೨೫೭	ಮೂಲಾ	೯೧		೧೮		೨೮	

ದ ಶ ಂ ಬ ರ.

ತಾರೀಖು	ಸೂರ್ಯ ಉದಯ ಘಂಟೆ	ಸೂರ್ಯ ಉದಯ ನಿಮಿಷ	ಸೂರ್ಯ ಅಸ್ತ ಘಂಟೆ	ಸೂರ್ಯ ಅಸ್ತ ನಿಮಿಷ	ಚಂದ್ರ ಉದಯ ಘಂಟೆ	ಚಂದ್ರ ಉದಯ ನಿಮಿಷ	ಚಂದ್ರ ಉಚ್ಚ ಘಂಟೆ	ಚಂದ್ರ ಉಚ್ಚ ನಿಮಿಷ	ಚಂದ್ರ ಅಸ್ತ ಘಂಟೆ	ಚಂದ್ರ ಅಸ್ತ ನಿಮಿಷ
೧	೬	೮	೫	೫೦	ಪ್ರಾತಃ.		ಹಗಲು		ಸಾಯಂ.	
೨	೬	೯	೫	೫೧	೫	೫	೧೦	೫೬	೪	೪೮
೩	೬	೯	೫	೫೧	೬	೬	೧೧	೫೯	೫	೫೦
೪	೬	೯	೫	೫೧	ಮಧ್ಯಾಹ್ನ					
೫	೬	೧೦	೫	೫೧	೭	೧೫	೧೨	೨	೭	೫೫
೬	೬	೧೦	೫	೫೧	೮	೨೫	೧೨	೫೭	೮	೫೯
೭	೬	೧೧	೫	೫೧	೯	೩೫	೧೩	೫೩	೯	೫೭
೮	೬	೧೧	೫	೫೧	೧೦	೪೫	೧೪	೪೮	೧೦	೫೬
೯	೬	೧೧	೫	೫೧	೧೧	೫೬	೧೫	೪೩	೧೧	೫೩
೧೦	೬	೧೨	೫	೫೧	ಮಧ್ಯಾಹ್ನ					
೧೧	೬	೧೨	೫	೫೧	೧	೫೬	೧೬	೩೭	೧೨	೪೯
೧೨	೬	೧೨	೫	೫೧	೨	೫೬	೧೭	೩೦	೧೩	೪೫
೧೩	೬	೧೨	೫	೫೧	೩	೫೫	೧೭	೨೩	೧೪	೪೧
೧೪	೬	೧೩	೫	೫೧	೪	೫೪	೧೮	೧೬	೧೫	೩೭
೧೫	೬	೧೩	೫	೫೧	೫	೫೩	೧೯	೯	೧೬	೩೩
೧೬	೬	೧೩	೫	೫೧	೬	೫೨	೨೦	೨	೧೭	೨೯
೧೭	೬	೧೩	೫	೫೧	೭	೫೧	೨೦	೫೫	೧೮	೨೫
೧೮	೬	೧೩	೫	೫೧	೮	೫೦	೨೧	೪೮	೧೯	೨೧
೧೯	೬	೧೩	೫	೫೧	೯	೪೯	೨೨	೪೧	೨೦	೧೭
೨೦	೬	೧೩	೫	೫೧	೧೦	೪೮	೨೩	೩೪	೨೧	೧೩
೨೧	೬	೧೩	೫	೫೧	೧೧	೪೭	೨೪	೨೭	೨೨	೯
೨೨	೬	೧೩	೫	೫೧	೧೨	೪೬	೨೫	೨೦	೨೩	೫
೨೩	೬	೧೩	೫	೫೧	೧೩	೪೫	೨೬	೧೩	೨೪	೧
೨೪	೬	೧೩	೫	೫೧	೧೪	೪೪	೨೭	೬	೨೪	೫೭
೨೫	೬	೧೩	೫	೫೧	೧೫	೪೩	೨೭	೫೯	೨೫	೫೩
೨೬	೬	೧೩	೫	೫೧	೧೬	೪೨	೨೮	೫೨	೨೬	೪೯
೨೭	೬	೧೩	೫	೫೧	೧೭	೪೧	೨೯	೪೫	೨೭	೪೫
೨೮	೬	೧೩	೫	೫೧	೧೮	೪೦	೩೦	೩೮	೨೮	೪೧
೨೯	೬	೧೩	೫	೫೧	೧೯	೩೯	೩೧	೩೧	೨೯	೩೭
೩೦	೬	೧೩	೫	೫೧	೨೦	೩೮	೩೧	೨೪	೩೦	೩೩
೩೧	೬	೧೪	೫	೫೧	೨೧	೩೭	೩೨	೧೭	೩೧	೨೯

ಕುಜಾದಿ ಪಂಚಗ್ರಹರ ಉದಯೋಚ್ಚಾಸ್ತಮಯಗಳನ್ನು ತೋರಿಸುವ ಪಟ್ಟಿ

ಗ್ರಹ	ತಾರೀಖು	ಉದಯ	ಉಚ್ಚ	ಅಸ್ತ
ಕುಜ		ಪ್ರಾತಃ.	ಹಗಲು	ಸಾಯಂ
		ಘ. ನಿ.	ಘ. ನಿ.	ಘ. ನಿ.
	೬	೫ ೧೪	೧೦ ೫೬	೪ ೫೯
	೧೬	೫ ೬	೧೦ ೪೬	೪ ೨೮
	೨೬	೪ ೫೯	೧೦ ೩೮	೪ ೧೮
	೩೦	೪ ೫೫	೧೦ ೩೫	೪ ೧೫
ಬುಧ		ಘ. ನಿ.	ಘ. ನಿ.	ಘ. ನಿ.
	೬	೪ ೪೫	೧೦ ೩೧	೪ ೧೭
	೧೬	೪ ೪೫	೧೦ ೨೯	೪ ೧೩
	೨೬	೫ ೬	೧೦ ೪೬	೪ ೨೬
	೩೦	೫ ೧೯	೧೦ ೫೨	೪ ೩೦
ಗುರು		ಮಧ್ಯಾ.	ಸಾಯಂ	ಪ್ರಾತಃ.
		ಘ. ನಿ.	ಘ. ನಿ.	ಘ. ನಿ.
	೬	೧ ೫೦	೬ ೫೫	೧ ೨೯
	೧೬	೧೨ ೪೧	೬ ೪೬	೧ ೦
	೨೬	೧೨ ೧೪	೬ ೧೯	೧೨ ೨೪
	೩೦	೧೧ ೫೬	೬ ೧	೧೨ ೬
ಶುಕ್ರ		ಪ್ರಾತಃ.	ಹಗಲು	ಸಾಯಂ
		ಘ. ನಿ.	ಘ. ನಿ.	ಘ. ನಿ.
	೬	೪ ೫೧	೨ ೫೦	೭ ೯
	೧೬	೪ ೧	೨ ೪೬	೭ ೩೪
	೨೬	೩ ೬	೨ ೪೩	೭ ೫೨
	೩೦	೩ ೩	೨ ೪೬	೭ ೪೯
ಶನಿ		ಮಧ್ಯಾ.	ಸಾಯಂ	ಪ್ರಾತಃ.
		ಘ. ನಿ.	ಘ. ನಿ.	ಘ. ನಿ.
	೬	೨ ೧೬	೮ ೨೪	೨ ೩೨
	೧೬	೧ ೫೫	೮ ೪೬	೧ ೫೧
	೨೬	೧೨ ೪೬	೮ ೬	೧ ೧೨
	೩೦	೧೨ ೨೬	೭ ೪೪	೧ ೪೨

೧೯೪೦ನೇ ವರ್ಷದಲ್ಲಿ ಸಂಭವಿಸುವ

ಗ್ರಹಣಗಳು.

ಈ ೧೯೪೦ನೇ ವರ್ಷದಲ್ಲಿ ಸೂರ್ಯಕ್ಕೆ ನಾಲ್ಕು, ಚಂದ್ರಕ್ಕೆ ಎರಡು, ಒಟ್ಟಿಗೆ ಆರು ಗ್ರಹಣಗಳು ಪ್ರಾಪ್ತವಾಗುತ್ತವೆ.

I. ಜನವರಿ ೧೩ಲ್ಲು ಸೂರ್ಯಕ್ಕೆ ಪೂರ್ಣಗ್ರಹಣ.

ಭೂಮಿಯಲ್ಲಿ ಗ್ರಹಣದ ಆರಂಭ ಪ್ರಾತಃಕಾಲದ ಮುಂಚೆ ೧೨ ಘಂಟೆ ೫೯ ಮಿನಿಟಿಗೆ.
ಪೂರ್ಣಗ್ರಹಣದ " " " ೨ " ೩ "
" ಅಂತ್ಯ ಹೊತ್ತಾರೆ " ೫ " ೩ "
ಒಟ್ಟು ಗ್ರಹಣದ " " " ೬ " ೭ "

ಭೂಮಂಡಲದಲ್ಲಿ ಈ ಗ್ರಹಣವು ಪರಿಸು ನಗರದ ರೇಖೆಯಿಂದ ಪೂರ್ವ ೧೫೦ ಅಂಶ ೩೨ ಕಲೆಯಲ್ಲಿಯೂ, ಅಕ್ಷೋತ್ತರ ೪ ಅಂಶ ೫೧ ಕಲೆಯಲ್ಲಿಯೂ ತೊಡಗಿ, ರೇಖಾಪೂರ್ವ ೧೫೯ ಅಂಶ ೧೫ ಕಲೆಯಲ್ಲಿಯೂ, ಅಕ್ಷೋತ್ತರ ೧೫ ಅಂಶ ೩೭ ಕಲೆಯಲ್ಲಿಯೂ ಪೂರ್ಣಗ್ರಾಸವಾಗಿ, ರೇಖಾಪಶ್ಚಿಮ ೧೧೧ ಅಂಶ ೧೬ ಕಲೆಯಲ್ಲಿಯೂ, ಅಕ್ಷೋತ್ತರ ೪೨ ಅಂಶ ೭ ಕಲೆಯಲ್ಲಿ ತೀರುತ್ತದೆ.

ಮೇಲಿನ ರೇಖೆ ಅಕ್ಷಗಳ ಅಂಕಸಂಖ್ಯೆಗಳಿಂದ ಏನು ಕಾಣ ಬರುತ್ತದಂದರೆ:—ಈ ಗ್ರಹಣವು ಭರತಖಂಡದಲ್ಲಿ ಅದೃಶ್ಯ; ವಿಲಾಯತಿಯೆಲ್ಲಿಯೂ ಅದು ಕಾಣುವದಿಲ್ಲ, ಅದು ಸೆಲೆಬೆಸ್ ಫಿಲಿಪ್ಪೀನ ದ್ವೀಪಗಳಿಂದ ಮಹಾಸಾಗರ ದಾಟಿ, ಮೆಜಿಕೊ ವರೆಗೂ, ಉತ್ತರ ದಲ್ಲಿ ಧ್ರುವಸಮುದ್ರದ ವರೆಗೂ, ದಕ್ಷಿಣದಲ್ಲಿ ನ್ಯೂಸೀಲಂಡ್ ಎಂಬ ನವಸಮುದ್ರದೇಶದ ಬಡಗು ಕಡೆ ವರೆಗೂ ವಿಸ್ತರಿಸುತ್ತದೆ.

II. ಜೂನ್ ೨೨ಲ್ಲು ಚಂದ್ರಕ್ಕೆ ಪೂರ್ಣ ಗ್ರಹಣ.

ಭೂಮಿಯ ಅರ್ಧ ಛಾಯೆಯೆಲ್ಲಿ ಚಂದ್ರಪ್ರವೇಶ ಮಧ್ಯಾನ್ಹದ ಮೇಲೆ ೪ ಘಂಟೆ ೧೭ ಮಿನಿಟಿಗೆ.
" ನಿಜ " " " " ೫ " ೧೪ "
ಪೂರ್ಣಗ್ರಹಣದ ಆರಂಭ " " ೬ " ೫೧ "
ಗ್ರಹಣದ ಮಧ್ಯ " " ೭ " ೪೫m "
ಪೂರ್ಣಗ್ರಹಣದ ಅಂತ್ಯ " " ೮ " ೪೦ "
ನಿಜಛಾಯೆಯಿಂದ ಚಂದ್ರ ವಿಮೋಚನೆ " " ೯ " ೧೪m "
ಅರ್ಧಛಾಯೆಯಿಂದ " " " " ೯ " ೭೧ "

ಈ ಗ್ರಹಣವು ಭರತಖಂಡದಲ್ಲಿ ದೃಶ್ಯ, ಆದರೆ ಆರಂಭದಿಂದ ಕಡೇ ವರೆಗೂ ಅಲ್ಲ, ಅಂದರೆ ಭರತಖಂಡದ ಪೂರ್ವತೀರದಲ್ಲಿ ಚಂದ್ರಗ್ರಹಣವು ಮುಟ್ಟಿದ ಮೇಲೆ, ಗ್ರಹಣಗ್ರಸ್ತವಾಗಿಯೆ ಚಂದ್ರವು ಪಶ್ಚಿಮತೀರದ ಘಟ್ಟಗಳ ಕಡೆಯಿಂದ ಉದಯವಾಗುವದು.

ಚಂದ್ರದ ವ್ಯಾಸವು ೧ ಅಂಶ ಹೇಳಿದರೆ, ಈ ಗ್ರಹಣವು ಪರಿಲೇಖವಾಗಿ ಅಂದರೆ ಅತಿ ಕ್ರಾಂತವಾಗಿ ಇದೆ. ಹ್ಯಾಗಂದರೆ ಅದರ ಪರಿಮಾಣವು = ೧.೦೬೩. ಗ್ರಹಣಕಾಲದಲ್ಲಿ ಚಂ

ದ್ರಸ್ಥಾನವು ಅಕ್ಷದಕ್ಷಿಣ ೨೩ ಅಂಶ ೫೪ ಕಲೆ ೨೫ ವಿಕಲೆಯಲ್ಲಿ, ಸೂರ್ಯಸ್ಥಾನವು ಅಕ್ಷೋತ್ತರ ೨೩ ಅಂಶ ೨೬ ಕಲೆ ೪೫ ವಿಕಲೆಯಲ್ಲಿ. ಈ ಗ್ರಹಣವು ವಿಲಾಯತಿಯಲ್ಲಿ ಅದೃಶ್ಯ.

III. ಜೂಲೈ ೭ಲ್ಲು ಸೂರ್ಯಕ್ಕೆ ಕಂಕಣಗ್ರಹಣ.

ಗ್ರಹಣದ ಆರಂಭ		ಮಧ್ಯಾನ್ಹದ ಮೇಲೆ	೫	ಘಂಟೆ	೪೨	ಮಿನಿಟಿಗೆ.
ಕಂಕಣಗ್ರಹಣದ ಆರಂಭ		"	"	೫	"	೨೪	"
"	ಅಂತ್ಯ	"	"	೬	"	೫೪	"
ಗ್ರಹಣದ	"	"	"	೮	"	೪೬	"

ಭೂಮಂಡಲದಲ್ಲಿ ಈ ಗ್ರಹಣವು ಪರಿಸು ನಗರದ ರೇಖೆಯಿಂದ ಪಶ್ಚಿಮ ೬೨ ಅಂಶ ೪೦ ಕಲೆಯಲ್ಲಿಯೂ, ಅಕ್ಷದಕ್ಷಿಣ ೨೩ ಅಂಶ ೫೫ ಕಲೆಯಲ್ಲಿಯೂ ಆರಂಭವಾಗಿ, ರೇಖಾ ಪಶ್ಚಿಮ ೬೮ ಅಂಶ ೮ ಕಲೆಯಲ್ಲಿಯೂ, ಅಕ್ಷದಕ್ಷಿಣ ೫೦ ಅಂಶ ೧೪ ಕಲೆಯಲ್ಲಿಯೂ ಕಂಕಣಗ್ರಹಣ ತೊಡಗಿ, ರೇಖಾಪಶ್ಚಿಮ ೫೫ ಅಂಶ ೨೫ ಕಲೆಯಲ್ಲಿಯೂ, ಅಕ್ಷದಕ್ಷಿಣ ೬೬ ಅಂಶ ೨೩ ಕಲೆಯಲ್ಲಿಯೂ ಕಂಕಣಗ್ರಹಣ ತೀರಿ, ರೇಖಾಪೂರ್ವ ೧೧ ಅಂಶ ೧೫ ಕಲೆಯಲ್ಲಿಯೂ, ಅಕ್ಷದಕ್ಷಿಣ ೪೫ ಅಂಶ ೪ ಕಲೆಯಲ್ಲಿಯೂ ಗ್ರಹಣವೆ ಸಮಾಪ್ತವಾಗುತ್ತದೆ.

ಈ ಗ್ರಹಣವು ಭರತಖಂಡಕ್ಕೆ ಪಾರ್ಶ್ವಗ್ರಹಣವಾಗಿರುವದರಿಂದ, ಅದು ಇಲ್ಲಿ ಅದೃಶ್ಯ. ಅದು ಪ್ರಾಮುಖ್ಯವಾಗಿ ಅತ್ಲಂತಿಕಸಾಗರ ಹಾದು, ದಕ್ಷಿಣ ಅಮೇರಿಕದ ದೊಡ್ಡ ಭಾಗದಲ್ಲಿಯೂ ಆಫ್ರಿಕದ ದಕ್ಷಿಣ ಭಾಗಾಗ್ರದಲ್ಲಿಯೂ ದೃಶ್ಯವಾಗುವದು. ಈ ಗ್ರಹಣಕಾಲದಲ್ಲಿ ಚಂದ್ರದ ಛಾಯೆಯು ಬಹಳ ದಕ್ಷಿಣ ಕಡೆಗೆ ಬೀಳ್ವಿಕ್ಕೆ ಏನು ಕಾರಣವೆಂತ ಕೇಳಿದರೆ, ಆ ಕಾಲದಲ್ಲಿ ಸೂರ್ಯಕ್ಕೆ ಚಂದ್ರಕ್ಕಿಂತ ೧ ಅಂಶ ಹೆಚ್ಚು ಇರುತ್ತದೆ. ಹ್ಯಾಗಂದರೆ ಚಂದ್ರವು ಅಕ್ಷೋತ್ತರ ೨೧ ಅಂಶ ೫೯ ಕಲೆಯಲ್ಲಿಯೂ, ಸೂರ್ಯವು ಅಕ್ಷೋತ್ತರ ೨೨ ಅಂಶ ೫೧ ಕಲೆಯಲ್ಲಿಯೂ ಇರುವದರಿಂದ, ಚಂದ್ರದ ಛಾಯೆಯು ದಕ್ಷಿಣ ಕಡೆಗೆ ಬೀಳ ಬೇಕಾಗುತ್ತದೆ.

IV. ದಶಂಬರ ೨೬ಲ್ಲು ಸೂರ್ಯಕ್ಕೆ ಖಂಡಗ್ರಹಣ.

ಗ್ರಹಣದ ಆರಂಭ		ಪ್ರಾತಃಕಾಲ	೭	ಘಂಟೆ	೫೪	ಮಿನಿಟಿಗೆ.
"	ಪೂರ್ಣಗ್ರಾಸ	"	೮	"	೧೦	"
"	ಅಂತ್ಯ	"	೮	"	೪೬	"

ಭೂಮಂಡಲದಲ್ಲಿ ಈ ಗ್ರಹಣವು ಪರಿಸು ನಗರದ ರೇಖೆಯಿಂದ ಪಶ್ಚಿಮ ೧೭ ಅಂಶ ೧೦ ಕಲೆಯಲ್ಲಿಯೂ, ಅಕ್ಷದಕ್ಷಿಣ ೬೪ ಅಂಶ ೧೫ ಕಲೆಯಲ್ಲಿಯೂ ಆರಂಭವಾಗಿ, ರೇಖಾ ಪಶ್ಚಿಮ ೪೫ ಅಂಶ ೧೪ ಕಲೆಯಲ್ಲಿಯೂ, ಅಕ್ಷದಕ್ಷಿಣ ೬೭ ಅಂಶ ೪೪ ಕಲೆಯಲ್ಲಿಯೂ ಪೂರ್ಣಗ್ರಾಸವಾಗಿ, ರೇಖಾಪಶ್ಚಿಮ ೭೫ ಅಂಶ ೨೫ ಕಲೆಯಲ್ಲಿಯೂ ಅಕ್ಷದಕ್ಷಿಣ ೬೬ ೧೫ ಕಲೆಯಲ್ಲಿಯೂ ತೀರುತ್ತದೆ.

ಈ ಗ್ರಹಣವು ಬಹಳ ದಕ್ಷಿಣಕ್ಕೂ ಹೆಚ್ಚು ಪಶ್ಚಿಮಕ್ಕೂ ಹೋಗುವದರಿಂದ, ಭರತ ಖಂಡದಲ್ಲಿ ಅದು ಅದೃಶ್ಯ. ಇದಲ್ಲದೆ ಅದು ಒಂದೆ ಘಂಟೆಯಷ್ಟು ಇದ್ದು, ಪರಿಮಾಣದಲ್ಲಿಯೂ ಬಹಳ ಸಂಣದಾಗಿರುತ್ತದೆ. ಸೂರ್ಯದ ವ್ಯಾಸವು ೧ ಅಂತ ಎಣಿಸಿದರೆ, ಈ ಗ್ರಹಣದ ಪರಿಮಾಣವು ೦.೦೩೮, ಅಂದರೆ ಸಾವಿರದಲ್ಲಿ ೩೮ ಅಂಶ.

V. ದಶಂಬರ ೧೬ಲ್ಲು ಚಂದ್ರಕ್ಕೆ ಪೂರ್ಣಗ್ರಹಣ.

ಭೂಮಿಯ ಅರ್ಧಛಾಯೆಯಲ್ಲಿ ಚಂದ್ರಪ್ರವೇಶ, ಮಧ್ಯಾನ್ಹದ ಮೇಲೆ ೫ ಘ. ೩೨ ಮಿನಿಟಿಗೆ.
" ನಿಜ " " " " ೬ " ೪೩ "
" ಪೂರ್ಣಗ್ರಾಸ ಆರಂಭ " " " ೭ " ೫೩1 "
ಗ್ರಹಣದ ಮಧ್ಯ " " " ೮ " ೩೪ "
" ಪೂರ್ಣಗ್ರಾಸಾಂತ್ಯ " " " ೯ " ೧೩ "
ಭೂಮಿಯ ನಿಜಛಾಯೆಯಿಂದ ವಿಮೋಚನೆ " " ೧೦ " ೩೨11 "
" ಅರ್ಧ " " " " ೧೧ " ೪೫ "

ಈ ಗ್ರಹಣದ ಆರಂಭವು ಭರತಖಂಡದ ಪಶ್ಚಿಮ ತೀರದಲ್ಲಿ ಕಾಣುವದಿಲ್ಲ. ಚಂದ್ರವು ಭೂಮಿಯ ಛಾಯೆಯಲ್ಲಿ ಶೇರಿ ಕೆಲವು ಸಮಯ ಆದ ಮೇಲೆ ಪಶ್ಚಿಮ ಘಟ್ಟಗಳ ಕಡೆಯಿಂದ ಮೂಡುವದು. ಈ ಗ್ರಹಣ ಸಹ ಪರಿಲೇಶವಾಗಿರುತ್ತದೆ. ಚಂದ್ರದ ವ್ಯಾಸವು ೧ ಅಂತ ಎಣಿಸಿದರೆ, ಗ್ರಹಣದ ಪರಿಮಾಣವು ೧.೩೯೦. ವಿಲಾಯತಿಯಲ್ಲಿ ಈ ಗ್ರಹಣದ ಒಂದು ಪಾಲು ಮಾತ್ರವೆ ದೃಶ್ಯ. ಈ ಗ್ರಹಣಕಾಲದಲ್ಲಿ ಚಂದ್ರಸ್ಥಾನವು ಅಕ್ಷೋತ್ತರ ೨೩ ಅಂಶ ೩೪ ಕಲೆ ೭ ವಿಕಲೆಯಲ್ಲಿ, ಸೂರ್ಯಸ್ಥಾನವು ೨೩ ಅಂಶ ೨೧ ಕಲೆ ೫೩ ವಿಕಲೆಯಲ್ಲಿ.

VI. ದಶಂಬರ ೩೧ಲ್ಲು ಸೂರ್ಯಕ್ಕೆ ಖಂಡಗ್ರಹಣ.

ಗ್ರಹಣದ ಆರಂಭ ಮಧ್ಯಾನ್ಹದ ಮೇಲೆ ೪ ಘಂಟೆ ೫೯ ಮಿನಿಟಿಗೆ.
" ಪೂರ್ಣಗ್ರಾಸ " " ೬ " ೪೪ "
" ಅಂತ್ಯ " " ೮ " ೨೮ "

ಈ ಗ್ರಹಣವು ಪರಿಸು ನಗರದ ರೇಖಾಪಶ್ಚಿಮ ೭೪ ಅಂಶ ೫೨ ಕಲೆಯಲ್ಲಿಯೂ, ಅಕ್ಷೋತ್ತರ ೩೫ ಅಂಶ ೪೯ ಕಲೆಯಲ್ಲಿಯೂ ತೊಡಗಿ, ರೇಖಾಪೂರ್ವ ೪ ಅಂಶ ೧೯ ಕಲೆಯಲ್ಲಿಯೂ, ಅಕ್ಷೋತ್ತರ ೫೨ ಅಂಶ ೩೫ ಕಲೆಯಲ್ಲಿಯೂ ಮುಗಿಯುತ್ತದೆ. ಈ ಗ್ರಹಣದ ಪರಿಮಾಣವು=೦.೭೧೦ ಭರತಖಂಡದಲ್ಲಿ ಅದೃಶ್ಯ; ಆದರೆ ವಿಲಾಯತಿಯಲ್ಲಿ ವರ್ಷಾಂತ್ಯಕ್ಕೆ ಗ್ರಹಣ ದೃಶ್ಯ, ಹ್ಯಾಗೂ ಬಹಳ ಸ್ವಲ್ಪ ಮಾತ್ರವೆ. ಇಸ್ಲಂದದಲ್ಲಿಯೂ ಗ್ರೀನ್‌ಲಂದದಲ್ಲಿಯೂ ಧೃವ ಚಕ್ರದ ವರೆಗೂ ದೊಡ್ಡದಾಗುತ್ತಾ ಹೋದರೂ, ಅಲ್ಲಿ ಸಹ ೫೦ ಅಂಗುಲ ವಿಸ್ತಾರುವದಿಲ್ಲ.

ಅವಶಿಷ್ಟ: ರೇಖೆಯು ಪರಿಸು ನಗರದಿಂದ ಎಣಿಸಿಯದೆ ಎಂತ ಮೇಲೆ ಕಾಣುತ್ತದೆ; ಕಾಲವು ಮಂಗಳೂರು ಕಾಲ. ಮಂಗಳೂರಿಗೂ ಕೆಲವು ಬೇರೆ ಸ್ಥಳಗಳಿಗೂ ಕಾಲದಲ್ಲಿ ಹೆಚ್ಚು ಕಡಿಮೆ ಏನಂದರೆ: ಮಂಗಳೂರಿನಲ್ಲಿ ಸರಿಯಾಗಿ ಮಧ್ಯಾನ್ಹ ೧೨ ಘಂಟೆ ಅಂದರೆ, ಕಣ್ಣನೂರಿನಲ್ಲಿ ೧೨ ಘಂಟೆಯ ಮೇಲೆ ೨ ಮಿನಿಟು ೯ ಸೆಕುಂಡ, ಕಲಿಕೋಟೆಯಲ್ಲಿ ೧೨ ಘ. ೩ ಮಿನಿ. ೪೪ ಸೆಕುಂಡ, ಮದ್ರಾಸಿನಲ್ಲಿ ೧೨ ಘ. ೨೧ ಮಿ. ೫೪ ಸೆಕುಂಡ ಆಗಿರುವದು. ಭೂಮಿಯ ಒಂದೊಂದು ಚಕ್ರವನ್ನು ೩೬೦ ಅಂಶಗಳಾಗಿ ವಿಭಾಗಿಸುತ್ತಾರೆ. ಒಂದು ಅಂಶಕ್ಕೆ ೬೦ ಕಲೆಗಳೆಂತಲೂ, ೧ ಕಲೆಗೆ ೬೦ ವಿಕಲೆಗಳೆಂತಲೂ ಮಾಡಿದ್ದಾರೆ. ಹೀಗಿರಲಾಗಿ ಮಂಗಳೂರಿನ ರೇಖೆಯಿಂದ ನಿರ್ಣಯಿಸುವ ಪಕ್ಷದಲ್ಲಿ ೧೫೫ ಅಂಶಕ್ಕೆ ಪೂರ್ವವಾಗಿರುವ ಸ್ಥಳದಲ್ಲಿ ೧ ಘಂಟೆ ಹೆಚ್ಚು, ೧೫೫ ಅಂಶಕ್ಕೆ ಪಶ್ಚಿಮವಾಗಿರುವ ಸ್ಥಳದಲ್ಲಿ ಒಂದು ಘಂಟೆ ಕಡಿಮೆ. ಈ ಪ್ರಕಾರ ೧೫೫ ಅಂಶಕ್ಕೆ ೧ ತಾಸು ಎಂತ ನಿಶ್ಚಯವಿರಲಾಗಿ, ೧ ಅಂಶಕ್ಕೆ ೪ ಮಿನಿಟು ೧೫ಲೆಗೆ ೪ಸೆಕುಂಡ, ಪೂರ್ವವಾದರೆ ಕೂಡಿಸ ಬೇಕು, ಪಶ್ಚಿಮವಾದರೆ ಕಳೆಯ ಬೇಕು ಎಂಬ ತಾತ್ಪರ್ಯ.

ಶರೀರಚಿಕಿತ್ಸೆ.

(೧೯೬೯ನೇ ವರ್ಷದ ಪಂಚಾಂಗದಲ್ಲಿರುವ ವಿವರದಿಂದ ಮುಂದೆ.)

4. ಪರಿಶಿಷ್ಟ.—ಈ ಶರೀರಚಿಕಿತ್ಸೆಯಲ್ಲಿ ಜಿಗಳೆಗಳ ಉಪಯೋಗವನ್ನು ಕುರಿತು ಅಲ್ಲಲ್ಲಿ ಹೇಳಿರುವದರಿಂದ ಅವು ಹ್ಯಾಗೆ ಮತ್ತು ಯಾವಾಗ ಕಚ್ಚಿಸ ಬಹುದು ಎಂಬಿತ್ಯಾದಿ ಸಂಗತಿಗಳನ್ನು ಕುರಿತು ಮುಂದೆ ವಿವರಿಸುತ್ತೇವೆ.

Engl. Leeches. ಹಿಂದು: ಜೋಕ್; ದಖ: ಜೋಂಕ್; ತಮ: ಅಟ್ಟೈಯಿ; ತೆಲು: ಜಲಗಲು, ಅಟ್ಟಲು; ತುಳು: ಪಾವೊರಿ; ಮಲ: ಅಟ್ಟ.—ಜಿಗಳೆಗಳುಹಿಂದು ಸ್ಥಾನದಲ್ಲಿ ವಿಶೇಷವಾಗಿ ಮಳೆಗಾಲದಲ್ಲಿ ಕೊಳ್ಳಚು ಕೆರೆ ಇವುಗಳ ನೆರೆಯಲ್ಲಿ ಶಿಕ್ಕುತ್ತವೆ. ಚಿಕಿತ್ಸೆಗೆ ಅವಶ್ಯವಿರುವಲ್ಲಿ ಅವುಗಳು ಪ್ರಯೋಜನವುಳ್ಳವುಗಳಾದ್ದರಿಂದ ಅವುಗಳ ವಿಷಯ ಸಾಮಾನ್ಯ ಸೂಚನೆಗಳು ಏನಂದರೆ: ಕಚ್ಚಿಸಲಿಕ್ಕಾಗುವ ಜಿಗಳೆಗಳು ಕರ್ರಗಾಗಿ, ಬೆನ್ನಿನಲ್ಲಿ* ಅರಸಿನ ಕಲೆಗಳು, ಉಭಯ ಕಡೆಗಳಲ್ಲಿ ಅರಸಿನ ಬಣ್ಣದ ರೇಖೆಗಳು ಉಳ್ಳದ್ದಾಗಿ ಇರುತ್ತವೆ. ಅವುಗಳಲ್ಲಿ ಅನೇಕ ವರಿಮಾಣಗಳಿರುತ್ತವೆ. ರಕ್ತ ಹೀರುವ ಅದರ ಶಕ್ತಿಯು ಅದರ ಪರಿಮಾಣಕ್ಕೆ ಸರಿಯಾಗಿ ಹೆಚ್ಚುಕಡಿಮೆ ಇರುತ್ತದೆ. ಜಿಗಳೆಗಳಲ್ಲಿ ಚಿಕ್ಕದು. ಅದರ ತೂಕದ ೨½ ಪಾಲಮ್ಟು, ಅದಕ್ಕಿಂತ ಸ್ವಲ್ಪ ದೊಡ್ಡದು ೪ ಪಾಲಮ್ಟು, ಇನ್ನೂ ದೊಡ್ಡದು ೫½ ಪಾಲಮ್ಟು, ತೀರಾ ದೊಡ್ಡದು ೬ ಪಾಲಮ್ಟಾದರೂ ಹೆಚ್ಚು ರಕ್ತ ಹೀರುತ್ತದೆಂದು ಕಂಡು ಬಂದದೆ. ಆದದರಿಂದ ಇಂತಿಷ್ಟೇ ರಕ್ತ ಹೀರ ಬೇಕೆಂದು ಇದ್ದರೆ, ಕೆಲವು ಚಿಕ್ಕ ಜಿಗಳೆಗಳನ್ನು ಕಚ್ಚಿಸ ಬೇಕು ಹೊರ್ತು ದೊಡ್ಡವುಗಳನ್ನು ಕಚ್ಚಿಸ ಬಾರದು. ಸಾಧಾರಣವಾಗಿ ಬರಿದಾಗಿರುವ ಸಮಯದಲ್ಲಿ ಉದ್ದದಲ್ಲಿ ಕುಮಾರು ೨ ಇಂಚಿಗೆ ವಿಸ್ತಾರದೆ ಇರುವ ಜಿಗಳೆಗಳನ್ನು ಯಾವ ಸಂಗತಿಯಲ್ಲಿ ಆದರೂ ದೋಷವಿಲ್ಲದೆ ಉಪಯೋಗಿಸ ಬಹುದು. ಹಿಂದುಸ್ಥಾನದಲ್ಲಿ ಶಿಕ್ಕುವ ಬಹಳ ಚಿಕ್ಕ ಜಿಗಳೆಗಳಾದರೂ, ಅವುಗಳು ಕಚ್ಚಿ ಮಾಡುವ ಬಹಳ ಘಾಯಗಳ ದೆಶೆಯಿಂದಲೂ, ಅವುಗಳನ್ನು ಕಚ್ಚಿಸಲಿಕ್ಕೆ ಬಹಳ ಸಮಯ ಹಿಡಿಯುವದರಿಂದಲೂ, ಅವುಗಳನ್ನು ಕಚ್ಚಿಸಿದ ಮೇಲೆ ಚಿಕ್ಕ ಚಿಕ್ಕ ರಕ್ತದ ಧಾರೆಗಳು ಹರಿದು ಅವುಗಳ ಬಾಯಿ ಕಟ್ಟಲಿಕ್ಕೆ ಪ್ರಯಾಸವಾಗುವ ದೆಶೆಯಿಂದಲೂ ಅವುಗಳನ್ನು ಉಪಯೋಗಿಸಲಿಕ್ಕೆ ಆಕ್ಷೇಪಿಸುತ್ತಾರೆ. ಅದಲ್ಲದೆ ಬಹಳ ದೊಡ್ಡ ಜಿಗಳೆಗಳನ್ನಾದರೂ ಕಚ್ಚಿಸುವದರಿಂದ ಅಗಲವಾದ ಘಾಯ ಉಂಟು ಮಾಡಿ, ಆ ಘಾಯದ ಕೆಟ್ಟ ಕಲೆ ಉಳಿಯುತ್ತದೆ; ಆದದರಿಂದ ಅದನ್ನು ಕುರಿತು ಸಹಾ ಆಕ್ಷೇಪಿಸುತ್ತಾರೆ. ಇದು ಮುಖ್ಯವಾಗಿ ಬಾಲ್ಯಪ್ರಾಯದ ಮಕ್ಕಳ ವಿಷಯದಲ್ಲಿ ಸಮ್ಮಂಧಿಸುತ್ತದೆ. ಒಂದೆರಡು ಜಿಗಳೆಗಳನ್ನು ಮಾತ್ರ ಕಚ್ಚಿಸ ಬೇಕಾದರೆ, ಅವುಗಳನ್ನು ಕೈಯಲ್ಲಿ ಹಿಡಿದು ಕಚ್ಚಿಸ ಬೇಕಾದ ಜಾಗಕ್ಕೆ ಹಚ್ಚ ಬೇಕು. ಕೆಲವುಗಳು ಕಚ್ಚಿಸುವದಾದರೆ, ಅವುಗಳನ್ನು ಒಂದು ವಾಯ್ನಗ್ಲಾಸಿನಲ್ಲಿ ಹಾಕಿ, ಅವು ಮೈಗೆ ಕಚ್ಚುವ ವರೆಗೆ ಆ ಗ್ಲಾಸನ್ನು ಹಚ್ಚಿ ಹಿಡಿಯ ತಕ್ಕದ್ದು. ಕಚ್ಚಿಸ ತಕ್ಕ ಜಾಗವು ಮೊದಲಾಗಿ ತುಚೆ ಮಾಡಿ, ರೋಮವೇನಾದರೂ ಇದ್ದರೆ ಉದುರಿಸಿ ಸಾಫ ಮಾಡ ಬೇಕು. ಹಿಡಿದ ಕೂಡಲೆ ಜಿಗಳೆಗಳು ಕಚ್ಚುವ ಹಾಗೆ ಮಾಡ ಬೇಕಾದರೆ, ಮೈ ಚರ್ಮವನ್ನು ಚನ್ನಾಗಿ ಸಾಬುನು ಹಾಕಿ ನೀರಿನಿಂದ ತೊಳದು ಅರಿಸ ಬೇಕು. ಹಿಂದೆ ಯಾವಾ

ಗಲಾದರೂ ಮುಲಾಮು ಹಚ್ಚಿದ್ದಿದ್ದರೆ, ಈ ಪ್ರಕಾರ ತೊಳೆಯುವದು ವಿಶೇಷ ಅಗತ್ಯ. ಜಿಗಣೆಯು ಹಸಿದು ಇದ್ದರೆ ಬೇಗ ಕಚ್ಚುತ್ತದೆ; ಇಲ್ಲವಾದರೆ ಕಚ್ಚಿಸುವದು ಪ್ರಯಾಸವಾದ್ದರಿಂದ ಕೆಳಗೆ ಹೇಳಿರುವ ಯಾವದಾದರೂ ಉಪಾಯ ಮಾಡ ಬಹುದು:

೧. ಅವುಗಳನ್ನು ನೀರಿನಿಂದ ತೆಗದು, ಒಣಗಿದ ಬೆಚ್ಚಗಾದ ನಸ್ತ್ರದ ಮೇಲೆ ೧೦ ನಿಮಿಷಗಳ ವರೆಗೆ ಹಾಕಿ ಬಿಡ ಬೇಕು.

೨. ಕಚ್ಚಿಸ ತಕ್ಕ ಮೈಭಾಗದ ಮೇಲೆ ಕೆನೆಯಾಗಲಿ, ಸಕ್ಕರೆ ಹಾಕಿದ ಹಾಲಾಗಲಿ ಚಿಮಿಕಿಸ ಬೇಕು.

೩. ಚರ್ಮದ ಮೇಲೆ ಚಿಕ್ಕದೊಂದು ಗೀರು ಆಗಲಿ ಘಾಯವಾಗಲಿ ಮಾಡಿ, ಅದರ ಮೇಲೆ ಸ್ವಲ್ಪ ರಕ್ತ ಚೆಲ್ಲ ಬೇಕು. ಬೇರೆ ಯಾವದೂ ನಡಿಯುದಿದ್ದಲ್ಲಿ, ಇದು ಬಹುಕಾ ಕೈಗೂಡಿಯದೆ. ಇದಲ್ಲದೆ ಗಂಧಕದ ಹೊಗೆ, ಇಲ್ಲವೆ ಶರ್ಕರದ ವಾಸನೆ, ಇಲ್ಲವೆ ಹೊಗೆ ಸೊಪ್ಪಿನ ಹೊಗೆಯು ಕೋಣೆಯಲ್ಲಿ ಇದ್ದರೆ, ಜಿಗಣೆಗಳು ಕಚ್ಚುವದೇ ಇಲ್ಲ ಎಂಬದು ಸಹಾ ನೆನಪಿನಲ್ಲಿ ಇಡ ತಕ್ಕದ್ದು. ಜಿಗಣೆಗಳನ್ನು ಪ್ರತ್ಯೇಕ ಒಂದು ಜಾಗೆಯಲ್ಲಿ ಕಚ್ಚಿಸ ಬೇಕಾದರೆ, ಬರಹ ಒತ್ತುವ ಕಾಗದದ (Blotting Paper) ಒಂದು ತುಂಡನ್ನು ತೆಗದು, ಎಷ್ಟು ಜಿಗಣೆಗಳು ಇರುತ್ತವೋ ಕಚ್ಚಿಸುವ ಸ್ಥಳಗಳಿಗೆ ಸರಿಯಾಗಿ ಅಷ್ಟು ತೂತುಗಳನ್ನು ತೆಗದು, ಆ ಕಾಗದವನ್ನು ಅದಕ್ಕೆ ಇಟ್ಟು, ಅದರ ಮೇಲೆ ಜಿಗಣೆಗಳನ್ನು ಬಿಡ ಬೇಕು. ಮತ್ತು ಆ ಜಾಗವನ್ನು ಬಂದು ಗಾಜಿನ ಬಟ್ಟಲಿನಿಂದ ಮುಚ್ಚ ಬೇಕು. ಈ ಪ್ರಕಾರ ಮಾಡಲಾಗಿ, ದೊರಗಾದ ಕಾಗದದ ಮೇಲೆ ಹಾಕಿರುವ ಆ ಜಿಗಣೆಗಳು ಇತ್ತತ್ತ ಹರಿದು, ತೂತುಗಳು ಇರುವಲ್ಲಿ ಬಂದು, ಹೊರ ತೋರುವ ಮೈಬಿಂದುಗಳಿಗೆ ಕಚ್ಚುತ್ತವೆ. ಆ ಮೇಲೆ ಆ ಕಾಗದಕ್ಕೆ ನೀರು ಹಚ್ಚಿ, ಅದನ್ನು ಸುಲಭವಾಗಿ ತೆಗದು ಬಿಡ ಬಹುದು. ರಕ್ತ ಹೀರಿ ಆದ ಮೇಲೆ ಜಿಗಣೆಗಳು ೧೦-೧೫ ನಿಮಿಷಗಳೊಳಗೆ ಕೆಳಗೆ ಬೀಳುತ್ತವೆ. ಅಷ್ಟರೊಳಗೆ ಕೆಳಗೆ ಬೀಳದಿದ್ದರೆ, ಇಲ್ಲವೆ ಹೀರಿದ್ದು ಸಾಕೆಂತ ಕಂಡರೆ, ಅವುಗಳನ್ನು ಕಿತ್ತು ತೆಗೆಯಬೆ, ಅವುಗಳ ಮೇಲೆ ಸ್ವಲ್ಪ ಉಪ್ಪಾಗಲಿ ಶರ್ಕರದ ನೀರಾಗಲಿ ಚಿಮಿಕಿಸುವದು; ಇಲ್ಲವೇ ನೀರುಳ್ಳಿಯ ತುಂಡು ಅವಕ್ಕೆ ಹಚ್ಚಿದರೆ, ಬಾಯಿ ಬಿಡುತ್ತವೆ. ನೀರುಳ್ಳಿ ಹಚ್ಚುವದು ಬಂಗಾಳದಲ್ಲಿ ನಡಿಯುತ್ತದೆ. ಜಿಗಣೆ ಕಚ್ಚಿದ ಘಾಯದಿಂದ ರಕ್ತ ಇನ್ನು ಹರಿಯುವದಕ್ಕೆ ಒಂದು ಉಣ್ಣೆ ವಸ್ತ್ರದ ತುಂಡನ್ನು ಬಿಸಿ ನೀರಿನಲ್ಲಿ ಅದ್ದಿ, ಆ ಜಾಗದ ಮೇಲೆ ಇಟ್ಟು ಶೇಕ ಕೊಡುವದು. ಆದರೆ ಹರಿಯುವದು ನಿಲ್ಲಿಸ ಬೇಕೆಂದು ಇದ್ದರೆ, ಸುಟ್ಟ ವಸ್ತ್ರದ ಚಿಂದಿಯನ್ನು ಬೆರಳಿನಿಂದ ಆ ಘಾಯಕ್ಕೆ ಹಚ್ಚಿ, ಸ್ವಲ್ಪ ಹೊತ್ತು ಒತ್ತಿ ಹಿಡಿಯ ಬೇಕು. ಜೊಗೆಸೊಪ್ಪಿನ ತುಂಡಾಗಲಿ, ಜಾಡಹುಳ್ಳದ ಗೂಡಾಗಲಿ, ಟೊಪ್ಪಿಯಿಂದ ತೆಗದ ಬಂದಿಷ್ಟು ಉಣ್ಣೆಯಾಗಲಿ ಹಚ್ಚುವದು ಅರಿವೇ ಬೂದಿಗಿಂತ ವಾಸಿ. ಇವುಗಳಲ್ಲಿ ಯಾವದರಿಂದಾದರೂ ನಿಲ್ಲದೆ ಇದ್ದರೆ, ಪಟಿಕಾರದ ಹುಡಿ ಇಲ್ಲವೇ ಸ್ವಲ್ಪ ಮೈಲುತುತ್ತಿನ ಹುಡಿ ಆ ಘಾಯದ ಮೇಲೆ ಚಿಮಿಕಿಸಲಾಗಿ ರಕ್ತ ಹರಿಯುವದು ನಿಂತು ಹೋಗುವದು.

ಜಿಗಣೆಗಳು ಮೂಗಿನ ಸೊಳ್ಳೆಗಳಲ್ಲಿ ಆಗಲಿ ಗುದದ್ವಾರದಲ್ಲಿ ಆಗಲಿ ನವದ್ವಾರಗಳಲ್ಲಿ ಯಾವದರಲ್ಲಿ ಆಗಲಿ ಶಿಕ್ಕೊಂಡರೆ, ಶರ್ಕರದ ನೀರಿನ ಇಲ್ಲವೆ ಉಪ್ಪುನೀರಿನ ಪಿಚ್ಕಾರಿ ಹೊಡೆದು ಇಲ್ಲವೆ ಆ ನೀರು ತಾಗಿಸಿ, ಅವುಗಳನ್ನು ಬಿಡಿಸ ಬಹುದು. ಜಿಗಣೆಗಳನ್ನು ವಿಶೇಷವಾದ ಯಾವದೊಂದು ನರಕ್ಯಾಗಲೀ ಕಣ್ಣುರೆಪ್ಪೆಗಳಿಗಾಗಲೀ ಕಚ್ಚಿಸ ಬಾರದು. ಗರ್ಭಿಣಿ

ಸ್ತ್ರೀಯರ ಸ್ತನಕ್ಕೂ ಚರ್ಮ ಸಡಿಲಿರುವ ಅಂಡ ಉಪಸ್ಥ ಮುಂತಾದ ಮರ್ಮಸ್ಥಾನಗಳಿಗೂ ಕಚ್ಚಿಸ ಬಾರದು; ಕಚ್ಚಿಸಿದ್ದಾದರೆ ಏನಾದರೂ ಅಪಾಯ ಬಂದೀತು. ಅದಲ್ಲದೆ ಚಿಕ್ಕ ಮಕ್ಕಳಿಗೆ ವೈದ್ಯನ ಅಪ್ಪಣೆ ಹೊರ್ತು ಕಚ್ಚಿಸುವದು ಸರಿಯಲ್ಲ; ಮತ್ತು ಕಚ್ಚಿಸುವದಕ್ಕಾದರೂ ಬಹಳ ಜಾಗ್ರತೆ ಇರ ಬೇಕು. ಯಾಕಂದರೆ ದೊಡ್ಡವರಿಗಿಂತ ಮಕ್ಕಳ ರಕ್ತವು ಹೆಚ್ಚು ಸರಾಗವಾಗಿ ಹರಿಯುವದು, ಕಚ್ಚಿದ್ದನ್ನೇ ನಿಲ್ಲಿಸಲಿಕ್ಕೆ ಆಗುವದಿಲ್ಲ; ಅದರಿಂದ ಮಕ್ಕಳಿಗೆ ಕಚ್ಚಿಸುವದಾದರೂ, ಅನುಕೂಲವಿರುವಲ್ಲಿ ಎಲುಬಿನ ಮೇಲೆ ಇಲ್ಲವೆ ಎಲುಬಿನ ಸವಿಾಪವಾದರೂ ಕಚ್ಚಿಸ ಬೇಕು. ಯಾಕಂದರೆ ಹೆಚ್ಚು ರಕ್ತ ಹೀರಿದ ಪಕ್ಷಕ್ಕೆ, ಎಲುಬಿನ ಮೇಲೆ ಒತ್ತಿ ಘಾಯ ಮುಚ್ಚಲಿಕ್ಕೆ ಆಗುವದು.

ಜಿಗಣೆಗಳನ್ನು ಕಚ್ಚಿಸುವದಕ್ಕೆ ಬೆಳಿಗಿನ ಸಮಯವು ಒಳ್ಳೇದು. ಸಾಯಂಕಾಲದ ಹೊತ್ತಿನಲ್ಲಿ ಮಕ್ಕಳಿಗೆ ಕಚ್ಚಿಸಿದರೆ, ಸವಿಾಪ ಉಳ್ಳವರು ಮಲಗಿರುವ ಸಮಯದಲ್ಲಿ ಆ ಘಾಯದಿಂದ ಬಹಳ ರಕ್ತ ಸೋರಿ ಮಗುವಿಗೆ ಅಪಾಯ ಬಂದೀತು; ಈ ಪ್ರಕಾರ ಅನೇಕ ಕಡೆಗಳಲ್ಲಿ ಅಪಾಯ ಬಂದಿರುತ್ತದೆ.

ಇದಲ್ಲದೆ ಮಕ್ಕಳಾಗಲಿ ದೊಡ್ಡವರಾಗಲಿ ಜಿಗಣೆ ಕಚ್ಚಿಸಿ ಕೊಂಡ ಸಮಯದಲ್ಲಿ ಮಲಗಿ ನಿದ್ರೆ ಮಾಡ ಬಾರದು. ಒಂದು ವರ್ಷದ ಮೇಲೆ ೬ ವರ್ಷದ ಒಳಗಿನ ಮಕ್ಕಳಿಗೆ ಒಂದೊಂದು ವರ್ಷ ಪ್ರಾಯಕ್ಕೆ ಒಂದು ಜಿಗಣೇ ಪ್ರಕಾರ ಕಚ್ಚಿಸ ಬಹುದು. ಆ ಪ್ರಾಯದ ಮೇಲೆ ಪ್ರಬುದ್ಧತೆ ಬರುವ ವರೆಗೆ ಸಾಧಾರಣವಾಗಿ ೬ಕ್ಕಿಂತ ಹೆಚ್ಚು ಕಚ್ಚಿಸುವದು ಅವಶ್ಯವಾಗಲಿಕ್ಕಿಲ್ಲ.

ರೋಗಗಳೂ ಇವುಗಳಲ್ಲಿ ಪ್ರಯೋಗವಾಗುವ ಔರೌಷಧಗಳೂ ಇವುಗಳನ್ನು ಕುರಿತು ನಿಘಂಟುರೂಪವಾದ ಸೂಚನಾಸಾರವು.

ಇಂದ್ರಿಯಸ್ಖಲನ, (ನಷ್ಟೇಂದ್ರಿಯ,) ತನ್ನಷ್ಟಕ್ಕೆ ವೀರ್ಯ ಹೋಗುವದು

Spermatorrhœa, Involuntary Seminal Discharges.

ರೋಗಲಕ್ಷಣ: ಪುರುಷರಿಗೆ ಈ ರೋಗವು ಅತಿರೇಕ ಸ್ತ್ರೀಸಂಗಮದಿಂದಾಗಲಿ ಸ್ವಭಾವವಿರೋಧಾನುಭೋಗದಿಂದಾಗಲಿ, ದುರ್ಭೋಗದಿಂದಾಗಲಿ[1] ಇಂದ್ರಿಯ ಶಿಥಿಲವೂ ತೆಳುವೂ ನಿಸ್ತೇಜವೂ ಆಗಿ ಹೋಗಿ, ಮಾನಸಿಕಯತ್ನವಿಲ್ಲದೆ ಸ್ಖಲನವಾಗುವದು. ಇಂದ್ರಿಯವು ಸ್ವಪ್ನದ ದೆಶೆಯಿಂದ ಸಹಾ ಹೋಗುವದು. ಒಂದೊಂದು ಸಾರಿ ಮೂತ್ರದಲ್ಲಿಯೂ ಹೋಗುವದು. ಈ ರೋಗವು ಇತರ ಅನೇಕ ಸಂಕಟಕರವಾದ ರೋಗಗಳಿಗೆ ಕಾರಣವಾಗುವದಲ್ಲದೆ ಇಂದ್ರಿಯಚೇತನವೇ ನಷ್ಟವಾಗಿ, ಶರೀರಕ್ಷೀಣತೆ, ಅಶಕ್ತಿ, ಅರುಚಿ, ದೃಷ್ಟಿಮಾಂದ್ಯ, ಬೆನ್ನೆಲುಬಿನಲ್ಲಿಯೂ ತಲೆಯಲ್ಲಿಯೂ ನೋವು, ಮೈಬಿಸುಪು, ನಿದ್ರೆಯಲ್ಲಿ ಉಪದ್ರಕರವಾದ ಸ್ವಪ್ನಗಳು, ಅರಿವು ಮರವು, ಕಡೆಗೆ ಶರೀರದ ಮತ್ತು ಮನ

1) ಈ ವಿಷಯವನ್ನು ಕುರಿತು "ತರುಣಹಿತೋಪದೇಶ"ವೆಂಬ ಚಿಕ್ಕ ಪುಸ್ತಕದ ೬ನೇ ಪಾನಿನಿಂದ ಮುಂದೆ ಓದಿಕೊಳ್ಳ ಬೇಕು. ಈ ಪುಸ್ತಕವು ಬಾಸೆಲ್ ಮಿಶ್ಶನ್ ಪುಸ್ತಕಶಾಲೆಯಲ್ಲಿ ದೊರಕುತ್ತದೆ. (ಕ್ರಯ ೬ ಪೈ.)

ಸ್ಸಿನ ಚೇತನಗಳೇ ಕುಂದಿ ಹೋಗುವದು, ಮತ್ತು ಅಲ್ಪ ಆಯುಷ್ಯವೇ ರೋಗಿಯ ಗತಿಯಾಗುವದು.

ಚಿಕಿತ್ಸೆ: ಪ್ರಥಮತಾ ಈ ಇಂದ್ರಿಯಸ್ಖಲನೆಗೆ ಕಾರಣವಾದ ಸರ್ವ ದುರಭ್ಯಾಸಗಳನ್ನು ಮನಃಪೂರ್ವಕ ಪಶ್ಚಾತ್ತಾಪದಿಂದ ಪೂರ್ಣವಾಗಿ ಬಿಟ್ಟು ಬಿಟ್ಟು, ಮನೋವಾಕ್ಕಾಯಗಳಲ್ಲಿ ಅವುಗಳಿಂದ ತೊಲಗ ಬೇಕು. ಹಾಗೆ ಮಾಡಿದರೆ ಮಾತ್ರವೇ ತಕ್ಕ ಪಥ್ಯವೂ ಆರೋಗಣೆಯೂ ತೇಜವರ್ಧಕ ಔಷಧವೂ ಫಲಕರವಾಗಿ ಪ್ರವರ್ತಿಸುವವು ಹೊರ್ತು ಅನ್ಯಥಾ ಅಲ್ಲ. ಔಷಧವೇನಂದರೆ: ರಾತ್ರೆಯಲ್ಲಿ ಮಲಗುವಾಗ ಕರ್ಪೂರ (೧೦೩) ಕೊಡುವದು. ಕಾಮೋದ್ರೇಕದೊಡನೆ ಇಂದ್ರಿಯಸ್ಖಲನವಾದರೆ (Bromide of Potassium) ಬ್ರೊಮ್ಯುಡ್ ಒಫ್ ಪೊಟೆಸಿಯಮ್ ಎಂಬ ಲವಣವು ೨೦ ಗ್ರೇನ್ ಪಿಡಿದು ೩೦ ಗ್ರೇನ್ ವರೆಗೆ (೫-೭½ ಮಂಜೂಟಿತೂಕ) ಒಂದು ವೈನ್ ಗ್ಲಾಸ್ ನೀರಿನಲ್ಲಿ ಹಾಕಿ ಕಲಕಿಸಿ, ರಾತ್ರಿಯಲ್ಲಿ ಮಲಗುವಾಗ ತಕ್ಕೊಂಡರೆ, ಬಹಳ ಗುಣಕರವಾಗುವದು. ಈ ಸ್ಖಲನವು ಒಂದೊಂದು ಸಂಗತಿಯಲ್ಲಿ ಕಿರಿಹೊಟ್ಟೆಯಲ್ಲಿ ಶೇರಿರುವ ಹುಳಗಳ ದೆಶೆಯಿಂದ ಬರುವದುಂಟು; ಅದಕ್ಕೆ ತಕ್ಕ ಚಿಕಿತ್ಸೆ ಮಾಡಿ ರೋಗವನ್ನು ಪರಿಹರಿಸಿ ಕೊಳ್ಳ ಬೇಕು.

೧೦೩. ನಷ್ಟೇಂದ್ರಿಯದಲ್ಲಿಯೂ ಸ್ವಯತ್ನವಿಲ್ಲದೆ ಇಂದ್ರಿಯ ಸ್ಖಲನವಾಗುವ ರೋಗದಲ್ಲಿಯೂ ಕರ್ಪೂರದಷ್ಟು[1] ಗುಣಕರವಾದ ಔಷಧ ಬೇರೊಂದು ಇಲ್ಲ. ೪ ಗ್ರೇನ್

☞ ಮೇಲಿನ ಸೂಚನಾಸಾರದಲ್ಲಿ ಔಷಧಗಳ ತೂಕವಾಗಲಿ ಅಳತೆಯಾಗಲಿ ಇಂಗ್ಲಿಷ ಹೆಸರಿನಿಂದ ಕೊಟ್ಟಿರುವಲ್ಲಿ ಅವುಗಳಲ್ಲಿ ಒಂದೊಂದು ಈ ಊರಿನ ಯಾವ ತೂಕಕ್ಕೂ ಅಳತೆಗೂ ಸರಿ ಬೀಳುತ್ತದೆಂಬದು ಮುಂದಿನ ಪಟ್ಟಿಯಿಂದ ಗೊತ್ತು ಮಾಡ ಬಹುದು. ಔಷಧಗಳನ್ನು ತಯಾರು ಮಾಡುವಾಗ ಇದನ್ನು ಸರಿ ನೋಡಿ ಕೊಳ್ಳ ಬೇಕು. ೧೮೭೯ನೇ ಇಸವಿಯ ಪಂಚಾಂಗದ ೭೬ನೇ ಪಾನಿನ ಬುಡದಲ್ಲಿ ಕೊಟ್ಟ ಪಟ್ಟಿಯಲ್ಲಿ ಇರುವ ಸ್ವಲ್ಪ ಹೆಚ್ಚು ಕಡಿಮೆಗಳು ಇದರಲ್ಲಿ ತಿದ್ದಿ ಸರಿ ಮಾಡಿರುತ್ತವೆ.

ತೂಕ:				ಅಳತೆ:			
೧ಗ್ರೇನ್	= ೧ಗುಲ್ಗಂಜಿ	= ½ಮಂಜೂಟಿತೂಕ		೧ ಎಮಿನಿಮ್	= ೧ ಸಾಧಾರಣ ತಟುಕು *		
೫೦ "	= ½ಡ್ರಮ್	= ೭½ ಮಂಜೂಟಿತೂಕ		೬೦ "	= ೧ ಡ್ರಮ್	= ೧ ಚಾಸೌಟು	
೪೮ "	= ¾ "	= ೧ಪಾವಲಿತೂಕ		೪ ಡ್ರಮ್	= ½ ಔನ್ಸ್	= ೧ ಮೇಜನಸೌಟು	
೬೦ "	= ೧ "	= ೧½ "		೮ "	= ೧ "	= ೨ "	
೯೬ "	= ೧¼ "	= ½ರೂಪ್ಯಾತೂಕ (ತೊಲೆ)		೧ ಔನ್ಸ್	= ಶುಮಾರು ½	ಕುಡುತೆ	
೧೯೨ "	= ೩½ "	= ೧ರೂಪ್ಯಾತೂಕ (ತೊಲೆ)		೪ "	= " ೧ "	= ½ ಸೇರು	
೧ಔನ್ಸ್	= ೮ "	= ೨½ "	"	೨೦ "	= ½ ಶೀಸೆ	= ೧ ಪ್ಯಾಂಟ್	
೨ "	= ೧೬ "	= ೫½ "	"	೪೦ "	= ೧ "	= ೨ "	

*ತಟುಕು ವಿದ್ಯಮಾನಾನುಸಾರವಾಗಿ ಚಿಕ್ಕದು ದೊಡ್ಡದು ಆಗುವದುಂಟು.

1) *Engl.* Camphor. ಹಿಂದು: ಕಾಪೂರ್; ತಮು: ಕರುಪ್ಪುರಮ್, ಕರ್ಪ್ಪೂರಮ್; ತೆಲು: ಮಲ: ಕರ್ಪೂರಮ್; ಮಹಾ: ಕಾಪೂರ್.—ಅಂಗಡಿಗಳಲ್ಲಿ ಮಾರುವ ಕರ್ಪೂರ ಹಲವು ವಿಧ ಉಂಟು. ಔಷಧಪ್ರಯೋಗಕ್ಕೆ ಬೇಕಾದದ್ದು ಬಿಳಿದಾಗಿಯೂ ಸ್ವಚ್ಛವಾಗಿಯೂ ಹರಳುಗಳುಳ್ಳದ್ದಾಗಿಯೂ ಇರುವ

ಕರ್ಪೂರಕ್ಕೆ ಅರ್ಧ ಗ್ರೇನ್ ಅಫೀಮ್ ಚನ್ನಾಗಿ ಕೂಡಿಸಿ, ಮಾತ್ರೆ ಮಾಡಿ, ರಾತ್ರಿಗೆ ಮಲಗುವಾಗ ತಕ್ಕೊಳ್ಳುವದು. ಈ ಪ್ರಕಾರ ಕೆಲವು ರಾತ್ರಿಗಳ ವರೆಗೆ ತಕ್ಕೊಂಡಲ್ಲಿ ರೋಗವು ಇಳಿತರವಾಗುವದು.

ಉಗುಳುರೋಗ (ಜೊಲ್ಲು ಹೆಚ್ಚುವದು) Salivation.

ರೋಗಲಕ್ಷಣ: ಹೊಗೆಸೊಪ್ಪು ಮುಂತಾದ ಯಾವದಾದರೂ ಉತ್ತೇಜಕ ಪದಾರ್ಥವನ್ನು ಬಾಯಿಯಲ್ಲಿ ಹಾಕಿ ಜಗಿದರಿಂದಾಗಲಿ, ಶೀದಿದರಿಂದಾಗಲಿ, ವಸಡು ಮೆತ್ತನ ಮಾಡುವ ಇಲ್ಲವೆ ಉಬ್ಬಿಸುವ ಸ್ವಭಾವವುಳ್ಳ ಲೋಹರಸದ ಇಲ್ಲವೆ ಸಸ್ಯಾದಿ ಮೂಲಕ ಯಾವದೊಂದು ಪದಾರ್ಥದ ಸೇವನೆಯಿಂದಾಗಲಿ, ಉಗುಳು ಮಿತಿ ಮೀರಿ ಬರುವದು. ಹಲ್ಲಿನ ವಸಡುಗಳು ಮೆತ್ತಗಾಗುವವು, ಬಾತಿ ಹೋಗುವವು, ಹಲ್ಲುಗಳು ಸಡ್ಲಾಗುವವು, ಮತ್ತು ಬಾಯಿಗೆ ಅಸಹ್ಯವಾದ ದುರ್ಗಂಧ ಬರುವದು. ಈ ಜೊಲ್ಲು ಸುರಿಯುವ ರೋಗವು ವಿಶೇಷವಾಗಿ ಪಾದರಸದ ಉಪಯೋಗದಿಂದ ಬರುತ್ತದೆ. ಅದಲ್ಲದೆ ತಾಂಬ್ರ, ಸುರುಮು, ಸತುವು, ಆಫೀನಿ, ಇವುಗಳ ಸಂಬಂಧವಾಗಿಯೂ ಉಗುಳುರೋಗ ಬರುವದುಂಟು.

ಚಿಕಿತ್ಸೆ: ಉಗುಳುರೋಗಕ್ಕೆ ೭೬ನೇ ಅಂಕೆಯಲ್ಲಿ ಹೇಳಿದ ಪಟಕಾರ ಆಗಲಿ, ೭೭ನೇ ಅಂಕೆಯಲ್ಲಿ ಹೇಳಿದ ಬಿಳಿಗಾರದ ನೀರು ಆಗಲಿ ಬಾಯಿಯಲ್ಲಿ ಇಟ್ಟು ಮುಕ್ಕುಳಿಸ ಬೇಕು. ಇಲ್ಲವೆ ೧೦೧ನೇ ಅಂಕೆಯಲ್ಲಿ ಹೇಳಿದ ಪ್ರಕಾರ ಕಾಚಿನ ತುಂಡು ಬಾಯಿಯಲ್ಲಿ ಇಟ್ಟು ದ್ರವಿಸಿ ಕೊಳ್ಳುವದು. ಇದರಿಂದ ಉಗುಳುರೋಗ ಹರ.

ಉದರಗ್ರಂಥಿ ಎಂಬ ಅಂತರಿಂದ್ರಿಯ ದಪ್ಪವಾಗೋಣ (ಪ್ಲೀಹೋದರ, "ಜರಗೆಂಡೆ")

Enlargement of the Spleen or Ague Cake.

ರೋಗಲಕ್ಷಣ: ಪ್ಲೀಹವೆಂಬದು ಎಡ ಭಾಗಕ್ಕೆ ಮಾಲಿರುವ, ಚಟ್ಟಿಯಾಗಿಯೂ, ಸ್ವಲ್ಪ ವೃತ್ತಾಕಾರವಾಗಿಯೂ ಮೆತ್ತಣವಾಗಿಯೂ ಇರುವ, ಕಿರಿಹೊಟ್ಟೆಯ ಒಂದು ಇಂದ್ರಿಯವಾಗಿರುತ್ತದೆ. ದೀರ್ಘಕಾಲದ ಛಳಿಜ್ವರದಿಂದಾಗಲಿ, ಈ ಊರಿನ ಬೇರೆ ತರದ ಜ್ವರದ ದೆಶೆಯಿಂದಾಗಲಿ ರಕ್ತ ಹೀರಿ ಗಟ್ಟಿಯಾದದರಿಂದ ಆ ಪ್ಲೀಹವು ಅಂದರೆ ಕಿಬ್ಬೊಟ್ಟೆಯ ಎಡಕ್ಕೆ ಬಾತು ಹೋಗುವದು. ಜ್ವರ ನಿಂತ ಮೇಲೆ ಆಗುವ ಈ ಉಬ್ಬಿನ ದೆಶೆಯಿಂದ ಕಿರಿಹೊಟ್ಟೆಯ ಎಡಭಾಗದಲ್ಲಿ ನೋವು ತೊಡಗಿ ಕೆಲವು ಸಾರಿ ಫಕ್ಕನೇ ಹೆಚ್ಚುತ್ತಾ ಶ್ವಾಸ ಕಟ್ಟುವದು, ಆಯಾಸ, ಅಗ್ನಿಮಾಂದ್ಯ ಉಂಟಾಗುವದು. ಇತರ ಚಿನ್ಹೆಗಳು ರೋಗಿಯ ಶರೀರಪ್ರಕೃತಿಗೆ ಅನುಸಾರವಾಗಿ ತೋರುವವು.

ಗಡ್ಡೆಗಳಾಗಿದ್ದು, ತೀವ್ರ ಭೇದಕ ಪರಿಮಳವೂ, ಕಟುವಾದ ರುಚಿಯೂ ಉಳ್ಳದ್ದಾಗಿ ಇರುವದು. ಇಂಥಾದ್ದನ್ನು ಪರೀಕ್ಷಿಸಿ ಕೊಂಡು ಕೊಳ್ಳ ಬೇಕು. ಯಾಕಂದರೆ ಅಂಗಡಿಗಳಲ್ಲಿ ಮಾರುವ ಕರ್ಪೂರವು ಬಹುತಾ ಕೆಲಸಕ್ಕೆ ಬಾರದಂಥಾದ್ದಾಗಿ ಇರುತ್ತದೆ. ಕರ್ಪೂರವನ್ನು ಪ್ರಾಯಪ್ರಬುದ್ಧರು ೨ರಿಂದ ೫ಗ್ರೇನ್ ವರೆಗೆ (೧ಗ್ರೇನ್ = ೧ ಗುಲಗುಂಜಿತೂಕ) ಏನಾದರೂ ಬಾಧಕವಿಲ್ಲದೆ ತಕ್ಕೊಳ್ಳ ಬಹುದು.

ಚಿಕಿತ್ಸೆ: ಕೆಳಗೆ ಹೇಳಿರುವ ಪ್ರಕಾರ ಅನ್ನಭೇದಿಯನ್ನೂ (೧೦೪) ಮಲಶೋಧನೆಯಾಗ ತಕ್ಕ ಔಷಧಗಳನ್ನೂ ಕೊಡುವದು. ಆ ಮೇಲೆ ಅಮೃತಬಳ್ಳಿ (೧೦೫) ಕೊಟ್ಟು ನೋಡುವದು ಒಳ್ಳೇದು. ಕ್ವಾಯಿನಾಯ್ನ್ (quinine) ಎಂಬ ಸಿಂಕೋನದ ಸತ್ವ ೫ರಿಂದ ೮ ಗ್ರೇನ್ ವರೆಗೆ ದಿನಕ್ಕೆ ಮೂರಾವರ್ತಿ ಕೊಟ್ಟಲ್ಲಿ ಗುಣಕರವಾದ ಫಲ ತೋರುವದು.

೧೦೪. ಬಹಳ ಕಾಲದ ವರೆಗೆ ಇಲ್ಲವೆ ಆಗ್ಯಾಗ್ಯೆ ಬಿಡದೆ ಬರುವ ಜ್ವರದಲ್ಲಿ ಪಕ್ಕೆಲುಬುಗಳ ಎಡ ಬದಿಯಲ್ಲಿ ಘಟ್ಟಿಯಾಗುವದು, ಇಲ್ಲವೆ ಬಾತಿ ಹೋಗುವದು, ಇದಕ್ಕೆ ಪ್ಲೀಹೋದರ ಅನ್ನುತ್ತಾರೆ. ಇದಕ್ಕೆ ನುಣ್ಣಗೆ ಹುಡಿ ಮಾಡಿದ ಅನ್ನಭೇದಿ ೨೪ ಗ್ರೇನ್ ಮತ್ತು ಕರೆಮೆಣಸಿನ ಹುಡಿ ೩೦ ಗ್ರೇನ್ ಇವೆರಡನ್ನು ಚನ್ನಾಗಿ ಮಿಶ್ರ ಮಾಡಿ, ಗುಳಿಗೆ ಕಟ್ಟಲಿಕ್ಕಾಗುವಷ್ಟು ಜೇನು ಕೂಡಿಸಿ, ೧೨ ಮಾತ್ರೆಗಳು ಕಟ್ಟುವದು. ಇವುಗಳಲ್ಲಿ ೨ ಮಾತ್ರೆಗಳನ್ನು ಒಂದು ವೈನ್ ಗ್ಲಾಸ್ ತುಂಬ ಕಿರಿಯತ್ತಿನ (chiretta) ಕಲ್ಕದಲ್ಲಿ ಆಗಲಿ, ೧೪ನೇ[1] ಅಂಕೆಯಲ್ಲಿ ಹೇಳಿದ ಅಮೃತಬಳ್ಳಿಯ ನೀರಿನಲ್ಲಿ ಆಗಲಿ ಹಾಕಿ ಕಲಸಿ ದಿನಕ್ಕೆ ೨-೩ ಸಾರಿ ತಕ್ಕೊಳ್ಳುವದು. ಇದಲ್ಲದೆ ವಾರಕ್ಕೆ ೧-೨ ಸರ್ತಿ ಮಲಶೋಧನೆಯಾಗುವ ಬಗ್ಯೆ ಜುಲಾಬಿನ ಔಷಧವನ್ನು ತಕ್ಕೊಳ್ಳುತ್ತಿರ ಬೇಕು. ನೋವಿರುವ ಭಾಗದಲ್ಲಿ ೨೪ನೇ[2] ಅಂಕೆಯಲ್ಲಿ ಹೇಳಿದ ಟರ್‌ಪೆಂಟ್ಯಾನ್ ಎಂಬ ಎಣ್ಣೆಯ ಶೇಕವಾಗಲಿ ೬೨ನೇ[3] ಅಂಕೆಯಲ್ಲಿ ಹೇಳಿದ ಸಾಸಿವೇ ಒತ್ತಡವಾಗಲಿ ಮಾಡ ಬೇಕು.

೧೦೫. ಅಮೃತಬಳ್ಳಿಯ ಸತ್ವ[4] ತೆಗದು ಅಂಗಡಿಗಳಲ್ಲಿ ಮಾರುತ್ತಾರೆ, ಊರಿನ ವೈದನ ಹತ್ತರಲೂ ಶಿಕ್ಕ ಬಹುದು. ಇದನ್ನು ಬಿಡದೆ ಬರುವ ಜ್ವರದಲ್ಲಿಯೂ ಪ್ಲೀಹ ಸಂಬಂಧವಾದ ರೋಗಗಳಲ್ಲಿಯೂ ಕೊಡುತ್ತಾರೆ.

ಉದರಶೂಲೆ (ನಳವಾಯು) Colic.

ಉದರಶೂಲೆ ಉಂಟಾಗಲಿಕ್ಕೆ ಅನೇಕ ಕಾರಣಗಳಿರುತ್ತವೆ. ಮುಖ್ಯ ಹೊರಗಿನ ಕಾರಣವಾಗಲಿ ಒಳಗಿನ ಕಾರಣವಾಗಲಿ ಇರ ಬಹುದು. ಒದ್ದೆ ವಸ್ತ್ರವನ್ನು ಫಕ್ಕನೇ ಕಿಬ್ಬೊಟ್ಟೆಗೆ ತಾಗುವಂತೆ ಉಟ್ಟು ಕೊಳ್ಳುವದು, ಕಾಲು ತಣ್ಣಗಾಗಿ ಇಲ್ಲವೆ ಒದ್ದೆಯಾಗಿ ಇರಿಸುವದು, ಮೈ ಉಷ್ಣಿಸಿದ ವೇಳೆಯಲ್ಲಿ ಫಕ್ಕನೇ ಘಾಳಿಗೆ ಮೈ ಬಿಟ್ಟು ತಣಸಾಗುವದು, ಈ ಮುಂತಾದ್ದು ಹೊರಕಾರಣಗಳಾಗಿರುತ್ತವೆ. ಹಸಿ ಇಲ್ಲವೆ ಹುಳಿ ಹಣ್ಣುಗಳನ್ನು ವಿಶೇಷ ತಿನ್ನುವದು, ಆಹಾರ ಜೀರ್ಣವಾಗದೆ ಅನ್ನಕೋಶದಲ್ಲಿ

1) ೧೪೬೬ನೇ ಇಸವಿ ಪಂಚಾಂಗದ ೨೯ನೇ ಪಾನು ನೋಡು.

2) ಅದೇ ಪಂಚಾಂಗದ ೬೨ನೇ ಪಾನು ನೋಡು.

3) ೧೪೬೬ನೇ ಇಸವಿ ಪಂಚಾಂಗದ ೨೫ನೇ ಪಾನು ನೋಡು.

4) *Engl.* Extract of Gulancha. ಹಿಂದು: ಸತ್ತಿಗಿಲೊ; ದಖನಿ: ಗುಲ್ಚೇಲ್‌ಕಾ ಸಾತ್; ತಮು: ಸೀಂದಲ್‌ತರುಕ್ಕಳ್ಳಿ; ತೆಲು: ಟಿಪ್ಪತತ್ತು.—ಅಮೃತಬಳ್ಳಿಯ ಸತ್ವವು ಬಿಳಿದಾಗಿ ಕುವೆಹಿಟ್ಟಿನಂತೆ ಇರುವದು; ನಾಲಿಗೆಮೇಲಿಟ್ಟರೆ ಕೈರುಚಿ. ಅಂಗಡಿಗಳಲ್ಲಿ ಶಿಕ್ಕುತ್ತದೆ. ಕೆಲವರು ಮನೆಯಲ್ಲಿಯೂ ಸತ್ವ ತೆಗದು ಇಡುತ್ತಾರೆ.

ತುಂಬಿ ಉಳಿಯುವದು, ಹುಳಿಪಾನಗಳು, ದೇಹದಲ್ಲಿ ಪಿತ್ತೋದ್ರೇಕವಾಗುವದು, ವಿಷವುಳ್ಳ ಆಳಿಂಬಿ ತಿನ್ನುವದು, ಕ್ರಿಮಿಗಳ ಪೀಡೆ, ಮಲಬದ್ಧತೆ ಇವು ಮುಂತಾದ್ದು ದೇಹದೊಳಗಣ ಕಾರಣಗಳಾಗಿರುತ್ತವೆ.

ಚಿಕಿತ್ಸೆ: ಪ್ರಾಯಪ್ರಬುದ್ಧರಿಗೆ ಉದರಶೂಲೆ ಉಂಟಾದರೆ, ಎಳವು ಮುಂತಾದ ನೋವುಳ್ಳ ಕರಳುಗಳ ವ್ಯಾಧಿಯಲ್ಲಿ ಹೇಳಿದ ಚಿಕಿತ್ಸೆಯನ್ನು ಮಾಡ ಬೇಕು. ಮಕ್ಕಳ ಉದರಶೂಲೆ ಸಾಮಾನ್ಯವಾಗಿ ವಾಯುವಿನ ಉಪದ್ರವಕ್ಕೆ ಸಂಬಂಧವಾಗಿದ್ದು, ಅದನ್ನು ವಾಸಿ ಮಾಡ ತಕ್ಕ ಸಾಧಾರಣ ಔಷಧಗಳ್ಯಾವವಂದರೆ—ಓಮದ ನೀರು (೧೫)[1], ಸಬ್ಬಸಿಗೆಯ ಕಲ್ಕ (೧೦೬) ಹಿಂಗು[2] ಸಮೇತವಾಗಿ ಆಗಲಿ (೧೦೭) ಇಲ್ಲದೆ ಆಗಲಿ ಕೊಡುವದು. ಅದಲ್ಲದೆ ಬಿಸಿ ನೀರಿನ ಅಭ್ಯಂಗ ಮಾಡಿಸಿ (೧೦೮), ತರುವಾಯ ಒಂದಿಷ್ಟು ಹರಳೆಣ್ಣೆ ಕೊಟ್ಟು ಜುಲಾಬು ಮಾಡಿಸುವದು.

೧೦೬. ಸಬ್ಬಸಿಗೇ ಬೀಜಗಳ ಸತ್ವ ಬಟ್ಟಿ ಇಳಿಸಿ ತೆಗಿಸಿದ್ದು ದೊರಕಿದರೆ ಉತ್ತಮ; ಇಲ್ಲದಿದ್ದರೆ, ೩ ದ್ರಮ್ ಬೀಜಗಳನ್ನು ತೆಗದು ಜಜ್ಜಿ ಅದಕ್ಕೆ ಅರ್ಧ ಬಾಟ್ಲಿ ಕುದಿಯುವ ನೀರು ಹಾಕಿ, ತೆಗದ ಕಲ್ಕದ ನೀರು ಅದಕ್ಕೆ ಬದಲಾಗಿ ಉಪಯೋಗಿಸ ಬಹುದು. ಈ ನೀರನ್ನು ತಣ್ಣಗಾದ ಮೇಲೆ ಗಾಳಿಸಿ ತೆಗದು, ಅದಕ್ಕೆ ಸ್ವಲ್ಪ ಸಕ್ಕರೆ ಹಾಕಿ ಶೀ ಮಾಡಿ, ಮಕ್ಕಳಿಗಾದರೆ ಎರಡು ಚಾಸೌಟಿನಷ್ಟು ಇಲ್ಲವೇ ಹೆಚ್ಚು ಕೊಡ ಬಹುದು. ಇದು ಮಕ್ಕಳ ಉದರಶೂಲೆ, ಕಿಬ್ಬೊಟ್ಟಿಯ ನೋವು, ವಾಯುವಿನ ಉಪದ್ರವಗಳಿಗೆ ಕೊಟ್ಟಲ್ಲಿ ಬಹಳ ಗುಣಕರವಾದೀತು ಇದಕ್ಕೆ ಒಂದು ಚಾಸೌಟಿನಷ್ಟು ಸುಣ್ಣದ ತಿಳೀ ನೀರು (೧೮, ೧೯)[3] ಹಾಕಿ ಕುಡಿದರೆ ಬಹುಶಾ ಅದರ ಗುಣ ಹೆಚ್ಚುವದು.

೧೦೭. ಹಿಂಗು ವಾಯುವಿನಿಂದುಂಟಾಗುವ ಉಪದ್ರವಕ್ಕೂ ವಾಯುವಿನ ಉದರಶೂಲೆಗೂ ಕರಳುಗಳ ಎಳವುನೋವಿಗೂ, ಮುಖ್ಯವಾಗಿ ಇಂಥಾ ಪೀಡೆ ಸೂತಿಕಾ ವಾಯುವಿನ (hysteria) ದೆಶೆಯಿಂದ ಉಂಟಾಗಿದ್ದರೆ, ಇಂಗು ಪ್ರಯೋಜನವುಳ್ಳದ್ದು. ಅದನ್ನು ಕೊಡುವದು ಹ್ಯಾಗಂದರೆ: ೩೦ ಗ್ರೇನ್ (=ಅರ್ಧ ದ್ರಮ್) ಹಿಂಗನ್ನು ನಾಲ್ಕು ಔನ್ಸ್ (=ಸುಮಾರು ಒಂದು ಕುಡುತೆ=೮ ಮೇಜಿನ ಸೌಟು) ನೀರಿನಲ್ಲಿ ಹಾಕಿ, ಕರಗಿಸಿ ಪಿಚ್ಕಾರಿ ಹೊಡಿಯುವದು. ಆದರೆ ಇದು ಮಾಡಲಿಕ್ಕೆ ಸಂದರ್ಭವಾಗದಿದ್ದರೆ, ಬೆಪ್ಪ

1) ಈ ಅಂಕೆಯನ್ನು ೧೮೭೬ನೇ ಇಸವಿ ಪಂಚಾಂಗದ ೭೯ನೇ ಪಾನಿನಲ್ಲಿ ನೋಡು. ಈ ಪ್ರಕಾರ ದಪ್ಪ ಅಂಕೆಯಿಂದ ಸೂಚಿಸಿರುವ ಔಷಧವು ವಿಶೇಷ ಗುಣವುಳ್ಳದೆಂದು ಎಣಿಸ ಬೇಕು.

2) *Engl.* Assefotida. ಹಿಂಮು: ದಖನಿ: ಬಂಗಾಳಿ: ಮಹಾ: ಗುಜ್ರಾತಿ: ಹಿಂಗ್; ತಮು: ಕಾಯಮ್, ಪೆರುಂಗಾಯಮ್; ತೆಲು: ಇಂಗುವ; ಮಲ: ಪೆರುಂಗಾಯಮ್, ಕಾಯಮ್; ತುಳು: ಇಂಗ್.—ಉತ್ತಮ ತರದ ಹಿಂಗು ಈ ಊರಿನ ಗಂಧನರಕಿನ ಅಂಗಡಿಗಳಲ್ಲಿ ತಿಕ್ಕುತ್ತದೆ. ಮೆತ್ತಗಾಗಿ, ತ್ಯಾವವಿದ್ದು ತೀಕ್ಷ್ಣ ವಾಸನೆಯುಳ್ಳ ಜಾತಿ ಹಿಂಗು ಔಷಧಕ್ಕಾಗಿ ಆರಿಸ ತಕ್ಕದ್ದು. ಇದನ್ನು ಮಾತ್ರೆಯಾಗಿ ಕೊಡ ಬಹುದು; ಕೊಟ್ಟರೆ ಒಮ್ಮಿಗೆ ೫ ಗ್ರೇನಿನ ಮೇಲೆ ೧೦ ಗ್ರೇನಿನ ಒಳಗೆ ಕೊಡ ಬೇಕು ಹೊತ್ತು ಹೆಚ್ಚಿಗೆ ಕೊಡ ಬಾರದು. ಇಲ್ಲವೇ ನೀರಿನಲ್ಲಿ ಕಲಕಿಸಿ ಕೊಡುವದಾದರೆ, ೫ ದ್ರಮ್ ಹಿಂಗನ್ನು ೧ ಪ್ಯಾಂಟ್ ಬಿಸಿ ನೀರಿನಲ್ಲಿ ಪಾಕಿ, ಕರಗಿಸಿ, ಆ ಮೇಲೆ ನೀರನ್ನು ಗಾಳಿಸಿ ತಣ್ಣಗಾಗಿ ಇರಿಸುವದು. ಬಿಳೀ ದಟವಾಗುವ ನೀರು ಸಾರಿಗೆ ೧ರಿಂದ ೨ ಚಾಸೌಟಿನ ವರೆಗೆ ತಕ್ಕೊಳ್ಳ ಬಹುದು. ಅದು ತಕ್ಕೊಳ್ಳಲಿಕ್ಕೆ ಅಸಹ್ಯವಾದೀತಷ್ಟೆ.

3) ಈ ಅಂಕೆಗಳನ್ನು ೧೮೭೬ನೇ ಇಸವಿ ಪಂಚಾಂಗದ ೬೦ನೇ ಪಾನಿನಲ್ಲಿ ನೋಡು.

ಣಿಯಲ್ಲಿ ಹೇಳಿದಂತೆ ನೀರು ಮಾಡಿ ಕುಡಿಸ ಬಹುದು. ಈ ನೀರಿನ ಚಾಸೌಟಿನಷ್ಟು ತೆಗದು, ಅದಕ್ಕೆ ಸ್ವಲ್ಪ ಓಮದ ನೀರು ಹಾಕಿ, ಕುಡಿಸಿದರೆ, ಮಕ್ಕಳ ಉದರಶೂಲೆ ಹರವಾದೀತು. ಹಿಂಗಿನ ನೀರಿನಿಂದ ಪಿಚ್ಚಕಾರಿ ಹೊಡೆದು ಗುದದಿಂದಾಗಲಿ ಕೀಳ್ಕರುಳುಗಳಿಂದಾಗಲಿ ನೂಲುಹುಳಗಳನ್ನು ಹೊರಡಿಸಲಿಕ್ಕೆ ಒಳ್ಳೇ ಉಪಾಯ.

೧೦೮. ಮಕ್ಕಳ ಉದರಶೂಲೆ ನಿಲ್ಲುವದಕ್ಕೆ ಅಭ್ಯಂಗ[1] ಮಾಡಿಸುವದರಿಂದ ಬಹಳ ಗುಣವುಂಟು.

ಉಬ್ಬಸ (ಗೂರಲು, ನೇವಸ) Asthma.

ಉಬ್ಬಸವೆಂಬದು ಕಫಕೋಶದ ರೋಗವಾಗಿದ್ದು, ಪ್ರಾಯ ಹೋದವರಿಗೆ ಉಂಟಾಗುವಂಥಾದ್ದಾಗಿರುತ್ತದೆ. ಚಿಕ್ಕ ಶ್ವಾಸನಾಳಗಳ ಶಳವಿನಿಂದ ಉಸುರಾಟ ಪ್ರಯಾಸವಾಗಿ, ಎದೆ ಒತ್ತಿ ಉಸುರು ಕಟ್ಟಿದಂತಾಗುವದು, ಗೋರಿಕೆಯಂತೆ ಕಫ ಶ್ವಾಸ, ಳಿಎಶ್ರಾಂತಿ, ಇವು ಈ ರೋಗದ ಮುಖ್ಯ ಲಕ್ಷಣಗಳಾಗಿರುತ್ತವೆ. ಉಬ್ಬಸವು ಜೋರಾದರೆ, ಮುಖವು ಕಳೆಗುಂದಿ, ಮೂಗು ಕಿವಿ ಮುಂತಾದ ಮೈಕೊನೆಗಳು ತಣ್ಣಗಾಗಿ, ಮುಖವೂ ಎದೆಯೂ ಬೆವರುವವು, ಗುಂಡಿಗೆ ಬಡಿಯುವದು, ನಾಡಿ ಬೇಗ ಬೇಗನೇ ತುಂಬಾಗಿ ಇಲ್ಲವೇ ಕ್ರಮ ತಪ್ಪಿ ಬಡಿಯುವದು, ನಿಸ್ತೇಜವಾಗಿ ಈ ಪ್ರಕಾರ ಕಫ ಏಳುವ ವರೆಗೆ ನಡದ ತರುವಾಯ ಸ್ವಲ್ಪ ಶಾಂತವಾಗುವದು. ಬೆವರಾಗಲಿ ಬಹಳ ಮೂತ್ರವಾಗಲಿ ಹೋದರೆ, ರೋಗ ಸ್ವಲ್ಪ ಉತಾರಾಗುತ್ತದೆ.

ಚಿಕಿತ್ಸೆ: ರೋಗದ ಜೋರು ಉಪಶಮಿಸುವದಕ್ಕೆ ಮುಂದೆ ಹೇಳಿದ ಒಂದು ಯಾ ಕೆಲವು ಔಷಧಗಳನ್ನು ಕೊಡ ಬಹುದು. ಎದೆಗೆ ಟರ್‌ಪೆಂಟ್ಯಾನ್ ಎಂಬ ಕರ್ಪೂರ ತೈಲದ ನೀರುಗಾವು (೨೪)[2] ಇಲ್ಲವೇ ಬಿಸಿ ನೀರಿನ ಶೇಕ (೧೦೯) ಕೊಟ್ಟು, ಹೊಟ್ಟೆಯೊಳಗೆ ಕರ್ಪೂರವಾಗಲಿ (೧೧೦) ಹಿಂಗು ಆಗಲಿ (೧೧೧) ಕೊಡುವದು. ಆದಲ್ಲದೆ ಪೆಟ್ಲುಪ್ಪಿನ ಹೊಗೆ (೧೧೨) ಇಲ್ಲವೆ ಉಮ್ಮತ್ತದ ಹೊಗೆ (೧೧೩) ಕೊಡುವದು. ಚನ್ನಾಗಿ ಬೇಯಿಸಿ ತೆಗದ ಕಾಫಿಕಷಾಯವನ್ನು (*Café noir*) ಅದಕ್ಕೆ ಹಾಲಾಗಲಿ ಸಕ್ಕರೆಯಾಗಲಿ ಹಾಕದೆ ಕೂಡುವಷ್ಟು ಬಿಸಿಯಾಗಿ ಕುಡಿಯುವದರಿಂದ ತಕ್ಕಷ್ಟು ಉಪಶಮನವಾದೀತು[3]. ಮತ್ತು ಆಗ್ಯಾಗ್ಯೆ ಖಾಸೋದ್ರೇಕವಾಗದ ಹಾಗೆ ದಿನಾಲು ಶಿರ್ಕದಲ್ಲಿ ಸ್ಪಂಜ್ ಅದ್ದಿ ಎದೆಗೆ ಹಚ್ಚುವದು (೧೧೪) ಒಳ್ಳೇದೆಂದು ಎನ್ನುತ್ತಾರೆ. ಏವಂಚ ಪತ್ಯ ಅನುಪಾನಾದಿಗಳು ನೆಟ್ಟಗಿರಿಸುವದು ಇನ್ನು ಉತ್ತಮವೇ. ಉಬ್ಬಸ, ಯಾ ಅನೇಕ ಖಾಸೋದ್ರೇಕಗಳು ತೀಕ್ಷ್ಣವಾದ ರಾತ್ರೀ ಊಟದಿಂದಾಗಲಿ ಇಲ್ಲವೇ ಇತರ ಊಟದ ದೋಷಗಳಿಂದಾಗಲಿ ಆಗ ಬಹುದು.

---

1) ಅಭ್ಯಂಗವನ್ನು ಕುರಿತು ವಿವರವು ಮಕ್ಕಳ ಅಪಸ್ಮಾರದ ಚಿಕಿತ್ಸೆಯಲ್ಲಿ ಓದಿ ನೋಡ ಬೇಕು.

2) ಈ ಅಂಕೆಯನ್ನು ೧೪೬೬ನೇ ಇಸವಿ ಪಂಚಾಂಗದ ೬೨ನೇ ಪಾನಿನಲ್ಲಿ ನೋಡು.

3) ನೇವಸ ಉಪಶಮಿಸಲಿಕ್ಕೆ ಇದೊಂದು ಒಳ್ಳೇ ಔಷಧವಂತೆ; ಇದರಿಂದ ತಟ್ಟನೆ ಗುಣ ಬರುವದೆಂದನ್ನುತ್ತಾರೆ: ೨ ಔನ್ಸ್ (=ಶುಮಾರು ೫ ಕುಡುತೆ) ಒಳ್ಳೇ ಜೇನುತುಪ್ಪ, ೧ ಔನ್ಸ್ (=೨½ ಕುಡುತೆ) ಹರಳೆಣ್ಣೆ, ಇವೆರಡನ್ನೂ ಮಿಶ್ರ ಮಾಡಿ. ರಾತ್ರೆಯೂ ಬೆಳಿಗ್ಯೆಯೂ ಒಂದೊಂದು ಚಾಸೌಟು ಸೇವಿಸುವದು. (Enquire Within, no. 2154.)

೧೦೯. ಬಿಸಿ ನೀರಿನ ಶೇಕವು ಅನೇಕ ಪೀಡೆಗಳಲ್ಲಿ ಬಹಳ ಪ್ರಯೋಜನಕರವಾಗಿದೆ. ದೃಷ್ಟಾಂತಕ್ಕೆ ದೇಹದ ಯಾವದೊಂದು ಭಾಗದಲ್ಲಿ ಆಗುವ ಜ್ವಾಲೆಗಳು, ಪ್ರಾರಂಭವಾಗುವ ಬಾವು, ಕುರುಗಳು, ಉಳುಕುಗಳು, ನಡುನೋವು, ಉದರಶೂಲೆ, ಮತ್ತು ಕರುಳುಗಳ ಅಕ್ರಮ, ಕಲಿಜದ ರಕ್ತ ಏರೋಣ, ಉಬ್ಬಸ ಇತ್ಯಾದಿಗಳಲ್ಲಿ ಇದು ಪ್ರಯೋಜನಕರವಾಗಿದೆ. ಅದರ ತುಂಬಾ ಪ್ರಯೋಜನ ದೊರೆಯುವಂತೆ ಮುಂದಿನ ಸೂಚನೆಗಳನ್ನು ಲಕ್ಷ್ಯವಿಡ ತಕ್ಕದ್ದು.—೧. ನೀರು ತಡಿಯ ಕೂಡುವಷ್ಟು ಬಿಸಿಯಾಗಿರ ಬೇಕು. ೨. ಯಾವಲ್ಲಿ ಶೇಕ ಕೊಡುತ್ತದೋ ಆ ಭಾಗಕ್ಕಿಂತ ದೊಡ್ಡ ಎರಡು ಯಾ ಹೆಚ್ಚು ಪದರುಗಳಾಗಿ ಮಡಿಸಿರುವ ವಸ್ತ್ರದ ಕೆಲವು ದಪ್ಪ ಘಳಿಗೆಗಳನ್ನು ತಯಾರು ಮಾಡಿ ಇಡ ಬೇಕು; ಉಣ್ಣೀ ವಸ್ತ್ರವಾಗಿದ್ದರೆ, ಉತ್ತಮ. ೩. ಅವುಗಳಲ್ಲಿ ಒಂದು ಘಳಿಗೆಯನ್ನು ಬಿಸಿ ನೀರಲ್ಲಿ ಮುಣುಗಿಸಿ ತೆಗದು, ಅದರಲ್ಲಿ ನೀರಿನ ತ್ಯಾವ ಉಳಿಯದ ಹಾಗೆ ಚನ್ನಾಗಿ ಹಿಂಡಿ, ಅದರಿಂದ ಶೇಕ ಕೊಡ ಬೇಕು. ೪. ಈ ಪ್ರಕಾರ ೨-೩ ನಿಮಿಷ ಇಟ್ಟು ಶೇಕ ಕೊಡುವಷ್ಟರಲ್ಲಿ ಇನ್ನೊಂದು ಘಳಿಗೆಯನ್ನು ಅದೇ ಪ್ರಕಾರ ಸಿದ್ಧಮಾಡಿ, ಮೊದಲನೇದನ್ನು ತೆಗದು, ಎರಡನೇದನ್ನು ಇಡ ಬೇಕು. ಈ ಪ್ರಕಾರ ಅವಶ್ಯವಿದ್ದರೆ ಅರ್ಧ ತಾಸಿಗೊಮ್ಮೆ ಆದರೂ ಮಾಡ ಬಹುದು. ಪ್ರಥಮತಾ ಇದ್ದ ನೀರಿನ ಕಾವು ತಣ್ಣಗಾಗಿ ಹೋಗದ ಹಾಗೆ ಮಾತ್ರ ಆಗ್ಯಾಗ್ಯೆ ಬಿಸಿ ನೀರನ್ನು ಬದಲಿಸುತ್ತಾ ಇರ ಬೇಕು. ಮತ್ತು ಒಂದು ಶೇಕವನ್ನು ಕೊಟ್ಟು ಇನ್ನೊಂದು ಶೇಕವನ್ನು ಕೊಡುವದಕ್ಕೆ ಅವಶ್ಯವಿರುವ ಸಮಯಕ್ಕಿಂತಲೂ ಹೆಚ್ಚಿಗೆ ಸಮಯ ವಿಳಂಬಿಸ ಬಾರದು. ಶೇಕ ತೀರಿದ ಬಳಿಕ ಶೇಕ ಕೊಟ್ಟ ಭಾಗಕ್ಕೆ ಫಾಳಿಯ ತಣಸು ತಾಗದ ಹಾಗೆ ಜಾಗ್ರತೆಯಾಗಿ ವಸ್ತ್ರ ಮುಚ್ಚ ಬೇಕು.

೧೧೦. ಉಬ್ಬಸದಲ್ಲಿ ಕರ್ಪೂರವು ನಾಲ್ಕು ಗ್ರೇನ್ (೧ ಮಂಜೂಟಿತೂಕ) ಆಷ್ಟೇ ಹಿಂಗಿನ ಸಂಗಡ ಚನ್ನಾಗಿ ಬೆರಸಿ ಒಂದು ಮಾತ್ರೆ ಕಟ್ಟುವದು. ಈ ಮಾತ್ರೆಯನ್ನು ನೇವಸ ಉಂಟಾದ ಸಮಯದಲ್ಲಿ ತಕ್ಕೊಂಡರೆ, ಕೆಲವು ಸಾರಿ ಬಹಳ ಗುಣ ಬರುವದು. ಟರ್ಪೆಂಟ್ಯಾನ್ ತೈಲದ ನೀರುಗಾವು (೨೪) ಸಹ ಅದೇ ಹೊತ್ತಿನಲ್ಲಿ ಎದೆಗೆ ಕೊಡ ಬೇಕು. ಇದೇ ಚಿಕಿತ್ಸೆಯಿಂದ ಉಸುರುಶಿಕ್ಕು ಸಹ ನಿಲ್ಲುವದು.

೧೧೧. ಮಕ್ಕಳಿಗೆ ಕಫಕೋಶದ ಉರಿ ಉಂಟಾದ ಮೇಲೆ ಆಗುವ ಕಠಿಣ ಕೆಮ್ಮಿಗೂ ನಾಯಿಕೆಮ್ಮಿನ ಕಡೆ ಸ್ಥಿತಿಯಲ್ಲಿಯೂ ಹಿಂಗು ಗುಣಕರವಾಗಿ ಕೊಡ ಬಹುದು. ಹ್ಯಾಗಂದರೆ ೫ ದ್ರಮ್ (=೬೨ ಪಾವಲಿತೂಕ) ಹಿಂಗು ತಂದು, ೨ ಬಾಟ್ಲೆ (=೫ ಕುಡುತೆ) ಕುದಿಯುವ ನೀರಿನಲ್ಲಿ ಹಾಕಿ ಗಾಳಿಸಿ, ತಣ್ಣಗಾಗಿ ಇರಿಸುವದು. ಹಾಲಿನಂತೆ ಬಿಳಿದಾಗುವ ಈ ನೀರಿನಲ್ಲಿ ದಿನಕ್ಕೆ ೪-೫ ಸಾರಿ ಒಂದೊಂದು ಚಾಸೌಟನಷ್ಟು ಕೊಟ್ಟರೆ, ಬಹಳ ಪ್ರಯೋಜನವಾದೀತು. ಇದು ದೀರ್ಘಕಾಲದ ಶ್ವಾಸಖಾಸಕ್ಕೂ ದೊಡ್ಡವರ ಉಬ್ಬಸಿಗೂ ಕೊಡುವದು. ಇದಕ್ಕೆ ಸ್ವಲ್ಪ ಅಸಹ್ಯವಾದ ವಾಸನೆಯೂ ರುಚಿಯೂ ಉಂಟೆಂಬದರಿಂದ ತಕ್ಕೊಳ್ಳಲಿಕ್ಕೆ ಆಕ್ಷೇಪಿಸ್ಯಾರು. ಆದರೆ ಅದನ್ನು ಮಾತ್ರೆಯಾಗಿ ಕೊಟ್ಟರೆ, ಹ್ಯಾಗೂ ಸುದಾರಿಸ ಬಹುದು. ಹ್ಯಾಗಂದರೆ ೫ರಿಂದ ೧೦ ಗ್ರೇನ್ ವರೆಗೆ (=೧೨೪ ಮಂಜೂಟಿತೂಕದಿಂದ ೨೪೦ ಮಂಜೂಟಿತೂಕದ ವರೆಗೆ) ಮಾತ್ರೆಗಟ್ಟಿ ಕೊಡ ಬಹುದು.

೧೧೨. ಉಬ್ಬಸದಲ್ಲಿ ಪೆಟ್ಟುಪ್ಪಿನ ಹೊಗೆ ಅನೇಕ ಸಂಗತಿಗಳಲ್ಲಿ ಉಪಶಮನಕರ ವೆಂದು ಕಂಡು ಬಂದದೆ. ಅದನ್ನು ಕೊಡುವದು ಹ್ಯಾಗಂದರೆ: ೪ ಔನ್ಸ್ (=೧೦ ರೂ ಪಾಯಿತೂಕ) ಪೆಟ್ಟುಪ್ಪು ಅರ್ಧ ಬಾಟ್ಲಿ ಕುದಿಯುವ ನೀರು ಹಾಕಿರುವ ಒಂದು ಅಗಲ ಬಾಯಿಯುಳ್ಳ ಪಾತ್ರೆಯಲ್ಲಿ ಹಾಕಿ, ಒಂದು (blotting paper) ಮಸಿ ಅದ್ದುವ ಕಾಗದ ವನ್ನು ಅದರಲ್ಲಿ ನೆನೆ ಹಾಕಿ, ಕೆಲವು ನಿಮಿಷಗಳ ವರೆಗೆ ಇಡುವದು. ಆ ಮೇಲೆ ಆ ಕಾಗ ದವನ್ನು ಫಾಳಿಗೆ ಆಗಲಿ ಬೆಂಕಿಯ ಶೆಕೆಗೆ ಆಗಲಿ ಇಟ್ಟು ಒಣಗಿಸುವದು. ಪೂರ್ಣ ಒಣಗಿದ ಮೇಲೆ ಅದನ್ನು ನಾಲ್ಕು ಇಂಚ್ ಚಚ್ಚೌಕ ತುಂಡುಗಳಾಗಿ ಕೊಯಿದು, ಉಪಯೋಗಕ್ಕೆ ಸಿದ್ಧ ಮಾಡಿ ಇಡುವದು. ಉಬ್ಬಸ ಶುರುವಾಗುತ್ತಲೇ ಇಂಥಾ ತುಂಡುಗಳಲ್ಲಿ ಒಂದನ್ನಾ ಗಲಿ ಎರಡನ್ನಾಗಲಿ ಸುಟ್ಟು, ಅದರ ಹೊಗೆ ಸರಾಗವಾಗಿ ಬಾಯಲ್ಲಿ ಹೀರಿ ಕೊಳ್ಳುವದು. ಹಾಗೆ ಹೀರಿ ಕೊಳ್ಳುವಾಗ್ಯೆ ಅದನ್ನು ಮುಖಕ್ಕೆ ಬಹಳ ಸಮೀಪವಾಗಿ ಹಿಡಕೊಳ್ಳದ ಹಾಗೆ ಜಾಗ್ರತೆಯಾಗಿರ ಬೇಕು, ಇಲ್ಲವಾದರೆ ಆ ಹೊಗೆಯ ಕಮರಿನಿಂದ ವಿಶೇಷ ಉರಿ ಉಂಟಾಗಿ, ಖಾಸವು ಇನ್ನು ಕಡಿಮೆಯಾಗುವದಕ್ಕೆ ಬದಲಾಗಿ ಹೆಚ್ಚಾದೀತು. ಇಂಥ ಅಸ್ವಸ್ಥವುಳ್ಳ ಜನರು ಈ ಪೆಟ್ಟುಪ್ಪಿನ ಕಾಗದಗಳ ಒಂದು ಯಾ ಎರಡು ತುಂಡುಗಳನ್ನು ರಾತ್ರಿಕಾಲದಲ್ಲಿ ಮಲಗುವದಕ್ಕೆ ಹೋಗುವ ಮುಂಜೆ ಕೋಣೆಯಲ್ಲಿ ಸುಟ್ಟು, ಆ ಹೊ ಗೆಯನ್ನು ಹೊರಗೆ ಹೋಗದ ಹಾಗೆ ಜಾಗ್ರತೆ ತೆಗದು ಕೊಳ್ಳ ಬೇಕು.

೧೧೩. ಉಮ್ಮತ್ತದ[1] ಎಲೆಗಳನ್ನು ದಂಟು ಸಮೇತವಾಗಿ ಒಣಗಿಸಿ, ಹೊಗೆಸೊಪ್ಪಿ ನಂತೆ ಕೊಳಿವೆಯಲ್ಲಿ ಹಾಕಿ ಶೇದುವದರಿಂದ ಉಬ್ಬಸವು ಅನೇಕ ಸಂಗತಿಗಳಲ್ಲಿ ಉಪ ಶಮನವಾಗುವದು; ಕೆಲವರಿಗೆ ಆ ಪ್ರಕಾರ ಶೇದಿದ ಕೂಡಲೆ ಪೂರ್ಣ ಗುಣ ಕಾಣು ವದು; ಬೇರೆ ಕೆಲವರಿಗೆ ಅಷ್ಟು ಗುಣ ಕಾಣುವದಿಲ್ಲ; ಆದರೆ ಒಬ್ಬೊಬ್ಬರಲ್ಲಿ ಅದ ರಿಂದ ಸ್ವಲ್ಪ ಬಾಧಕ ಬಂದದ್ದುಂಟು. ಏವಂಚ ಅದರ ಪ್ರಯೋಜನವನ್ನು ಸ್ವತ ಹಾ ಪರೀಕ್ಷೆ ಮಾಡಿಯೇ ನಿಶ್ಚಯಿಸ ಬಹುದು; ಯಾವ ಸಂಗತಿಯಲ್ಲಿ ಆದರೂ ಈ ಔಷಧದ ಗುಣ ನೋಡ ತಕ್ಕಂಥಾದ್ದೇ. ಎಲೆಗಳಿಂದ ಗುಣ ಬಾರದಿದ್ದರೆ, ಬೀಜಗ ಳಾದರೂ ಆ ಪ್ರಕಾರ ಉಪಯೋಗಿಸ ಬಹುದು. ಇವು ಎಲೆಗಳಿಗಿಂತ ಉತ್ಕೃಷ್ಟವಾಗಿ ರುತ್ತವಂತೆ. ಉಬ್ಬಸದ ಎಷ್ಟು ಶುರುವಿನಲ್ಲಿ ಈ ಔಷಧ ಮಾಡೋಣಾಗುವದೋ ಗುಣ ವಾಗುವ ಸಂಭವ ಅಷ್ಟು ಹೆಚ್ಚು ಇದ್ದೀತು. ಉಬ್ಬಸ ಶುರುವಾಗಿ ಕೆಲವು ತಾಸುಗ ಳಾದ ಮೇಲೆ ಈ ಹೊಗೆಯಿಂದ ಅಷ್ಟು ಹೆಚ್ಚು ಪ್ರಯೋಜನವಿಲ್ಲ. ಉಬ್ಬಸ ಹಿಡಿದಿರುವ ಮನುಷ್ಯನು ಮಾಡ ತಕ್ಕ ಒಳ್ಳೇ ಉಪಾಯವೇನಂದರೆ—ರಾತ್ರಿಯಲ್ಲಿ ಮಲಗುವಾಗ ಉಬ್ಬಸ ಬಂದೀತೆಂಬ ಶಂಕೆಗೆ ಆಸ್ಪದವು ಇರಲಿ, ಇಲ್ಲದೆ ಇರಲಿ, ಅವನು ಈ ಉ ಮ್ಮತ್ತದ ಹೊಗೆ ಶೇದುವ ಅಭ್ಯಾಸ ಮಾಡ ಬೇಕು; ಹ್ಯಾಗೂ ತಾನು ಶೇದುವ ಕೊಳಿ ವೆಯನ್ನು ತುಂಬಿಸಿ, ಅದಕ್ಕೆ ಬೇಕಾಗುವ ಬೆಂಕಿ ಹಚ್ಚಲಿಕ್ಕೆ ತಯಾರು ಮಾಡಿ ಕೊಂಡು, ತನ್ನ ಹಾಸಿಗೆಯ ಬಳಿಯಲ್ಲಿ ಇಡ ಬೇಕು, ಮತ್ತು ಉಬ್ಬಸ ಶುರುವಾದ ಕೂಡಲೆ ಅದನ್ನು ಶೇದುವದು. ಪ್ರಾರಂಭಕ್ಕೆ ಉಮ್ಮತ್ತದ ಎಲೆಯ ಒಣಗಿದ ಚೂರು ೧೦ರಿಂದ ೨೦ ಗ್ರೇನ್ ವರೆಗೆ (=೨/೩—೫/೩ ಮಂಜೂಟಿತೂಕ) ಹಾಕಿ ಶೇದ ಬಹುದು,

1) ೧೮೬೬ನೇ ಇಸವಿ ಪಂಚಾಂಗದ ೨೫ನೇ ಪಾನಿನ ೬ನೇ ಅಂಕೆಯ ಟಿಪ್ಪಣಿ ನೋಡು.

ಕ್ರಮೇಣದಲ್ಲಿ ಹೆಚ್ಚಿಸಿ ೩೦ ಗ್ರೇನ್ ವರೆಗೆ ಉಪಯೋಗಿಸ ಬಹುದು. ಆದರೆ ತಲೆ ತಿರುಗುವದಾಗಲಿ ವಾಕರಿಕೆಯಾಗಲಿ ಅಸಹನ ಲಕ್ಷಣವಾಗಲಿ ತೋರಿದ ಕೂಡಲೇ ಶೇದುವದನ್ನು ಬಿಟ್ಟು ಬಿಡ ಬೇಕು. ದೀರ್ಘಕಾಲದ ಕೆಮ್ಮು ಉಳ್ಳವರಿಗೆ ಅದರ ಪೀಡೆ ಜೋರಾಗಿ, ಒಣ ಕೆಮ್ಮು ಕಠಿಣವಾಗಿ, ಕಫೋದ್ರೇಕವಾಗಲಿಕ್ಕೆ ಪ್ರಯಾಸವಾಗಿಯೂ ಆದರೆ, ಮೇಲೆ ಹೇಳಿದ ಪ್ರಕಾರ ಉಮ್ಮತ್ತವನ್ನು ಶೇದುವದು ಬಹಳ ಗುಣಕರವಾಗುವದು.

೧೧೪. ದಿನಾಲು ಪ್ರಾತಃಕಾಲ ನೀರು ಮತ್ತು ಶಿರ್ಕ (ಇವೆರಡು ಸಮ ಭಾಗ) ಕೂಡಿಸಿ, ಅದರಿಂದ ಎದೆಯನ್ನು ತೊಳಕೊಳ್ಳುವದು ಕೆಮ್ಮು ಮತ್ತು ಉಬ್ಬಸವುಳ್ಳವರಿಗೆ ಬಹಳ ಒಳ್ಳೇದು. ಪ್ರಥಮತಾ ಉಗುರುಬೆಪ್ಪಗಾದ ನೀರು ಹಾಕಿ, ಕ್ರಮೇಣ ತಣ್ಣೀರು ಉಪಯೋಗಿಸ ಬಹುದು. ಈ ಪ್ರಕಾರ ತಪ್ಪದೆ ತೊಳಕೊಳ್ಳುತ್ತಾ ಇರುವದರಿಂದ ಕೆಮ್ಮಾಗಲಿ ಉಬ್ಬಸವಾಗಲಿ ಪದೇ ಪದೇ ಉಂಟಾಗುವ ಜನರಿಗೆ ವಿಶೇಷ ಗುಣಕರ ಮಾತ್ರವಲ್ಲ, ಈ ಉಪದ್ರವಗಳು ಇನ್ನು ಬಾರದ ಹಾಗೆ ಅನೇಕ ಸಾರಿ ತಡಿಯುತ್ತದೆ.

ಉಮ್ಮತ್ತದ ಬೀಜ ತಿಂದು ಉಂಟಾಗುವ ವಿಷಕ್ಕೆ
Poisoning by swallowing the Seeds of Datura.

ದತ್ತುರವೆಂಬ ಉಮ್ಮತ್ತದ ಬೀಜವನ್ನು ತಿಂದರೆ, ಬುದ್ಧಿಭ್ರಮಣವಾಗುವದಲ್ಲದೆ ಹಿಂದೆ ಹೇಳಿದ ಅಫೀನಿಯ ವಿಷದಿಂದ ಉಂಟಾಗುವ ಲಕ್ಷಣಗಳು ಸಹ ತೋರ ಬಹುದು. ಆದ್ದರಿಂದ ಅಫೀನಿಯ ವಿಷಕ್ಕೆ ಹೇಳಿದ ಚಿಕಿತ್ಸೇ ಕ್ರಮವನ್ನೇ (೧೪೭ನೇ ಇಸವಿ ಪಂಚಾಂಗದ ೪೬, ೪೭, ೪೮ನೇ ಪಾನುಗಳನ್ನು ನೋಡು) ಇದರಲ್ಲಿಯೂ ಮಾಡ ಬಹುದು. ಈ ಉಮ್ಮತ್ತದ ಹೊಗೆಯನ್ನು ಶ್ವಾಸದಲ್ಲಿ ಹೀರಿ ಕೊಂಡದರಿಂದ ಮೂರ್ಛೆ ಉಂಟಾದ್ದಲ್ಲಿ ತಣ್ಣೀರಿನ ಧಾರೆ[1] ಕೊಡುವದರಿಂದ ಅನೇಕ ಸಾರಿ ತಟ್ಟನೇ ಸ್ಮೃತಿ ಬಂದದ್ದುಂಟು. ಅದಲ್ಲದೆ ಅಫೀನಿಯ ವಿಷದ ಚಿಕಿತ್ಸೆಯಲ್ಲಿ ವಿವರಿಸಿದ ಪ್ರಕಾರ ರೋಗಿಯನ್ನು ಯಾವದಾದರು ಉಪಾಯದಿಂದ ಎಚ್ಚರಕ್ಕೆ ತರ ಬೇಕು. ನರಸಂಬಂಧವಾದ ಅಶಕ್ತಿಲಕ್ಷಣಗಳು ಒಂದೆರಡು ದಿವಸದ ವರೆಗೂ ತೋರಿದ್ದಾಗ್ಯೂ ಕ್ರಮೇಣ ಉತಾರವಾದೀತು.

ಉರುಪು, ಉರುತ (ಒಳಗಿನ ಅಥವಾ ಹೊರಗಿನ)
Local or External Inflammation.

ಉರುತವು ಶರೀರದ ಯಾವ ಭಾಗದಲ್ಲಿ ಆದರೂ ಉಂಟಾಗ ಬಹುದು. ಇದು ರೋಗಾವಸ್ಥೆಯಲ್ಲಿ ಒಂದು ಲಕ್ಷಣವಾಗಿರುತ್ತದೆ. ನೋವು, ಬಿಸುಪು, ಕೆಂಪಗಾಗುವದು, ಬಾತು ಹೋಗುವದು, ಇವು ಉರುತದ ಚಿನ್ಹೆಗಳಾಗಿರುತ್ತವೆ. ಆದರೆ ಇವುಗಳಲ್ಲಿ ಒಂದು ಇಲ್ಲವೆ ಹೆಚ್ಚು ಗುರುತುಗಳು ಹೊರಗಣ ಉರುತದಲ್ಲಿ ಕಾಣದೆ ಇರ ಬಹುದು, ಅಥವಾ ಉರುತ ಇಲ್ಲದಿದ್ದರೂ, ತೋರ ಬಹುದು. ಒಳಗಣ ಇಂದ್ರಿಯಗಳ ಯಾವದಾ

1) ೧೪೭ನೇ ಇಸವಿ ಪಂಚಾಂಗದ ೩೩ನೇ ೩೪ನೇ ಪಾನುಗಳಲ್ಲಿ ೫೯ನೇ ಅಂಕೆಯನ್ನು ನೋಡು.

ದರೂ ಅಕ್ರಮದ ದೆಶೆಯಿಂದ ಉರುತವುಂಟೆಂದು ತೋರ ತಕ್ಕ ಬೇರೆ ಗುರುತುಗಳು ಕಾಣ ಬಹುದು.

ಚಿಕಿತ್ಸೆ: ಉರುತದ ವಿದ್ಯಮಾನಗಳನ್ನು ನೋಡಿ ಸಂಗತ್ಯಾನುಸಾರವಾಗಿ ಜಿಗಳೆಗಳನ್ನು (೧೧೫೫) ಕಚ್ಚಿಸ ಬಹುದು. ಬಿಸಿ ನೀರಿನ ಶೇಕ[1], ಒದ್ದೆ ವಸ್ತ್ರ ಕಟ್ಟುವದು (೧೧೬), ಶಿರ್ಕ ಮತ್ತು ಕಳ್ಳಿನ ನೀರಿನಿಂದ ಉರುತದ ಜಾಗವನ್ನು ತೊಳಿಯೋಣ[2], ನವಸಾಗರದ ನೀರು (೧೧೭), ಅಕ್ಕಿಯ ಹಿಲ್ಲವೆ ಅಕ್ಕಿಹುಡಿಯ ಒತ್ತಡ (೧೧೮) ಸಹ ಬಾಹ್ಯಚಿಕಿತ್ಸೆಯಾಗಿ ಮಾಡ ತಕ್ಕದ್ದು. ಶೀಸದ ಲವಣ[3] (Acetate of Lead) ೩೦ ಗ್ರೇನ್ (=೩೦ ಗುಲಗುಂಜಿತೂಕ) ತೆಗದು, ಒಂದು ಪ್ಯಾಂಟ್ (=ಅರ್ಧ ಬಾಟ್ಲಿ) ನೀರಿನಲ್ಲಿ ಹಾಕಿ, ಆ ನೀರಿನಿಂದ ಉರಿ ಇರುವ ಜಾಗವನ್ನು ತೊಳಿಯುವದರಿಂದ ಬಹಳ ಉಪಶಮನವಾಗುವದಲ್ಲದೆ, ಏನೂ ದೋಷ ಬರಲಿಕ್ಕಿಲ್ಲ. ಆ ನೀರಿನಲ್ಲಿ ಒಂದು ವಸ್ತ್ರ ತುಂಡನ್ನು ಅದ್ದಿ, ಉರಿಯುವ ಜಾಗೆಯ ಮೇಲೆ ಇಟ್ಟು, ಅದರ ಮೇಲೆ ಆಗ್ಯಾಗ್ಯೆ ಆ ನೀರು ಹಿನಿಸುತ್ತಾ ಯಾವಾಗಲು ತ್ಯಾವವಾಗಿ ಇರಿಸ ಬೇಕು.

೧೧೫. ಮೈಯಲ್ಲಿ ಎಲ್ಲ್ಯಾದರು ಉರುತ ಇರುವ ಸ್ಥಳದಲ್ಲಿ ಆಗಲಿ, ಹುಣ್ಣು ಬಾವು ಶುರುವಾಗುವಲ್ಲಿ ಆಗಲಿ, ಪೆಟ್ಟು ತಾಗಿದ್ದಲ್ಲಿ ಆಗಲಿ, ಉಳುಕಿ ಇಲ್ಲವೆ ಜಜ್ಜಿ ಹೋದಲ್ಲಿ ಆಗಲಿ, ನೋವೂ ಉರುತವೂ ಇದ್ದರೆ, ಅಲ್ಲಿ ೬ ಇಲ್ಲವೆ ೮ ಜಿಗಳೆಗಳನ್ನು ಕಚ್ಚಿಸಿ[4], ಆ ಮೇಲೆ ಬಿಸಿ ನೀರಿನ ಶೇಕ ಕೊಟ್ಟರೆ, ನೋವು ಶಮನವಾಗುವದಲ್ಲದೆ ಉರಿ ಸಹ ನಿಲ್ಲುವದು, ಅಂದರೆ ಆ ಜಾಗೆಯಲ್ಲಿ ರಕ್ತಗಟ್ಟದ ಹಾಗೆ ಮಾಡುವದು.

೧೧೬. ಘಾಯ, ಹುಣ್ಣು ಮುಂತಾದ್ದು ಆದ, ಇಲ್ಲವೆ ಉರಿಯುಳ್ಳ ಮೈಭಾಗದಲ್ಲಿ ಒದ್ದೆ ವಸ್ತ್ರ ಕಟ್ಟುವದು ಉಷ್ಣ ಪ್ರದೇಶಗಳಲ್ಲಿ ಒತ್ತಡ ಮುಲಾಮುಗಳಿಗಿಂತಲೂ ವಿಶೇಷ ಗುಣಕರವಾಗಿರುತ್ತದೆ. ಇದನ್ನು ಮಾಡುವದು ಏನೂ ಪ್ರಯಾಸವಲ್ಲ. ಹ್ಯಾಗಂದರೆ ದಪ್ಪ ವಸ್ತ್ರದ ತುಂಡನ್ನು (lint) ಆ ಘಾಯವನ್ನು ಇಲ್ಲವೆ ಉರಿ ಇರುವ ಜಾಗವನ್ನು ಪೂರ್ಣವಾಗಿ ಮುಚ್ಚುವಷ್ಟು ತೆಗದು, ಉಗುರುಬೆಚ್ಚಗೆ ನೀರಿನಲ್ಲಿ ನೆನೆ ಹಾಕಿ, ಅದನ್ನು ಆ ಉರಿಯುಳ್ಳ ಜಾಗದಲ್ಲಿ ಇಟ್ಟು, ಅದರ ಮೇಲೆ ಎಣ್ಣೆಯಲ್ಲಿ ಮುಳುಗಿಸಿದ ದೊಡ್ಡದೊಂದು ರೇಶ್ಮೆ ಅರಿವೆಯನ್ನು ಹಾಕಿ, ಅದು ಆರಿ ಹೋಗದ ಹಾಗೆ ಪೂರಾ ಮುಚ್ಚ ಬೇಕು. ಬಾಳೆ ಎಳೆ ತಿರೀ (ಚಿಗುರು ಎಲೆ) ಮೇಲೆ ಎಣ್ಣೆ ಹಾಕಿ ರೇಶ್ಮೆ ಅರಿವೆಯ ಬದಲಾಗಿ ಉಪಯೋಗಿಸ ಬಹುದು. ತಣ್ಣೀರು ರೋಗಿಗೆ ಹಿತಕರವಾಗುವದಾದರೆ, ಉಗುರುಬೆಚ್ಚಗೆ ನೀರಿನ ಬದಲಾಗಿ ತಣ್ಣೀರನ್ನು ಉಪಯೋಗಿಸ ಬಹುದು.

೧೧೭. ಮೈಯಲ್ಲಿ ಎಲ್ಲಿಯಾದರು ಜಜ್ಜಿ ಹೋದಲ್ಲಿ, ಉಳುಕು, ವಾತದಿಂದ ಉಂಟಾದ ಬೀಗು, ಮಾಂಸಗ್ರಂಥಿ ಬಾತು ಹೋಗೋಣ, ಶಿಡತವುಳ್ಳ ತೊಡೆವಾಳ, ಸಂದುಗಳು

1) ಇದೇ ಪಂಚಾಂಗದ ೪೧ನೇ ಪಾನಿನ ೧೦೯ನೇ ಅಂಕೆಯನ್ನು ನೋಡು.

2) ೧೯೭೬ನೇ ಇಸವಿ ಪಂಚಾಂಗದ ೩೧ನೇ ಪಾನಿನ ೩೨ನೇ ಅಂಕೆಯನ್ನು ನೋಡು.

3) ಇದು ಎಲಾಯತಿ ಔಷಧ ಮಾರುವ ಅಂಗಡಿಗಳಲ್ಲಿ ದೊರಕುತ್ತದೆ.

4) ಇದೇ ಪಂಚಾಂಗದ ೩೩-೩೪ನೇ ಪಾನುಗಳನ್ನು ಓದಿ ನೋಡು.

ಬಾತು ಹೋಗೋಣ, ಕುರು ಇತ್ಯಾದಿಗಳು,ಮತ್ತು ಮೈಭಾಗದಲ್ಲಿ ಎಲ್ಲ್ಯಾದರೂ ಆಗುವ ಉರಿ, ಈ ಮುಂತಾದಕ್ಕೆ ನವಸಾಗರ ೨ ದ್ರಮ್ (=ಶುಮಾರು ೨½ಪಾವಲಿತೂಕ) ತೆಗದು, ಒಂದು ಪ್ಯಾಂಟ್ (=೫ ಕುಡುತೆ) ಬಿಸಿ ನೀರಿನಲ್ಲಿ ಕರಗಿಸಿ, ನೋವುಳ್ಳಂಥ ಮೈ ಜಾಗವನ್ನು ಕೆಲವು ತಾಸುಗಳ ವರೆಗೆ ಆ ನೀರಲ್ಲಿ ತೋಯಿಸಿಡ ಬೇಕು. ಈ ಪ್ರಕಾರ ತೋಯಿಸುವದರಿಂದ ನೋವು ಉಪಶಮನವಾಗುವದಲ್ಲದೆ ಬೀಗು ಸಹಾ ಕಡಿಮೆಯಾಗುವದು. ಜಜ್ಜುವಿಕೆಯಿಂದಾಗಲಿ, ಉಳುಕಿನಿಂದಾಗಲಿ ರಕ್ತಗಟ್ಟಿ ಹೋದ್ದನ್ನು ತೆಗಿಯಲಿಕ್ಕೆ ಈ ಔಷಧದಷ್ಟು ಫಲಕರ ಬೇರೆ ಯಾವದೂ ಇಲ್ಲವೆಂತ ಹೇಳುತ್ತಾರೆ. ಕಣ್ಣಿಗೆ ಪೆಟ್ಟು ತಾಗಿದಲ್ಲಿ ಇದನ್ನು ಉಪಯೋಗಿಸಿದರಿಂದ ವಿಶೇಷ ಗುಣ ಕಂಡು ಬಂದದೆ.

೧೧೮. ಅಕ್ಕಿಯ ಪುಡಿಯಾಗಿಯೂ ಅದರ ಒತ್ತಡ ಮಾಡಿಯೂ ಚಿಕಿತ್ಸೆಯಲ್ಲಿ ಬಳಿಸುತ್ತಾರೆ; ಇದಲ್ಲದೆ ಗಂಜಿನೀರು ಮಾಡಿ ಸಹಾ ಉಪಯೋಗಿಸುತ್ತಾರೆ.

(*a.*) ಮೈಲಗಜ್ಜಿ, ಕೋರಾ (ಚಿಕ್ಕಮ್ಮ), ದದ್ದುರೋಗ, ಬೆವರ್ಸಾಲೆ ಮತ್ತು ಮೈತೊಗಲಿನ ಬೇರೆ ಉರುತವುಳ್ಳ ಪೀಡೆಯಲ್ಲಿ ಅಕ್ಕಿ ಹುಡಿಯನ್ನು ಅದರ ಮೇಲೆ ಚಿಮಿಕಿಸುವದರಿಂದ, ಅದು ತಣ್ಣಗಾಗಿಯೂ ಶಮನಕರವಾಗಿಯೂ ಮಾಡುತ್ತದೆ; ಅದು ರೋಗಿಗೆ ಹಿತಕರವಾಗಿ, ಉಷ್ಣವನ್ನೂ ಉರಿಯನ್ನೂ ನಿವಾರಿಸುತ್ತದೆ. ಮೈಯಲ್ಲಿ ಎಲ್ಲ್ಯಾದರೂ ಬೆಂಕಿ ತಗಲಿ ಬೆಂದ ಹುಣ್ಣಾಗಲಿ ಗುಳ್ಳೆಯಾಗಲಿ ಎದ್ದರೆ, ಅಕ್ಕಿಹಿಟ್ಟು ಒಳ್ಳೇ ಲೇಪನವಾಗಿರುತ್ತದೆ. ಈ ಅಪಾಯ ಉಂಟಾದ ಕ್ಷಣದಲ್ಲಿ ರಕ್ತವಾಗಲಿ ನೀರಾಗಲಿ ಸೋರಿ ಬಾರದ ಹಾಗೆ ಕೂಡುವಷ್ಟು ಅಕ್ಕಿಹಿಟ್ಟನ್ನು ಸುಟ್ಟ ಜಾಗದ ಮೇಲೆ ದಪ್ಪವಾಗಿ ಚಿಮಿಕಿಸಿ, ಅದಕ್ಕೆ ಘಾಳಿ ತಾಗದ ಹಾಗೆ ಮುಚ್ಚಿ ಭದ್ರ ಮಾಡ ಬೇಕು. ಕೆಲವು ದಿವಸಗಳೊಳಗೆ ಅದು ಘಟ್ಟಿಯಾಗಿ, ತುರಿ ಉಂಟಾದರೆ, ಅದು ಮೆತ್ತಗಾಗಿ ಸುಲಭವಾಗಿ ಮಾದು ಬರುವ ಹಾಗೆ, ಅಕ್ಕೀ ಒತ್ತಡವನ್ನು (ಪೋಲ್ಟಿಸ್) ಕಟ್ಟ ಬೇಕು. ಆ ಮೇಲೆ ಅದರ ಮೇಲ್ಭಾಗಕ್ಕೆ ಸುಣ್ಣದ ನೀರೂ ಇಪ್ಪೆ ಎಣ್ಣೆಯೂ ಸಮ ಭಾಗವಾಗಿ ಕೂಡಿಸಿ ಲೇಪಿಸ ಬೇಕು; ಇಲ್ಲವೆ ಗುಲುಗುಲುವೆಂಬ ಬಿಳೀ ರಾಳದ (ಡಾಮರು) ಮುಲಾಮು[1] ಹಚ್ಚ ಬೇಕು.

(*b.*) ಪೋಲ್ಟಿಸ್ ಮಾಡುವದು ಹ್ಯಾಗಂದರೆ—ಬಾಯಿ ಅಗಲವಿರುವ ಪಾತ್ರೆಯಲ್ಲಿ ತಕ್ಕಷ್ಟು ಅಕ್ಕಿ ಹುಡಿ ಹಾಕಿ, ಬೆಂಕೀ ಮೇಲೆ ಇಡ ಬೇಕು. ಅದು ಬೆಂದು ಹದವಾಗುವ ವರೆಗೆ ಅದಕ್ಕೆ ಆಗ್ಯಾಗ್ಯೆ ನೀರು ಬೆರಿಸುತ್ತಾ ಸೌಟಿನಿಂದ ಚಾಳಿಸುತ್ತಿರ ಬೇಕು. [ಇನ್ನು ಸುಲಭವಾಗಿ ತಯಾರು ಮಾಡುವ ರೀತಿ ಹ್ಯಾಗಂದರೆ: ಒಂದು ತಾಂಬಾಣದಲ್ಲಿ ಒಂದಿಷ್ಟು ಅಕ್ಕಿ ಹುಡಿಯನ್ನು ಹಾಕಿ, ಅದಕ್ಕೆ ಕುದಿಯುವ ನೀರನ್ನು ಸ್ವಲ್ಪ ಸ್ವಲ್ಪ ಶೇರಿಸಿ, ಮೇಲೆ ಹೇಳಿದ ಪ್ರಕಾರ ಕದಲುಸುತ್ತಿರ ಬೇಕು.] ಈ ಪ್ರಕಾರ ತಯಾರು ಮಾಡಿದ ಒತ್ತಡವನ್ನು ಬೇಕಾದಷ್ಟು ಅಗಲ ಇರುವ ಒಂದು ಅರಿವೇ ತುಂಡಿನ ಮೇಲೆ ಶುಮಾರು ½ ಇಲ್ಲವೆ ¾ ಇಂಚ್ ದಪ್ಪವಾಗಿ ಹಾಸಿ, ರೋಗವುಳ್ಳ ಜಾಗಕ್ಕೆ ಕಟ್ಟ ಬೇಕು. ಕಟ್ಟುವದಕ್ಕೆ ಮುಂಚೆ, ಅನೇಕ ಸಂಗತಿಗಳಲ್ಲಿ ಆ ಪೋಲ್ಟಿಸಿನ ಮೇಲೆ ಸ್ವಲ್ಪ

1) ಈ ಮುಲಾಮಿನ ವಿಷಯದಲ್ಲಿ ೧೧೬೬ನೇ ಇಸವಿ ಪಂಚಾಂಗದ ೫೬ನೇ ಪಾನಿನಲ್ಲಿರುವ ೬೧ನೇ ಅಂಕೆಯನ್ನೂ ಅದರ ಟಿಪ್ಪಣಿಯನ್ನೂ ನೋಡು.

ಎಣ್ಣೆ ಹಚ್ಚಿದರೆ ಆದೀತು; ಯಾಕಂದರೆ ಹೀಗೆ ಮಾಡಿದರಿಂದ ಮತ್ತೂ ಶಮನಕರವಾಗಿ, ಆ ಒತ್ತಡವು ಹೆಚ್ಚು ಸಮಯ ಮೆತ್ತಗಾಗಿಯೂ ತ್ಯಾವವಾಗಿಯೂ ಇರಿಸುತ್ತದೆ, ಮತ್ತು ಮೈಗೆ ಅಂಟಿ ಕೊಳ್ಳುವದಿಲ್ಲ. ಅಕ್ಕಿಯ ಒತ್ತಡವು ದಿನಕ್ಕೆ ಎರಡು ಮೂರಾವರ್ತಿಯಾದರೂ ಬದಲಿಸುತ್ತಿರ ಬೇಕು. ಇಂಥಾ ಒತ್ತಡವು ಹುಣ್ಣು, ಬಾವು, ಕುರು, ತೊಡೆವಾಳ ಮುಂತಾದ ಉರಿಯುಳ್ಳ ಮೈಗಾಡುಗಳಿಗೂ ಮೂಲವ್ಯಾಧಿಗೂ ಬಹಳ ಗುಣಕರವಾಗಿರುತ್ತದೆ.

(೮.) ಗಂಜಿ ನೀರು ಅಂದರೆ ಒಂದು ಔನ್ಸ್ (=೨೪ ತೊಲೆ) ತೊಳದ ಬೆಳ್ತಿಗೆ ಅಕ್ಕಿಯನ್ನು ಒಂದು ಬಾಟ್ಲಿ (=ಸುಮಾರು ೫ ಸೇರು) ನೀರಿನಲ್ಲಿ ಹಾಕಿ, ೩೦ ನಿಮಿಷಗಳ ವರೆಗೆ ಬೇಯಿಸ ಬೇಕು. ಆ ಮೇಲೆ ಅದನ್ನು ಗಾಳಿಸಿ ತೆಗದ ನೀರಿಗೆ ರುಚಿ ಹಿಡಿಯುವಷ್ಟು ಸ್ವಲ್ಪ ಸಕ್ಕರೆ, ಬೇಕಾದರೆ ಸ್ವಲ್ಪ ಲಿಂಬೆ ರಸ ಸಹಾ ಹಾಕಿ, ತಕ್ಕೊಳ್ಳುವದು. ಈ ಪಾನವು ಯಾವ ವಿಧದ ಉರುತಕ್ಕೂ ಮಾತ್ರವಲ್ಲ, ಜ್ವರ, ಕೆಂಜ್ವರ, ಮೈಲಗಜ್ಜಿ, ಕೋರಾ (ಚಿಕ್ಕಮ್ಮ) ಮುಂತಾದ ರೋಗಗಳಲ್ಲಿ ಸಹಾ ಉತ್ತಮವಾಗಿರುತ್ತದೆ. ಅದಲ್ಲದೆ ಮೇಹದ ರೋಗದಲ್ಲಿಯೂ ಮೂತ್ರ ಹೋಗುವಾಗ ನೋವೂ ತೊಡಕೂ ಆಗುವ ಸಂಗತಿಯಲ್ಲಿಯೂ ಕೊಡುತ್ತಾರೆ.

ಉಳುಕು, ಪೆಟ್ಟು, ಜಜ್ಜು ಹೋಗುವದು

Sprains, Blows, and Bruises.

ಇದಕ್ಕೆ ನವಸಾಗರದ ನೀರು (೧೧೭ನೇ ಅಂಕೆಯಲ್ಲಿ ನೋಡು), ಬಿಸಿ ನೀರಿನ ಶೇಕ (೧೧೯ನೇ ಅಂಕೆಯಲ್ಲಿ ನೋಡು), ಇಲ್ಲವೆ ಬತ್ತುವ ಲೇಪ[1] ಪ್ರಾರಂಭ ಸ್ಥಿತಿಯಲ್ಲಿ ಮಾಡ ತಕ್ಕ ಔಷಧಗಳಾಗಿರುತ್ತವೆ. ವಿಶೇಷ ಬಾತು ಹೋಗಿ, ಅಲ್ಲಿಯ ಚರ್ಮವು ಕಾದು ಇದ್ದರೆ, ಬಿಗಳೆಗಳನ್ನು[2] ಕಚ್ಚಿಸ ಬೇಕಾದೀತು. ಜುರುಕುಳ್ಳ ಚಿನ್ನೆಗಳು ಉತಾರಾಗುತ್ತಲೇ ಕರ್ಪೂರದ ತೈಲ್ಯ (೧೧೯), ಅಫೀನಿ (೧೨೦), ಮಜ್ಜಿಗೆಹುಲ್ಲಿನ ಎಣ್ಣೆ (೧೨೧), ಇಲ್ಲವೆ ಟರ್‌ಪೆಂಟ್ಯಾನ (೧೨೨) ಸಹಾ ಉಪಯೋಗಿಸ ಬಹುದು. ಉಳುಕುಗಳಲ್ಲಿ ಬಿಸಿ ಶೇಕಗಳು, ಮತ್ತು ಉಳುಕಿದ ಭಾಗವನ್ನು ಪೂರಾ ವಿಶ್ರಾಂತಿಯಾಗಿರಿಸುವದು ಮೊದಲನೇ ಕೆಲವು ದಿವಸಗಳಲ್ಲಿ ಅತಿ ಉತ್ತಮವಾಗಿರುತ್ತದೆ. ಉಳುಕಿದ ಭಾಗವನ್ನು ಸ್ವಲ್ಪ ಎತ್ತರವಾಗಿ ಇಟ್ಟು, ಅದಕ್ಕೆ ತಕ್ಕ ಆಧಾರವನ್ನು ಕೊಟ್ಟು ಇರಿಸ ಬೇಕಲ್ಲದೆ, ಯಾವ ಕಾರಣದಿಂದಾದರೂ ಕೆಳಗೆ ತೂಗಾಡಿಸ ಬಾರದು. ಗಿರಿಗೆ ಉಳುಕಿ ಹೋದಲ್ಲಿ ಮುಂದಿನ ಚಿಕಿತ್ಸೆ ಅತಿ ವಿಶೇಷ ಗುಣಕರವೆಂದು ಹೇಳುತ್ತಾರೆ. ಆ ಚಿಕಿತ್ಸೆ ಏನಂದರೆ: ಅವಘಡ ಸಂಭವಿಸಿದಾಗ ಕೂಡುವಷ್ಟು ತ್ವರ್ಯದಲ್ಲಿ ಒಂದು ಮರಿಗೆಯಲ್ಲಿ ಬಿಸಿ ನೀರನ್ನು ಹಾಕಿ, ಅದರಲ್ಲಿ ಪಾದವನ್ನು ೧೦ ನಿಮಿಷಗಳ ವರೆಗೆ ಮುಳುಗಿಸಿ ಇಡ ಬೇಕು.

1) ೧೪೭೬ನೇ ಇಸವಿ ಪಂಚಾಂಗದ ೩೧ನೇ ಪಾನಿನ ೩೨ನೇ ಅಂಕೆಯನ್ನು ನೋಡು.—ಕಳ್ಳೂ ನೀರೂ ತಿರ್ಗವೂ ಸಮ ಭಾಗ ಕೂಡಿಸಿ ಮಾಡುವ ಈ ಲೇಪದ ನೀರು ಪೆಟ್ಟು ತಾಗಿದಕ್ಕೂ ಉಳುಕಿಗೂ ನಜ್ಜು ಗುಜ್ಜು ಆದ್ದಕ್ಕೂ ಮೈಯ ಒಂದು ಭಾಗದಲ್ಲಿ ಮಾತ್ರ ಇರುವ ಉರುತಕ್ಕೂ ಗುಣಕರವಾಗಿ ಹಚ್ಚುತ್ತಾರೆ.

2) ಇದೇ ಪಂಚಾಂಗದ ೩೩-೩೫ನೇ ಪಾನುಗಳಲ್ಲಿರುವ ೪ನೇ ಪರಿಶಿಷ್ಟ ಓದಿ ನೋಡು.

ಆ ಮೇಲೆ ಇನ್ನೊಂದು ಮರಿಗೆಯಲ್ಲಿ ತಣ್ಣೀರು ತುಂಬಿಸಿ, ಅದೇ ಪ್ರಕಾರ ಪಾದವನ್ನು ಮುಳುಗಿಸಿಡ ಬೇಕು. ಅದರ ತರುವಾಯ ಒದ್ದೆಯಾದ ಒಂದು ವಸ್ತ್ರದ ಪಟ್ಟಿಯನ್ನು ಉಳುಕಿದ ಭಾಗದ ಮೇಲೆ ಬಿಮ್ಮಗೆ ಕಟ್ಟಿ, ಎಣ್ಣೆಯಲ್ಲಿ ಅದ್ದಿದ ರೇಶ್ಮೆ ಅರಿವೇ ಚಿಂದಿಯಿಂದಾಗಲಿ ಬಾಳೆಯೆಲೆಯಿಂದಾಗಲಿ ಅಥವಾ ಘಾಳಿ ಪ್ರವೇಶವಾಗಗೊಡದ ಬೇರೆ ಯಾವದರಿಂದಾಗಲಿ ಮುಚ್ಚ ಬೇಕು. ಆ ಮೇಲೆ ಉಂಟಾಗುವ ನೀರುಗಾವಿಗೆ ಪಟಿಕಾರದ ನೀರು (೧೨೩) ಹಚ್ಚಿ ವಾಸಿಯಾಗುವದು. ಛಾಯಾಭೇದವಾದದಕ್ಕೆ ನವಸಾಗರದ ನೀರು (೧೧೭) ಹಚ್ಚ ಬೇಕು.

೧೧೯. ಕರ್ಪೂರದ[1] ತೈಲ್ಯ ಮಾಡುವದು ಹ್ಯಾಗಂದರೆ: ೧ ಔನ್ಸ್ (=೨೨ತೊಲೆ) ಕರ್ಪೂರವನ್ನು ೬ ಔನ್ಸ್ (=ಸುಮಾರು ೧೨ ಕುಡುತೆ) ತೆಂಗಿನ ಇಲ್ಲವೆ ಎಳ್ಳಿನ ಎಣ್ಣೆಯಲ್ಲಿ ಇಲ್ಲವೆ ಬೇರೆ ಯಾವದಾದರೂ ಎಣ್ಣೆಯಲ್ಲಿ ಕಲಸಿ, ಚನ್ನಾಗಿ ಮರ್ದಿಸ ಬೇಕು. ಈ ತೈಲ್ಯ ದೀರ್ಘಕಾಲದ ಶೋಣಿತವಾತ, ನಡುನೋವು, ಸಂದುಗಳ ಬಾವು, ಮಾಂಸಗ್ರಂಥಿಯ ನೀರುಗಾವು, ಜಜ್ಜುವಿಕೆಗಳು, ಉಳುಕುಗಳು, ಮುಖ್ಯವಾಗಿ ಗರ್ಭಿಣಿಯಾದ ಅಥವಾ ಮುಟ್ಟಾದ ಕಾಲದಲ್ಲಿ ಉಂಟಾಗುವ ನರಗಳ ವೇಧನೆ ಮತ್ತು ಬೇರೆ ಪಾರ್ಶ್ವವೇಧನೆಗಳಿಗೆ ಉತ್ತಮ ಲೇಪನವಾಗಿರುತ್ತದೆ. ಇದನ್ನು ದಿನಾಲು ರಾತ್ರಿಯೂ ಬೆಳಿಗ್ಯೆಯೂ ೧೦-೧೫ ನಿಮಿಷಗಳ ವರೆಗೆ ಚನ್ನಾಗಿ ತಿಕ್ಕಿ ಕೊಳ್ಳ ಬೇಕು.

೧೨೦. ದೀರ್ಘಕಾಲದ ಶೋಣಿತವಾತ, ಕಟಿವಾತ, ನರಗಳ ಮತ್ತು ಹರಿವಾತ ಸಂಬಂಧವಾದ ನೋವುಗಳು, ಶಟಬೇನೆ, ಜಜ್ಜಿಕೆ, ಮಾಂಸಗ್ರಂಥಿ ಬಾತು ಹೋಗೋಣ, ಕಳ್ಳಬಾವು (ಕೆಪ್ಪಟರಾಯ) ಮುಂತಾದ ಹೊರಗಣ ಇಲ್ಲವೆ ಮೈಯಲ್ಲಿ ಆಗುವ ಆಯಾ ಜಾಗದ ರೋಗಗಳಿಗೆ ಅಫೀನಿಯ ತೈಲ್ಯವು ಬಹಳ ಪ್ರಯೋಜನವುಳ್ಳದ್ದು. ಅದನ್ನು ಅರುಕ್ಷಣದಲ್ಲಿ ಮಾಡ ಬಹುದು. ಅಂಗಡಿಗಳಲ್ಲಿ ಶಿಕ್ಕುವ ೧ ದ್ರಮ್ (=೧/೮ ಪಾವಲಿತೂಕ) ಅಫೀನನ್ನು ೨ ಔನ್ಸ್ (=ಸುಮಾರು ೨/೩ ಕುಡುತೆ) ತೆಂಗಿನ ಎಣ್ಣೆಯಲ್ಲಿ ಆಗಲಿ, ಎಳ್ಳೆಣ್ಣೆಯಲ್ಲಿ ಆಗಲಿ, ಬೇರೆ ಯಾವ ಸಾಧಾರಣ ಎಣ್ಣೆಯಲ್ಲಿ ಆಗಲಿ ಕಲಕಿಸಿ ಹಚ್ಚುವದು. ಅದರ ಸಂಗಡ ಅಷ್ಟೇ (೧೧೯ನೇ ಅಂಕೆಯಲ್ಲಿ ಹೇಳಿರುವ) ಕರ್ಪೂರದ ತೈಲ್ಯವನ್ನು ಕೂಡಿಸಿದರೆ, ವೇಧನೆಯುಳ್ಳ ಜಾಗಕ್ಕೆ ಉತ್ತಮ ಬಾಹ್ಯ ಲೇಪನವಾಗಿರುತ್ತದೆ. ಇದನ್ನು ಒಂದು ಅಡಕ ಬಾಯಿಯುಳ್ಳ ಬಾಟ್ಲಿಯಲ್ಲಿ ಹಾಕಿ ಇಡ ಬೇಕು. ಇದರಿಂದ ಬೆಳಿಗ್ಯೆಯೂ ರಾತ್ರೆಯೂ, ಅವಶ್ಯವಿದ್ದರೆ ಹೆಚ್ಚು ಸರ್ತಿ ಆದರೂ, ಹಚ್ಚ ತಕ್ಕದ್ದು. ಹಚ್ಚುವಾಗ್ಯೆ ಬಾಟ್ಲಿಯನ್ನು ಚನ್ನಾಗಿ ಅಲಗಾಡಿಸ ಬೇಕು. ಈ ತೈಲ್ಯವನ್ನು ಸುಲಿದ ಯಾ ಹುಣ್ಣು ಇರುವ ಚರ್ಮಕ್ಕೆ ಹಚ್ಚ ಬಾರದು; ಮತ್ತು ಸ್ವಸ್ಥದ ಸ್ಥಿತಿಯಲ್ಲಿರುವ ಮೈಗೆ ಹಚ್ಚ ತಕ್ಕದೇ ಹೊರ್ತು ಬಿಸುವಾಗಲಿ ಕೆಂಪಗಾಗಲಿ ಇದ್ದು ವೇಧನೆಯುಳ್ಳ ಜಾಗಕ್ಕೆ ಹಚ್ಚ ತಕ್ಕದಲ್ಲ. ಅಂಥಾ ಸಂಗತಿಯಲ್ಲಿ ನವಸಾಗರದ ನೀರು (ಇದು ೧೧೭ನೇ ಅಂಕೆಯಲ್ಲಿ ನೋಡು.) ಆಗಲಿ, ಶಿರ್ಕ ಮತ್ತು ಕಳ್ಳು ಹಾಕಿ ಮಾಡಿದ ಲೇಪವಾಗಲಿ (೨೨)[2] ಹಾಕ ಬಹುದು.

1) ಇದೇ ಪಂಚಾಂಗದ ೬೬ನೇ ಪಾನಿನ ಅಡಿಯಲ್ಲಿ ೧ನೇ ಟಿಪ್ಪಣಿ ನೋಡು.

2) ಈ ಅಂಕೆಯನ್ನು ೧೯೬೬ನೇ ಇಸವಿ ಪಂಚಾಂಗದ ೩೧ನೇ ಪಾನಿನಲ್ಲಿಯೂ ಇದೇ ಪಂಚಾಂಗದ ೪೬ನೇ ಪಾನಿನ ೧ನೇ ಟಿಪ್ಪಣಿಯಲ್ಲಿಯೂ ನೋಡು.

೧೨೧. ದೀರ್ಘಕಾಲದ ವಾತ, ಕಟಿವಾತ, ಹರಿವಾತದ ನೋವು, ಉಳುಕು, ಮತ್ತು ನರಗಳ ಸಂಬಂಧವಾದ ಇತರ ವೇಧನಕರ ವ್ಯಾಧಿಗಳಿಗೆ ವಾಸನೆಹುಲ್ಲಿನ (ಮಜ್ಜಿಗೆ ಹುಲ್ಲಿನ)[1] ಎಣ್ಣೆಯೂ ಬೇರೆ ಯಾವದಾದರೂ ಎಣ್ಣೆಯೂ ಸಮ ಭಾಗದಲ್ಲಿ ತೆಗದು, ಚನ್ನಾಗಿ ಮಿಶ್ರ ಮಾಡಿ, ದಿನಕ್ಕೆ ಎರಡಾವರ್ತಿ ಹಚ್ಚಿ, ಚನ್ನಾಗಿ ಉಜ್ಜಬೇಕು. ಇದರಿಂದ ಅನೇಕ ಸಂಗತಿಗಳಲ್ಲಿ ಪ್ರಯೋಜನ ಬಂದದೆ. ದೀರ್ಘಕಾಲದ ಹಳೆ ರೋಗಗಳಲ್ಲಿ ಈ ತೈಲ್ಯವು ಬೇರೆ ಎಣ್ಣೆ ಬೆರಿಸದೆನೇ ಆ ಎಣ್ಣೆ ಮಾತ್ರ ಹಚ್ಚಿದ್ದಾದರೆ ಗುಣ ಬರುವದು.

೧೨೨. ಟರ್‌ಪೆಂಟ್ಯಾನ್ ಎಣ್ಣೆಯಿಂದ ಮಾಡುವ ಲೇಪವು ದೀರ್ಘಕಾಲದ ವಾತರೋಗ, ಕಟಿವಾತ, ಸೊಂಟನೋವು, ಬೇರೆ ವಿಧದ ಹರಿವಾತ, ದೀರ್ಘಕಾಲದ ಸಂದುಗಳ ಬೆಳವು, ಪೆಟ್ಟು, ಉಳುಕು, ನರಗಳ ನೋವು, ಇಂಥಾದ್ದರಲ್ಲಿ ಹಚ್ಚಿ ಗುಣವಾಗುವದು. ಅದನ್ನು ಮಾಡುವದು ಹ್ಯಾಗಂದರೆ: ೧ ಔನ್ಸ್ (=೨೯ ತೊಲೆ) ಆರ್ತಿ ಕರ್ಪೂರ, ೧೬ ಔನ್ಸ್ (=೪೦ ತೊಲೆ) ಟರ್‌ಪೆಂಟ್ಯಾನ್ ಎಣ್ಣೆಯಲ್ಲಿ ಕಲಕಿಸಿ, ಅದಕ್ಕೆ ೨ ಔನ್ಸ್ (=೫ ತೊಲೆ) ಮೆತ್ತಗಾದ ಸಾಬೂನನ್ನು ಕೂಡಿಸಿ, ಅದು ಸಮ್ಮಿಶ್ರವಾಗಿ ಒಂದೇ ರಸವಾಗುವ ಹಾಗೆ ಚನ್ನಾಗಿ ಚಾಳಿಸ ಬೇಕು.

೧೨೩. ಸಂದುಗಳ, ಮುಖ್ಯವಾಗಿ ಮೊಣಕಾಲ ಗಂಟುಗಳ ಬೆಳವು, ಪೆಟ್ಟಿನಿಂದಾಗಲಿ ಜಜ್ಜಿ ಹೋದ್ದರಿಂದಾಗಲಿ ಉಂಟಾಗುವ ನೀರುಗಾಡಿಗೆ ಹೊರಗೆ ಹಚ್ಚ ತಕ್ಕ ಗುಣಕರ ಔಷಧವೇನಂದರೆ: ೪ ದ್ರಮ್ (=೫ ಪಾವಲಿತೂಕ) ಪಟಿಕಾರವನ್ನು ಶಿರ್ಕ ಮತ್ತು ಕಳ್ಳು ಒಂದೊಂದು ಅರೆ ಬಾಟ್ಲಿ (=ಸುಮಾರು ೫ ಕುಡುತೆ) ಇವೆರಡರಲ್ಲಿ ಹಾಕಿ, ಮೂರು ಬಗೆಯನ್ನು ಚನ್ನಾಗಿ ಚಾಳಿಸಿ, ಆ ವೇಧನೆಯುಳ್ಳ ಭಾಗಕ್ಕೆ ಚನ್ನಾಗಿ ಹಚ್ಚಿ ತಿಕ್ಕ ಬೇಕು. ಮತ್ತು ಅದರ ಮೇಲೆ ಆ ಮಿಶ್ರದಲ್ಲಿ ಮುಳುಗಿಸಿದ ಒಂದು ಅರಿವೆ ತುಂಡನ್ನು ಇಟ್ಟು, ಅದನ್ನು ಆಗ್ಯಾಗ್ಯೆ ತೋಯಿಸುತ್ತಾ ಇರ ಬೇಕು.

---

1) *Engl.* Lemon-grass oil; ಹಿಂದು: ಅಕ್ಕಿಯಾಘಾಸ್ಕಾ ಅತರ್; ದಖ: ಹಜಾರಮುಸಾಲೇಕಾ ಅತರ್; ತಮು: ವಾಶನಪುಲ್ಲು ಎಣ್ಣೆಯ್, ಕರ್ಪೂರಪುಲ್ಲು ಎಣ್ಣೆಯ್, ತೆಲು: ನಿಮ್ಮಗಡ್ಡಿ ನೂನಯೆ, ಚಿವ್ವಗಡ್ಡನೂನಯೆ; ಮಲ: ವಾಸನಪುಲ್ಲು ಎಣ್ಣಾ, ಸಂಭಾರಪುಲ್ಲು ಎಣ್ಣಾ.—ಹಿಂದುಸ್ಥಾನದ ಗಂಧಸರಕಿನ ಅಂಗಡಿಗಳಲ್ಲಿ ತಿಕ್ಕುವ ಈ ಮಜ್ಜಿಗೆಹುಲ್ಲಿನ ಎಣ್ಣೆ ಹಲವು ವಿಧಗಳಾಗಿದ್ದು, ತೋರಿಕೆಯಲ್ಲಿ ಸ್ವಲ್ಪ ಭೇದವಾಗಿರ ಬಹುದು. ಆದರೆ ಆ ಎಣ್ಣೆಯೆಲ್ಲಾ ಹೆಚ್ಚುಕಡಿಮೆಯಾಗಿ ಒಂದೇ ಔಷಧಗುಣವುಳ್ಳದ್ದಾಗಿ, ಹೊಟೆಯಲ್ಲಿ ತಕ್ಕೊಂಡರೂ, ಹೊರಗೆ ಹಚ್ಚಿದರೂ, ಜೋರುಳ್ಳ ಉತ್ತೇಜಕವಾಗಿ ಪ್ರವರ್ತಿಸುತ್ತದೆ. ಮಜ್ಜಿಗೆ ಹುಲ್ಲಿನ ನಿಜವಾದ ಎಣ್ಣೆಯು ತುಪ್ಪಾರು ಅರೆಬಿಳುಪಾದ (sherry wine) ಶರಿವಾಯ್ನಿನಂತೆ ಸ್ವಚ್ಛವಾಗಿದ್ದು, ರುಚಿಗೆ ತೀಕ್ಷ್ಣವಾಗಿಯೂ ಸರಿಸುಮಾರು ಲಿಂಬೆಹಣ್ಣಿನ ವಾಸನೆಯುಳ್ಳದ್ದಾಗಿ ಇರುತ್ತದೆ.

ಕನಸಿನಿಂದ ಒಬ್ಬನಿಗೆ ಬುದ್ಧಿ ಕಲಿಸಿದ್ದು.

ಮನುಷ್ಯರೆಲ್ಲರಿಗೆ ಈ ಲೋಕದಲ್ಲಿರುವ ವರೆಗೆ ದೇವರಿಟ್ಟಿರುವ ಒಂದು ಕ್ರಮ ವೇನಂದರೆ—ಗೇದು ತಿನ್ನ ಬೇಕು ಎಂಬದು. ಅನೇಕರು ಈ ಕ್ರಮಕ್ಕೆ ವಶವಾಗದೆ, ಗೇಯದೆ ತಿನ್ನಲಿಕ್ಕೆ ಪೇಚಾಡುತ್ತಾರೆ. ಅದರಲ್ಲಿಯೇ ದೇವರ ಶಿಕ್ಷೆ ಉಂಟು. ಹ್ಯಾಗಂದರೆ ಅಂಥವರ ಮನಸ್ಸಿನಲ್ಲಿ ಎಷ್ಟೋ ಕರಕರೆ, ಎಷ್ಟೋ ಕೆಟ್ಟ ಆಶೆ ಆಲೋಚನೆಗಳು ಹುಟ್ಟುತ್ತವೆ. ಗೇದು ತಿನ್ನುವದು ಮನುಷ್ಯನಿಗೆ ಬಹಳ ಒಳ್ಳೇದು; ಆದರೆ ನಾವು ಗೇಯುವದರಿಂದಲೇ ಎಲ್ಲಾ ಆಗುತ್ತದೆಂದು ನೆನಸ ಬಾರದು. ನಾವು ಗೇಯುವದಕ್ಕೆ ದೇವರು ತನ್ನ ಆಶೀರ್ವಾದ ಕೊಡುವದೇ ಮುಖ್ಯವಾದದ್ದು. ಅದು ಶಿಕ್ಕುವ ಹಾಗೆ ನಾವು ಆತನಿಗೆ ಪ್ರಾರ್ಥಿಸ ಬೇಕು. ಹೀಗೆ ನಾವು ಪ್ರಾರ್ಥಿಸುವವರಾಗಿ, ನಂಬಿಕೆಯಿಂದ ಗೇದು, ಎಲ್ಲಾದಕ್ಕೆ ದೇವರ ಆಶೀರ್ವಾದವನ್ನು ಕಾಯುತ್ತಾ, ಕಾಲಕ್ಷೇಪ ಮಾಡಲಿಕ್ಕೆ ಪ್ರಯತ್ನಿಸುತ್ತಾ ಇರುವಾಗ ಆಗಿಂದಾಗ್ಗೆ ಸ್ವಲ್ಪ ಕಷ್ಟ ಬಂದರೂ, ನಾವು ಎಲ್ಲಾ ಚಿಂತೆಯನ್ನು ದೇವರ ಮೇಲೆ ಹೊರಳಿಸಿ, ಸಮಾಧಾನದಿಂದ ಬದುಕ ಬಹುದು. ಹೀಗೆ ಕೆಲವು ವರುಷಗಳ ಹಿಂದೆ ಒಂದಾನೊಂದು ಕ್ಷಾಮಕಾಲದಲ್ಲಿ ಒಬ್ಬ ಕೇವಲ ಬಡವನಾಗಿದ್ದ ಕೂಲಿಕೆಲಸ ಮಾಡುವವನು ಹೆಂಡತಿ ಮಕ್ಕಳ ಸಮೇತವಾಗಿ ಬದುಕುತ್ತಾ, ಎಲ್ಲೆಲ್ಲಿಗೂ ಹೋಗಿ, ಕೆಲಸ ಹುಡುಕಿದಾಗ್ಯೂ ಸಿಕ್ಕದೆ ಹೋದ ಕಾರಣ, ಕಾಲಕ್ಷೇಪ ಮಾಡಲಿಕ್ಕೆ ತಕ್ಕಷ್ಟು ಅಕ್ಕಿ ಸಂಬಾರ ಇತ್ಯಾದಿ ಜೀನಸುಗಳನ್ನು ಕೊಂಡುಕೊಳ್ಳಲಿಕ್ಕೆ ಏನೂ ಸಂದರ್ಭವಿಲ್ಲದೆ ಹೋದ ಸಮಯದಲ್ಲಿ ಅವನು ಬಹು ದುಃಖಾಕ್ರಾಂತನಾಗಿ ಕೂತು ಕೊಂಡು, ಇನ್ನು ಏನು ಮಾಡಲಿ, ಕೈಯಲ್ಲಿ ಏನೂ ಇಲ್ಲ, ಸಾಲ ಮಾಡಲಿಕ್ಕಾಗದು, ಇನ್ನು ಹಸಿವೆಯಿಂದ ಸಾಯೋದಲ್ಲದೆ ನನಗೂ ನನ್ನ ಹೆಂಡತಿ ಮಕ್ಕಳಿಗೂ ಗತಿ ಏನು? ಎಂದು ಆಲೋಚನೆ ಮಾಡಿ, ನಿದ್ರೆಗೈದನು. ಆ ನಿದ್ದೆಯಲ್ಲಿ ಅವನೊಂದು ಕನಸು ಕಂಡನು. ಅದೇನಂದರೆ—ದೇವದೂತನೊಬ್ಬನು ತನ್ನ ಬಳಿಗೆ ಬಂದು, ಮೊಣಕಾಲೂರಿ, ಭೂಪರಲೋಕಗಳನ್ನು ಉಂಟು ಮಾಡಿದ ಕರ್ತನ ಕಡೆಗೆ ನನ್ನ ಕಣ್ಣುಗಳನ್ನು ಎತ್ತುತ್ತೇನೆಂದು, ಪ್ರಾರ್ಥನೆ ಮಾಡಿದನು. ಅನಂತರ ಮತ್ತೊಬ್ಬ ದೂತನು ಬಂದು, ಮನೆಯ ಹತ್ತರ ಇರುವ ತೋಟದಲ್ಲಿ ನೆಲ ಅಗಿದು, ಅದರೊಳಗಿಂದ ಗಡ್ಡೆಗಳನ್ನು ತೆಗದು, ನಿನ್ನ ಮುಖದ ಬೆವರನ್ನು ಹೀರಿ ನಿನ್ನ ಆಹಾರ ತಿನ್ನ ಬೇಕೆಂದು ಹೇಳಿದನು. ಅಷ್ಟರೊಳಗೆ ಮೂರನೇ ದೂತನು ಬಂದು, ಎರಡನೆಯವನು ಅಗಿದು ತೆಗದಿಟ್ಟಿದ್ದ ಗಡ್ಡೆಗಳನ್ನು ಹೆಕ್ಕಿ, ಏನಾದರೂ ಹಾಳಾಗದ ಹಾಗೆ ಉಳಿದದ್ದನ್ನು ಕೂಡಿಸಿ, ಭದ್ರವಾಗಿಡಿರೆಂದು ಹೇಳಿದನು. ಈ ಕನಸು ಕಂಡು, ಆ ಬಡ ಕೂಲಿ ಆಳು ಎಚ್ಚತ್ತು, ಈ ಮೂರು ಮಂದಿ ದೂತರು ಮಾಡಿದ್ದನ್ನೂ ಮಾತಾಡಿದ್ದನ್ನೂ ಕುರಿತು ಆಲೋಚಿಸಿ, ಈ ಕನಸಿನಿಂದ ದೇವರು ನನಗೆ ಒಳ್ಳೇ ಬುದ್ಧಿ ಹೇಳಿದ್ದಾನೆ; ಇದು ನನಗೆ ವ್ಯರ್ಥವಾಗಿ ಹೋಗ ಬಾರದೆಂದು, ಇದರಿಂದಲೇ ದೇವರು ನನ್ನನ್ನು ನೋಡಿ, ನನಗೂ ನನ್ನ ಸಂಸಾರಕ್ಕೂ ಸಹಾಯ ಮಾಡಿ, ಕಾಲಕ್ಷೇಪಕ್ಕೆ ಬೇಕಾದಷ್ಟನ್ನು ಕೊಡುತ್ತಾನೆಂದು ಧೈರ್ಯ ಹಿಡಿದು, ಅಂದಿನಿಂದ ಸ್ವಲ್ಪವಾದರೂ ಹೆಚ್ಚಿಗೆ ಉಳಿದಿದ್ದ ಸಮಯದಲ್ಲಿ ನಂಬಿಗೆಯಿಂದ ತನ್ನ ಕೆಲಸ ಮಾಡಿ, ತಾನು ಮಾಡುವ ಕಷ್ಟಕ್ಕೆ ದೇವರು ತನ್ನ ಆಶೀರ್ವಾದ ಕೊಡ ಬೇಕೆಂದು ಬೇಡುತ್ತಾ ಸಂತೋಷದಿಂದ ಬದುಕಿದನು.

The late Amir Shere Ali.

ಅಫಘಾನಿಸ್ಥಾನದ ಮೃತವಾದ ಅಮೀರ್ ಶೇರ್ ಅಲಿ.

ವರ್ತಮಾನಸಂಗ್ರಹ.

ಈ ವರ್ಷದಲ್ಲಿ ನಮ್ಮ ದೇಶದಲ್ಲಿ ನಡದ ರಾಜಕೀಯ ಕಾರ್ಯಗಳಲ್ಲಿ ಅಫಘಾನಿ ಸ್ಥಾನದ ಯುದ್ಧವು ವಿಶೇಷವಾದದ್ದೆಂದು ಹೇಳ ಬಹುದು. ಈ ಯುದ್ಧದ ಮೂಲವೇ ನಂದರೆ: ಕಾಬೂಲಿನಲ್ಲಿ ರುಸ್ಯರ ಕಡೆಯಿಂದ ರಾಯಭಾರಿ ಇರುವದರಿಂದ ತಮ್ಮ ಕಡೆಯಿಂದಲೂ ಅಲ್ಲಿ ರಾಯಭಾರಿಯನ್ನು ಇರಿಸ ಬೇಕೆಂದು ನಮ್ಮ ಸರಕಾರದವರು ಮನಸ್ಸು ಮಾಡಿ, ಇಬ್ಬರು ಸರದಾರರನ್ನು ಪರಿವಾರದವರೊಡನೆ ಕಳುಹಿಸಲು, ಅವರು ಸರಹದ್ದಿಗೆ ಮುಟ್ಟಿದಾಗಲೇ ಕಾಬೂಲಿನ ಅಮೀರ ಶೇರ್ ಆಲಿ ಎಂಬವನು ದೂತರ ಮುಖಾಂತರವಾಗಿ, ಈಚೆಗೆ ಬರ ಬಾರದೆಂತ ಅವರಿಗೆ ಹೇಳಿಸಿದನು. ಆದ್ದರಿಂದ ಆ ರಾಯಭಾರಿ ಬಂದ ದಾರಿಯಲ್ಲಿ ಹಿಂದಿರುಗ ಬೇಕಾಯಿತು. ಈ ವಿಷಯದಲ್ಲಿ ಸರಕಾರದವರು ಆ ಅಮೀರನಿಗೆ ಕಾಗದ ಬರದದಕ್ಕೆ ಅವನು ಬದಲು ಉತ್ತರ ಕೊಡದೆ ಹೋದದ್ದು ಮಹಾ ಅಪಮಾನವಾದದರಿಂದ ಅವನ ಮೇಲೆ ಯುದ್ಧಕ್ಕೆ ಹೋಗುವದೇ ಸರಿ ಎಂತ ನಿಷ್ಕರ್ಷೆ ಮಾಡೋಣಾಯಿತು. ಅಫಘಾನಿಸ್ಥಾನದಲ್ಲಿ ಯುದ್ಧ ಮಾಡುವದಂದರೆ ಅಲ್ಪ ಕಾರ್ಯವಲ್ಲಾ, ಅದು ಎತ್ತರವಾದ ಬಂಡೆಗಳು ಗುಡ್ಡಗಳು ಕಣಿವೆಗಳು ಉಳ್ಳ ಪ್ರದೇಶವಷ್ಟೇ. ಇದೆಲ್ಲಾ ಲಕ್ಷ್ಯಕ್ಕೆ ತಾರದೆ ಇಂಗ್ಲಿಷ ಸೈನ್ಯವು ಯುದ್ಧಸನ್ನದ್ಧವಾಗಿ, ಅಫಘಾನಿಸ್ಥಾನವನ್ನು ಪ್ರವೇಶಿಸಿ, ಅಲ್ಲಿಯ ಬೇರೆ ಬೇರೆ ಜಾತಿಗಳವರಿಂದ ತಂಟೆ ವಿರೋಧಗಳಾದಾಗ್ಯೂ, ಹಿಮ್ಮೆಟ್ಟದೆ, ಜಯಶಾಲಿಗಳಾಗಿ ಮುಂದೆ ಮುಂದೆ ಹೋದವರಾದರು. ಅಮೀರ ಶೇರ್ ಆಲಿ ಯುದ್ಧಕ್ಕೆ ನಿಲ್ಲದೆ, ತನ್ನ ಊರು ಬಿಟ್ಟು ಓಡಿ ಹೋಗಿ, ಪರದೇಶದಲ್ಲಿ ತೀರಿ ಹೋದನು. ಈ ವರ್ತಮಾನವನ್ನೂ ತನಗೆ ಸಲ್ಲಾ ಮಾಡುವದಕ್ಕೆ ಮನಸ್ಸಿದೆ ಎಂಬ ಸಂಗತಿಯನ್ನೂ ಅವನ ಮಗ ಯಾಕೂಬ್‌ಖಾನನು ಇಂಗ್ಲಿಷ ಸೈನ್ಯಾಧಿಪತಿಗಳಿಗೆ ತಿಳಿಸಿದನು. ಕಡೆಗೆ ಯಾಕೂಬ್‌ಖಾನನು ಕೌಲಿನ ಶರ್ತಗಳನ್ನು ಕುರಿತು ಮಾತಾಡುವ ಬಗ್ಯೆ ಇಂಗ್ಲಿಷ ಸೈನ್ಯಾಧಿಪತಿಗಳ ಬಳಿಗೆ ಬರಲು, ಅವನಿಗೆ ಸಾಭಿಮಾನ ಮಾಡಿ, ಉಭಯ ಪಕ್ಷದವರಿಗೂ ಸಮ್ಮತವಾದ ಸಲ್ಲಾನಾಮೆ ಬರಿಸಿ, ಒಪ್ಪಿತ ಹಾಕೋಣಾಯಿತು. ಆ ಸಲ್ಲಾನಾಮೆಯಲ್ಲಿ ಇಂಗ್ಲಿಷರ ಕಡೆಯಿಂದ ಒಬ್ಬ ರಾಯಭಾರಿ ಕಾಬೂಲಿನಲ್ಲಿರ ಬೇಕೆಂಬ ಒಂದು ಶರ್ತದ ಮೇರೆಗೆ ಒಬ್ಬ ಸರದಾರನನ್ನು ಅಲ್ಲಿಗೆ ಕಳುಹಿಸಿದ್ದಲ್ಲಿ ಅಮೀರನ ಸರದಾರರು ಅವನನ್ನು ಎದುರ್ಗಾಣಿಸುವದಕ್ಕೆ ಬಂದು, ಸಾಭಿಮಾನದಿಂದ ಕರಕೊಂಡು ಹೋಗಲು, ಯಾಕೂಬ್‌ಖಾನನು ಮಿತ್ರತ್ವದಿಂದ ಮಾತುಕಥೆ ಆಡಿದವನಾದನು. ತಂದೆ ಯಾವದಕ್ಕೆ ಹೆದರಿ ಕೊಂಡು ಯುದ್ಧಕ್ಕೆ ಕಾರಣ ಮಾಡಿದನೋ ಅದೇ ಕಾರ್ಯ ಹ್ಯಾಗೂ ಮಗನ ಮೂಲವಾಗಿ ನೆರವೇರಲಾಯಿತು; ಇನ್ನು ಮುಂದೆ ಹಿಂದುಸ್ಥಾನದ ಸರಕಾರಕ್ಕೂ ಕಾಬೂಲಿಗೂ ಮಿತ್ರತ್ವವು ಸದಾ ಸ್ಥಿರವಾಗಿ ಉಳಿಯುವದಾಗಿ ತೋರುತ್ತದೆ. ಈ ಅಫಘಾನಿಸ್ಥಾನದ ಯುದ್ಧದಲ್ಲಿ ಶೌರ್ಯ ತೋರಿಸಿದ ಚಿಕ್ಕ ದೊಡ್ಡ ಸೈನ್ಯಾಧಿಪತಿಗಳಿಗೆ ಚಕ್ರವರ್ತಿನಿಯವರು ಒಳ್ಳೆಳೆ ಶಿಫಾರಸು ದಯೆ ಪಾಲಿಸಿದರು.

Lord John Lawrence, late Governor General of India.
ಹಿಂದುಸ್ಥಾನದ ಮಾಜಿ ಗವರ್ನರ್ ಜೆನರಲ್ ಲೋರ್ಡ್ ಜೊನ್ ಲೋರೆನ್ಸ್ ಧೊರೆಗಳು.

ಹಿಂದುಸ್ಥಾನದ ಮೇಲೆ ೧೮೫೭-೫೮ನೆದರ ವರೆಗೆ ಗವರ್ನರ್ ಜನರಲರಾಗಿದ್ದ ಲೊರ್ಡ್ ಜೊನ್ ಲೊರೆನ್ಸ ಧೊರೆಗಳವರು ಮರಣ ಪಟ್ಟರು. ೧೮೫೭ನೇ ವರ್ಷದಲ್ಲಿ ಶಿಪಾಯರು ದಂಗೆ ಮಾಡಿದ ಸಮಯದಲ್ಲಿ ಅವರು ಪಂಜಾಬ ಶೀಮೆಯ ಅಧಿಪತಿಯಾಗಿದ್ದರು; ಆವಾಗ್ಯೆ ಅವರು ತನ್ನ ಅಧಿಕಾರದೊಳಗಿರುವ ಶಿಕ್ಕರು ಮುಂತಾದ ಬಲಿಷ್ಠ ಜಾತಿಗಳು ಸರಕಾರಕ್ಕೆ ನಂಬಿಗಸ್ತರಾಗಿರುವ ಹಾಗೆ ಮಾಡಿದ್ದಲ್ಲದೆ ಅತ್ಯವಶ್ಯವಾದ ವೇಳೆಯಲ್ಲಿ ಅವರೊಳಗಿಂದಲೇ ದಂಡು ಕೂಡಿಸಿ, ಆ ದೊಡ್ಡ ದಂಗೆ ನಾಲ್ಕು ಕಡೆ ಹಬ್ಬದ ಹಾಗೆ ಮಹಾ ಪ್ರಯತ್ನ ಮಾಡಿದರು; ಆದ್ದರಿಂದ ಬ್ರಿತಿಷ್ ರಾಜ್ಯಭಾರ ಹಿಂದು ದೇಶದಲ್ಲಿ ನೆಲೆಗೊಳ್ಳುವಂತೆ ಅವರು ಮುಖ್ಯ ಕಾರಣವಾದವರೆಂದು ಹೇಳ ಬಹುದು.

ನಮ್ಮ ಈ ದೇಶವನ್ನು ಪರಿಪೂರ್ಣವಾಗಿ ಬಲ್ಲವರೂ, ಹಿಂದು ಜನರಿಗೆ ಶ್ರೇಯಸ್ಸುಂಟಾಗ ಬೇಕೆಂದು ಮನಃಪೂರ್ವಕವಾಗಿ ಚಿಂತಿಸುವವರೂ ಆಗಿದ್ದ ಈ ಧೊರೆಗಳು ತಮ್ಮ ಸ್ಥಾನ ಬಿಟ್ಟು ಇಂಗ್ಲಾಂಡಿಗೆ ಹೋದ ಮೇಲೆಯೂ ಅವರ ಮನಸ್ಸು ಹಿಂದು ಸ್ಥಾನದ ಮೇಲೆ ಯಥಾ ಪ್ರಕಾರವಿತ್ತು; ಇವರ ಗುಣ ನಡತೆಗಳ ವಿಷಯ ಎದುರಾಳಿಗಳಾದರೂ ಏನೊಂದು ಅಡ್ಡಿಮಾತು ಹೇಳ ಕೂಡದವರಾಗಿದ್ದರು. ಅವರು ಮರಣ ಪಟ್ಟದ್ದರಿಂದ ನಮ್ಮ ಹಿಂದು ದೇಶದ ಶ್ರೇಷ್ಠ ಹಿತಚಿಂತಕರಲ್ಲೊಬ್ಬರು ಕಳದು ಹೋದದ್ದು ಸರ್ವರೂ ವ್ಯಾಕುಲ ಪಡ ತಕ್ಕ ಸಂಗತಿಯೇ.

ನಮ್ಮ ಈ ದೇಶದ ಮೇಲೆ ಬಿದ್ದಿದ್ದ ಕ್ಷಾಮಬಾಧೆಯು ದಯಾಳು ದೇವರ ಕಟಾಕ್ಷದಿಂದ ಪರಿಹಾರವಾಯಿತು; ಕೆಲವು ಶೀಮೆಗಳಲ್ಲಿ, ಮುಖ್ಯವಾಗಿ ದಕ್ಷಿಣ ಮಹಾರಾಷ್ಟ್ರದಲ್ಲಿ, ದಖ್ಖಣದಲ್ಲಿ, ಇಲಿಗಳು ಅಸಂಖ್ಯವಾಗಿ ಹೆಚ್ಚಿ, ಪೈರು ತಿಂದು, ಹಾಳು ಮಾಡಿದವು. ಇವುಗಳ ಬಾಧೆ ಪರಿಹರಿಸುವ ಉಪಾಯವನ್ನು ಹುಡುಕಿ ತೆಗಿಯುವದಕ್ಕೆ ಸರಕಾರದವರು ನೇಮಿಸಿದ ಪಂಚಾಯತರು ತುರ್ತಕ್ಕೆ ಅವುಗಳನ್ನು ಕೊಂದು ನಿಸ್ಸಂತಾನ ಮಾಡುವದೇ ಯುಕ್ತವೆಂದು ತಿಳಿದು, ನೂರು ಇಲಿಗಳನ್ನು ಕೊಂದರೆ ೧ ರೂಪಾಯಿ ಇನಾಮು ಕೊಡೋಣಾಗುವದೆಂದು ಪ್ರಸಿದ್ಧಿ ಮಾಡಿದ್ದಲ್ಲಿ, ಲಕ್ಷಾನು ಲಕ್ಷ ಇಲಿಗಳು ಧ್ವಂಸವಾದವು. ಈ ವರ್ಷದಲ್ಲಿ ತಕ್ಕ ಮಟ್ಟಿಗೆ ಆಯಾ ಶೀಮೆಗಳಲ್ಲಿ ಮಳೆ ಬಂದು, ಪೈರು ಚನ್ನಾಗಿದೆ. ನಮ್ಮ ಹಿತಚಿಂತಕನಾದ ದೇವರು ನಾವು ತನ್ನನ್ನು ತಿಳಿದು ಕೊಂಡು ತನ್ನ ಬಳಿಗೆ ಬರುವದಕ್ಕೆ ಇಂಥಾ ಕ್ಷಾಮ ಮುಂತಾದ ಕ್ಲೇಶಗಳನ್ನು ಕಳುಹಿಸಿ ಕೊಡುತ್ತಾನೆ; ತಪ್ಪಿ ನಡಿಯುವ ಮಗನನ್ನು ತಿದ್ದುವದಕ್ಕೆ ತಂದೆ ಒಮ್ಮೆ ಪೆಟ್ಟು ಹೊಡದರೂ, ಪಿತೃವಾತ್ಸಲ್ಯದಿಂದ ಮತ್ತೆ ಹತ್ತರ ಕರೆದು ಮಮತೆ ಮಾಡುವಂತೆ, ದಯಾಳು ದೇವರು ನಮ್ಮ ಮೇಲೆಯೂ ಪ್ರೀತಿಯನ್ನೂ ಕರುಣೆಯನ್ನೂ ತೋರಿಸುತ್ತಾನೆ. ಶಿಕ್ಷೆಯಲ್ಲಿಯೂ ಪರಿಪಾಲನೆಯಲ್ಲಿಯೂ ನಾವು ಅವನನ್ನು ಆರಾಧಿಸಿ ಭಕ್ತಿ ಮಾಡ ಬೇಕೆಂಬದು ಅವನ ದಿವ್ಯ ಚಿತ್ತವಾಗಿದೆ; ಇದಕ್ಕನುಸಾರವಾಗಿ ನಾವೂ ನಡಕೊಳ್ಳ ತಕ್ಕದ್ದು.

ಪುಣೆ ಅತ್ತಕಡೆ ದಖ್ಖಣದಲ್ಲಿ ಕೆಲ ಜನರು ಕೂಡಿ ಕೊಂಡು ಸರಕಾರಕ್ಕೆ ವಿರೋಧವಾಗಿ ತಿರಿಗಿಬೀಳ ಬೇಕೆಂಬ ದುರ್ಬುದ್ಧಿ ಹಿಡಿದು, ದರೋಡೆಕಳವು ಮಾಡುವದಕ್ಕೆ ಪ್ರಾರಂಭಿಸಿ, ಕೆಲ ತಿಂಗಳು ಸರಕಾರದವರ ಕೈಗೆ ತಪ್ಪಿಸಿ ಕೊಳ್ಳಲಿಕ್ಕೆ ನೋಡಿದರು. ಈ ಕಳ್ಳರಿಗೆ ವಾಸುದೇವಫಡಕೆ ಎಂಬ ಮಹಾರಾಷ್ಟ್ರ ಬ್ರಾಹ್ಮಣನೊಬ್ಬನು ಮುಖ್ಯಸ್ಥನಾಗಿದ್ದು, ಸಣ್ಣದೊಂದು ದಳ ಕೂಡಿಸುವದಕ್ಕೆ ಪ್ರಯತ್ನ ಮಾಡುತ್ತಿರುವಾಗಲೇ ಶಿಕ್ಕಿ ಬಿದ್ದನು. ಅವನ ಸಹಾಯಕರಾಗಿದ್ದ ಅನೇಕರು ಶಿಕ್ಕಿ ಬಿದ್ದರು; ಅವರವರಿಗೆ ತಕ್ಕ ಶಿಕ್ಷೆ ಮಾಡಲಾಯಿತು. ಮನೆಯಲ್ಲಿ ಇಲಿಗಳು ಎಷ್ಟು ತಂಟೆ ಮಾಡಿದರೂ, ಒಂದು ದಿನ ಅಲ್ಲ ಒಂದು ದಿನ ಬೋನಿನಲ್ಲಿ ಬೀಳದೆ ಹೋಗುವದಿಲ್ಲಾ, ಹಾಗೆಯೇ ಸರಿ.—ಗೋದಾವರಿ ಜಿಲ್ಲೆಯಲ್ಲಿರುವ ರಂಪಾ ಎಂಬ ಊರಿನವರು ಅಬಕಾರಿ ಗುತ್ತಿಗೆಯ ನಿಮಿತ್ತ ದಂಗೆ ಮಾಡಿದರು; ಅದನ್ನು ತತ್‌ಕ್ಷಣವೇ ನಿಲ್ಲಿಸುವದು ಪೊಲೀಸಿನವರ ಕಡೆಯಿಂದಾಗದ ಕಾರಣ ಶಿಪಾಯರನ್ನು ಕಳುಹಿಸುವದು ಅವಶ್ಯ ಬಿತ್ತು. ಆ ಊರು ಜ್ವರದ ಜಾಗವಾಗಿದ್ದದರಿಂದ ಆ ಕಾಡ ಜನರ

ಪರಾಕ್ರಮಕ್ಕಲ್ಲಾ, ಕೆಟ್ಟ ಜ್ವರಕ್ಕೆ ಪೊಲೀಸಿನವರೂ ಶಿಪಾಯರೂ ಹಿಮ್ಮೆಟ್ಟಿದರು; ಆದಾಗ್ಯೂ ಈ ಅಲ್ಪವಾದ ತಂಟೆಖೋರರನ್ನು ಅಣಗಿಸಿ ಅವರಿಗೆ ತಕ್ಕ ಬುದ್ಧಿ ಕಲಿಸುವದಕ್ಕೆ ಬಹಳ ದಿವಸ ಬೇಕಾಗಲಿಕ್ಕಿಲ್ಲಾ.

ಕಾಶ್ಮೀರ ರಾಜ್ಯದಲ್ಲಿ ಸಂಭವಿಸಿದ ಕ್ಷಾಮವು ಮಹಾ ಕಠೋರವಾಗಿ, ಜನಪದವನ್ನು ಯಥೇಷ್ಟವಾಗಿ ಹಾವಳಿ ಮಾಡುವದಾಯಿತು. ಮುಂಬಾಯಿ ಮದ್ರಾಸ ಸಂಸ್ಥಾನದಲ್ಲಿ ದುಷ್ಕಾಲವಾದಾಗ್ಯೆ ನಮ್ಮ ಸರಕಾರದವರು ಬಡ ಜನರಿಗೆ ಅಶನಾರ್ಥವಾಗಿ ನಡಿಸಿದ ಸಹಾಯದಂತೆ ಅಲ್ಲಿಯ ಮಹಾರಾಜನಿಂದ ಮಾಡಲಾಗಲಿಲ್ಲಾ. ಈಗ ಸದ್ಯಾ ಅಲ್ಲಿ ಜಲೋ ಮಳೆ ಬಂದದರಿಂದ ಸುಭಿಕ್ಷೆ ಉಂಟಾದೀತೆಂತ ತೋರುತ್ತದೆ.

ಆಫ್ರಿಕ ಖಂಡದ ದಕ್ಷಿಣ ತುದಿಯಲ್ಲಿ ಕೇಪ್ ಕೊಲೊನಿ ಎಂಬ ಇಂಗ್ಲಿಷರ ನೆಲೆಗೆ ನೆರೆಯಲ್ಲಿಯೇ ಜುಲು ಎಂಬ ಕಾಡ ಜನರ ಶೀಮೆಯೂ ಅದೆ; ಇವರ ಮೇಲೆ ಇಂಗ್ಲಿಷರು ಯುದ್ಧಕ್ಕೆ ಹೋದದ್ದಕ್ಕೆ ಕಾರಣವೇನಂದರೆ: ಇಂಗ್ಲಿಷರು ಅಲ್ಲಿ ಒಂದು ಶೀಮೆ ತೆಗದು ಕೊಂಡಾಗ, ಆ ಜುಲುಗಳ ಅರಸ ಸಿತೆವಾಯೋ ಎಂಬವನು, ಆ ಶೀಮೆ ನನ್ನದು, ನನಗೆ ಬಿಟ್ಟು ಕೊಡ ಬೇಕು ಎಂತ ಮಹಾ ದರ್ಪದಿಂದ ಹೇಳಿದ್ದಲ್ಲಿ, ಆವಾಗ ಇಂಗ್ಲಿಷರ ಗವರ್ನರ್ ಧೊರೆ ಆ ಅರಸನಿಗೆ ಕಾಗದ ಬರದು, ನಿಮ್ಮ ರಾಜಧಾನಿಯಲ್ಲಿ ನಮ್ಮ ಕಡೆಯಿಂದ ವಕೀಲನನ್ನಿರಿಸುವದಕ್ಕೆ ಒಪ್ಪಿದರೆ, ನಾವು ಕಟ್ಟಿ ಕೊಂಡ ಶೀಮೆ ಬಿಟ್ಟು ಕೊಟ್ಟೇವು, ಇಲ್ಲವೆ ನಿಮ್ಮ ಮೇಲೆ ಯುದ್ಧಕ್ಕೆ ಬರುತ್ತೇವೆ ಎಂತ ತಿಳಿಸಿದರು; ಆ ಅರಸನು ಅದಕ್ಕೆ ಬದಲುತ್ತರ ಬರಿಯದೆ, ೨೦ ಸಾವಿರ ಶಿಪಾಯರ ಸೈನ್ಯ ಕಟ್ಟಿ ಕೊಂಡು ಬಂದು, ಇಂಗ್ಲಿಷರ ಒಂದು ಠಾಣ್ಯದ ಮೇಲೆ ಬಿದ್ದು, ಅದರಲ್ಲಿದ್ದ ಇಂಗ್ಲಿಷ ಶಿಪಾಯರನ್ನೆಲ್ಲಾ ಸಂಹಾರ ಮಾಡಿದನು. ಈ ವರ್ತಮಾನ ಇಂಗ್ಲಾಂಡಿಗೆ ಮುಟ್ಟಿದಾಗಲೇ ದೊಡ್ಡದೊಂದು ದಳ ಅಲ್ಲಿಗೆ ಕಳುಹಿಸಿ ಕೊಟ್ಟರು. ಜುಲು ಅರಸನು ಸಲ್ಲಾ ಮಾಡುವದಕ್ಕೆ ತನಗೆ ಮನಸ್ಸದೆ ಎಂತ ಹೇಳಿ ಕಳುಹಿಸಿದಾಗ ಇಂಗ್ಲಿಷ ಸರಕಾರದವರು, ನೀನು ನಿನ್ನ ಸೈನ್ಯದೊಡನೆ ನಮಗೆ ಸ್ವಾಧೀನನಾದರೆ, ಸಲ್ಲಾ ಮಾಡಬಹುದೆಂತ ಬದಲುತ್ತರ ಹೇಳಿದಲ್ಲಿ ಕಡೆಗೆ ಅವನು ಪ್ರಕಟವಾಗಿ ೨೦ ಸಾವಿರ ದಳದೊಡನೆ ರಣರಂಗದಲ್ಲಿ ನಿಂತು ಕಾಳಗ ಮಾಡಿ, ಪೂರ್ಣ ಸೋತು ಹೋದನು; ಅನಂತರ ಜುಲು ಸರದಾರರು ಇಂಗ್ಲಿಷ ಸೈನ್ಯಾಧಿಪತಿಗೆ ಶರಣಾಗತರಾದ್ದಲ್ಲಿ, ನಿಮ್ಮನ್ನು ಸುರಕ್ಷಿತವಾಗಿ ನಡಿಸ್ಯೇವು ಎಂತ ಅವರಿಗೆ ಅಭಯವಚನ ಕೊಡಲಾಯಿತು. ಆದರೆ ಆ ತುಂಟ ಸಿತೆವಾಯೋ ಅರಸುತನ ಮಾಡುವಲ್ಲಿ ಕ್ಷೇಮವಿರದು; ಅವನನ್ನು ಅಂಕೆಯಲ್ಲಿಡುವದು ಅವಶ್ಯವಾಗಿದೆ.—ಈ ಯುದ್ಧದ ಸಂಬಂಧದಲ್ಲಿ ಹೇಳ ತಕ್ಕದ್ದು ಇನ್ನೊಂದು ಸಂಗತಿ ಅದೆ; ಏನಂದರೆ ಮಾಜಿ ಫ್ರೆಂಚ ಮಹಾರಾಜ ನಪೋಲಿಯೋನನ ಕುಮಾರ ಪ್ರಿನ್ಸ್ ಇಂಪೀರಿಯಲ್ ಎಂಬಾತನ ಮರಣವೇ. ತಂದೆ ಜರ್ಮನರ ಸಂಗಡ ಮಾಡಿದ ಯುದ್ಧದಲ್ಲಿ ಸೋತು, ರಾಜ್ಯ ಕಳಕೊಂಡು, ಇಂಗ್ಲಾಂಡಿಗೆ ಬಂದು, ಅಲ್ಲಿ ತೀರಿ ಕೊಂಡ ಮೇಲೆ ಈ ಯುವರಾಜನು ತಾಯಿಯ ಸಂಗಡ ಇಂಗ್ಲಾಂಡಿನಲ್ಲೇ ಇರುತ್ತಿದ್ದನು. ತಂದೆಗೆ ಉಂಟಾದ ಅಪಮಾನವನ್ನು ಪರಿಹರಿಸ ಬೇಕೆಂಬದಾಗಿ ಈತನು ಜುಲುಗಳ ಮೇಲೆ ಯುದ್ಧಕ್ಕೆ ಹೊರಡುವ

ಸೈನ್ಯದ ಸಂಗಡ ತನ್ನನ್ನು ಕಳುಹಿಸ ಬೇಕೆಂದು ಸರಕಾರದವರನ್ನು ಬೇಡಿ ಕೊಂಡು, ದಕ್ಷಿಣ ಅಫ್ರಿಕಕ್ಕೆ ಹೋದನು. ಅಲ್ಲಿ ಕೆಲ ಸೈನಿಕರ ಒಟ್ಟಿಗೆ ಶತ್ರುಗಳ ಸಂಚಾರ ಶೋಧಿಸುವದಕ್ಕೆ ಹೋದಾಗ ಏಕಾಏಕಿ ಜುಲುಗಳು ಅವರ ಮೇಲೆ ಬೀಳಲು, ಸಂಗಡ ಇದ್ದವರು ಕುದುರೆಗಳನ್ನೇರಿ ಕೊಂಡು, ಓಡಿ ಹೋಗಿ ಬಿಟ್ಟರು; ಇವನನ್ನು ಆ ಶತ್ರುಗಳು ತಿವಿದು ಕೊಂದು ಹಾಕಿದರು. ಈತನ ಮರಣದಿಂದ ತಾಯಿ ಶೋಕಾಬ್ಧಿಯೊಳಗೆ ಮುಣುಗುವದಾದ್ದಲ್ಲದೆ ಇಂಗ್ಲಿಷ ಸರಕಾರದವರೂ ಬೇರೊಬ್ಬರೂ ಬಹಳ ವ್ಯಸನ ಪಡುವವರಾದರು. ಈ ಯುವರಾಜನಿಗೆ ಪಟ್ಟ ಕಟ್ಟಿ ಮಹಾರಾಜನಾಗಿ ಮಾಡ ಬೇಕೆಂದು ತಾತ್ಪರ್ಯ ಪಡುವ ಒಂದು ಪಕ್ಷದವರು ಫ್ರೆಂಚ ರಾಜ್ಯದಲ್ಲಿದ್ದರು; ಈತನ ಮರಣದಿಂದ ಅವರ ಹಾರೈಕೆ ನಿರರ್ಥಕವಾಗಿ ಹೋಯಿತು.

ಇಜಿಪ್ತ (ಐಗುಪ್ತ) ದೇಶದಲ್ಲಿಯೂ ರಾಜಕಾರ್ಯಗಳು ಪಲ್ಲಟವಾದವು; ಹ್ಯಾಗಂದರೆ ಅಲ್ಲಿಯ ಅರಸನಾದ ಖೇದಿವ ಇಸ್ಮಾಯೇಲ್ ಪಾಚ್ಟಾಯನು ತನ್ನ ರಾಜ್ಯವನ್ನು ಮನಸೋಇಚ್ಛೆ ಆಳುವವನಾಗಿ, ಕಂಡಾಬಟ್ಟೆ ಸಾಲ ಮಾಡಿ, ಪ್ರಜೆಗಳ ಮೇಲೆ ಮಿತಿ ಮೀರಿದ ಕಂದಾಯ ಕಟ್ಟಿ, ಹಣ ಧಾಮುಧೂಮು ಖರ್ಚು ಮಾಡಿದ್ದಲ್ಲದೆ ಅವನ ರಾಜ್ಯದ ಸ್ಥಿತಿ ತಿದ್ದುಪಾಟು ಮಾಡುವದಕ್ಕೆ ಪ್ರಯತ್ನ ಮಾಡುತ್ತಿದ್ದ ಇಂಗ್ಲಿಷ ಮಂತ್ರಿಗಳನ್ನು ಉದ್ಯೋಗದಿಂದ ಕಿತ್ತಾಕಿ, ಅವರ ಸ್ಥಾನದಲ್ಲಿ ತನಗೆ ತೋರಿದವರನ್ನು ನೇಮಿಸಿ, ಇಂಥಾ ನಡತೆ ಆಗದು, ಒಳ್ಳೇದಲ್ಲಾ ಎಂತ ಯುರೋಪಿಯನ್ ಅರಸರು ಪದೇ ಪದೇ ಎಚ್ಚರಿಸಿದರೂ, ಕಿವಿ ಕೊಡದೆ ಹೋದನು. ಆದದರಿಂದ ಇಂಗ್ಲಿಷ ಫ್ರೆಂಚ ಸರಕಾರದವರು ಕೊನ್‌ಸ್ತಂತಿನೊಪೊಲಿಯ ಸುಲ್ತಾನನಿಗೆ ಈ ಖೇದಿವನನ್ನು ಸಿಂಹಾಸನದಿಂದ ತೆಗದು ಅವನ ಮಗನಿಗೆ ಪಟ್ಟಾ ಕಟ್ಟುವ ಹಾಗೆ ಮಾಡ ಬೇಕೆಂದು ಬರ ಕೊಂಡಲ್ಲಿ ಅವನು ಸಮ್ಮತಿ ಪಟ್ಟದರಿಂದ ಇಸ್ಮಾಯೇಲ್ ಪಾಚ್ಟಾ ತನ್ನ ಮಗ ತಿವುಫಿಕ್ ಪಾಚ್ಟಾಯನ ಕೈಗೆ ರಾಜ್ಯವನ್ನು ಬಿಟ್ಟು, ತನಗೆ ಅಪ್ಪಣೆ ಆದ ಪ್ರಕಾರ ರಾಜ್ಯದ ಭಂಡಾರದಿಂದ ತನಗೆ ಶಿಕ್ಕುವ ವರ್ಷಾಶನ ಅನುಭವಿಸುತ್ತಾ ನೆಪಲ್ಸಿನಲ್ಲಿ ಸುಖವಾಗಿದ್ದಾನೆ. (ಇಜಿಪ್ತ ದೇಶದ ರಾಜಧಾನಿಯಾಗಿ, ಖೇದಿವನ ಅರಮನೆ ಇರುವ ಕೇರೋ ಪಟ್ಟಣದ ಚಿತ್ರ ಈ ಪಂಚಾಂಗದ ಹೊರಬದಿಯಲ್ಲಿ ಕಾಣ ಬಹುದು.)

ಚಕ್ರವರ್ತಿನಿಯವರ ಎರಡನೇ ಕುಮಾರ್ತೆ ಅಲೈಸ್ ಮೌಡ್ ಮೇರಿ ಸನ್ ೧೮೭೪ನೇ ಇಸವಿ ದಶಂಬರ ತಿಂಗಳ ೧೪ರಲ್ಲು ತೀರಿ ಕೊಂಡರು. ಇವರು ೧೮೪೩ನೇ ಇಸವಿಯಲ್ಲಿ ಜನನವಾಗಿ, ೧೮೬೬ನೆದರಲ್ಲಿ ಹೆಸ್ಸೆ ಎಂಬದೊಂದು ಜರ್ಮನ ಶೀಮೆಯ ಪ್ರಭುವಾದ ಪ್ರಿನ್ಸ್ ಫ್ರೀದರಿಕ್ ವಿಲ್ಲಿಯಮ್ ಲುಯಿಸ್ ಎಂಬವರಿಗೆ ವಿವಾಹವಾದರು. ಈ ದಂಪತಿಗಳಿಗೆ ಏಳು ಮಂದಿ ಮಕ್ಕಳು ಹುಟ್ಟಿದರು. ಇವರ ಕುಟುಂಬದಲ್ಲಿ ಡಿಫ್‌ತೀರ್ಯ ಎಂಬ ರೋಗ ಪ್ರಾರಂಭವಾಗಿ, ಒಂದು ಮಗು ಮೃತವಾಯಿತು; ಪ್ರಭುವಿಗೂ ಅದೇ ರೋಗವಾಗಿ, ಅವರು ಗುಣವಾದರು; ಕಡೆಗೆ ಅಲೈಸ್ ರಾಜಕುಮಾರ್ತೆಗೆಯೇ ಅದೇ ಅಸ್ವಸ್ಥವಾಗಿ, ಬಹಳ ಶ್ರಮೆ ಪಟ್ಟು, ತೀರಿ ಕೊಂಡರು; ಇವರ ಮರಣದಿಂದ ನಮ್ಮ ಚಕ್ರವರ್ತಿನಿಯವರು ಮಹಾ ಶೋಕದಲ್ಲಿ ನಿಮಗ್ನವಾದವರಾದರು. ಅವರ ಪ್ರಜೆಗಳೂ ಅವರ ಶೋಕದಲ್ಲಿ ತಮಗೂ ಶೋಕವಾಯಿತೆಂದು ನಾನಾ ಪ್ರಕಾರವಾಗಿ

ತೋರಿಸಿದರು. ಅಲೈಸ್ ರಾಜಕುಮಾರ್ತಿಯವರು ಬಡವರಿಗೂ ಕಷ್ಟದಲ್ಲಿರುವವರಿಗೂ ಮಾಡುತ್ತಿದ್ದ ಉಪಕಾರದ ಕ್ರಿಯೆಗಳಿಂದ ಸರ್ವರ ಸನ್ಮಾನವನ್ನು ಪಡಕೊಂಡವರಾಗಿ, ರಾಜಕುಲಕ್ಕೆ ಅಲಂಕಾರವಾಗಿದ್ದರು. ಇದಲ್ಲದೆ ಅವರು ಹಿಂದು ದೇಶದವರ ಸ್ಥಿತಿ ಒಳ್ಳೇದಾಗುವದಕ್ಕೆ ಸಹಾಯ ಮಾಡ ಬೇಕೆಂದು ಏರ್ಪಡಿಸಿದ ಇಂಡ್ಯನ್ ಅಸ್ಸೋಸಿಯೇಶನ್ ಎಂಬ ಸಂಘಕ್ಕೆ ಮುಖ್ಯಸ್ಥರಾಗಿದ್ದದರಿಂದಲೂ ಹಿಂದು ಜನರು ಅವರ ಸ್ಮರಣೆ ಮಾಡುವದು ಯೋಗ್ಯವಾಗಿದೆ. (ಅವರ ಚಿತ್ರವು ಪಂಚಾಂಗದ ಆರಂಭದಲ್ಲಿ ಛಾಪಿಸಿಯದೆ.)

ರುಸ್ಯ ಮಹಾರಾಜ್ಯದವರು ತುರ್ಕರ ಮೇಲೆ ಮಾಡಿದ ಯುದ್ಧದಲ್ಲಿ ಜಯಗೊಂಡು ಕ್ರೈಸ್ತ ಪ್ರಜೆಗಳನ್ನು ತುರ್ಕರ ಅಧಿಕಾರದೊಳಗಿಂದ ಬಿಡಿಸ ಬೇಕೆಂಬ ತಾತ್ಪರ್ಯ ನೆರವೇರಿಸಿದ ಮೇಲೆ ರಾಜ್ಯದ ಭಂಡಾರದಲ್ಲಿ ಹಣವೆಲ್ಲಾ ವೆಚ್ಚವಾದದ್ದೂ, ಉದ್ದಿಮೆ ವ್ಯಾಪಾರ ಮಂದವಾಗಿ ಹಣ ವಸೂಲು ಮಾಡುವದು ಪ್ರಯಾಸವಾದದ್ದೂ, ಕೆಲ ದೊಡ್ಡ ಪಟ್ಟಣಗಳಲ್ಲಿ ಅಗ್ನಿಯಿಂದಲೂ, ಕೆಲವು ಪ್ರದೇಶಗಳಲ್ಲಿ ಮಾರಿ ಉಪದ್ರವದಿಂದಲೂ, ಇನ್ನೊಂದು ಕಡೆಯಲ್ಲಿ ಕ್ಷಾಮದಿಂದಲೂ ಹಾವಳಿಯಾದದ್ದೂ ಮುಂತಾದ ಕ್ಷೋಭೆಗಳನ್ನು ಅನುಭವಿಸ ಬೇಕಾಯಿತು. ಪ್ರಾಮುಖ್ಯವಾದ ಕ್ಷೋಭೆ ಇನ್ನೊಂದು ಏನಂದರೆ: ಸಾಮ್ರಾಜ್ಯದ ಪ್ರಜೆಗಳಲ್ಲಿ ಅನೇಕರು ತತ್ಕಾಲದ ರಾಜ್ಯಭಾರಕ್ಕೂ ಆಡಳಿತೆಗೂ ಮೆಚ್ಚದೆ, ದೊಡ್ಡ ಹುದ್ದೆದಾರರನ್ನೂ ಅರಸನನ್ನೂ ಸಹ ಕೊಂದು, ರಾಜ್ಯಾಧಿಕಾರವನ್ನು ಪಲ್ಲಟ ಮಾಡುವದಕ್ಕೆ ನೋಡುತ್ತಾರೆ; ಇವರಿಗೆ ನಿಹಿಲಿಸ್ತರು ಅನ್ನುತ್ತಾರೆ. ಎಲ್ಲಾ ವರ್ಗದವರಲ್ಲಿಯೂ ಸ್ಥಿತಿಯವರಲ್ಲಿಯೂ ಇಂಥವರಿದ್ದಾರೆ. ಇವರು ಬಹು ಗುಪ್ತದಲ್ಲಿ ತಮ್ಮ ಯಾವತ್ತು ಕಾರ್ಯಗಳನ್ನು ನಡಿಸುವದರಿಂದ ಅವರನ್ನು ಹಿಡಿದು ಶಿಕ್ಷಿಸುವದು ಸರಕಾರಕ್ಕೆ ಮಹಾ ಕಷ್ಟವಾಯಿತು. ಆದಾಗ್ಯೂ ಶತಪ್ರಯತ್ನದಿಂದ ಅವರನ್ನು ಹುಡುಕಿ ಹಿಡಿದು, ತಾರತಮ್ಯಾನುಸಾರವಾಗಿ ಮರಣಶಿಕ್ಷೆ ಗಡಿಪಾರುಶಿಕ್ಷೆ ವಿಧಿಸೋಣಾಯಿತು. ಗಡಿಪಾರಾದವರನ್ನು ಹಾಕಲಿಕ್ಕೆ ಸೈಬೀರಿಯಾ ದೇಶದ ಊರುಗಳಲ್ಲಿ ಸ್ಥಳ ಸಾಲದೆ ಹೋಯಿತಂತೆ. ಇಷ್ಟಾದರೂ ಆ ನಿಹಿಲಿಸ್ತರನ್ನು ರಾಜ್ಯದಿಂದ ಪೂರ್ಣವಾಗಿ ಕಿತ್ತು ಹಾಕಲಾಯಿತೆಂತ ಹೇಳ ಕೂಡದಂತೆ.

ದಕ್ಷಿಣ ಹಿಂದುಸ್ಥಾನದಲ್ಲಿ ಹ್ಯಾಗೋ ಹಾಗೆಯೇ ದಕ್ಷಿಣ ಅಮೇರಿಕದಲ್ಲಿಯ ಬ್ರಜಿಲ್ ಎಂಬ ದೇಶದಲ್ಲಿಯೂ ಮೊದಲು ಅನಾವೃಷ್ಟಿ, ಬರಗಾಲ, ಅದರ ಬೆನ್ನ ಹಿಂದೆ ಮೈಲೆಖಜ್ಜಿ, ಆ ಮೇಲೆ ಇಲಿಗಳ ಕಾಟ ಪ್ರಾರಂಭವಾಗಿ, ಮಹಾ ಸಂಕಷ್ಟವಾಯಿತು.

ಔಸ್ತ್ರಾಲಿಯ ದ್ವೀಪದ ಸಿಡ್ನಿ ಎಂಬ ಪಟ್ಟಣದಲ್ಲಿ ಭೂಲೋಕದಲ್ಲಿರುವ ವಿಚಿತ್ರ ಪದಾರ್ಥಗಳ ಪ್ರದರ್ಶನವಾಗುವಂಥಾದ್ದು ಅದೆ; ಮುಂಬಾಯಿಯ, ಮದ್ರಾಸಿನ ಸಾವಕಾರರು ಅಪೂರ್ವ ನೂತನ ಒಡವೆಗಳನ್ನು ಸಂಗ್ರಹ ಮಾಡಿ, ಅಲ್ಲಿಗೆ ಕಳುಹಿಸುವದಕ್ಕಿದ್ದಾರೆ. ಇದರಿಂದ ನಮ್ಮ ದೇಶದ ಸರಕು ಪರದೇಶಗಳಲ್ಲಿ ಗೊತ್ತಾಗಿ ಒಳ್ಳೇ ಗಿರಾಕಿಯಾಗುವದಕ್ಕೆ ಸಂದೇಹವಿಲ್ಲಾ.

ನಮ್ಮ ಗತಿ ಯಾವದು?

"ಭಯ ಪಡ ಬೇಡಿರಿ, ಯೆಹೋವ ದೇವರು ನಿಮ್ಮ ಸಂಗಡ ಇದ್ದಾನೆ; ಅವನು ನಿಮ್ಮನ್ನು ಬಿಡುವದಿಲ್ಲಾ; ವಿಸರ್ಜಿಸುವದಿಲ್ಲಾ." ದ್ವಿ. ನ್ಯಾ. ೩೧, ೬.

ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಸೀರಕ್ ಎಂಬ ಒಬ್ಬ ವಿದ್ವಾಂಸನಿದ್ದನು; ಅವನು ನರಲೋಕದಲ್ಲಿರುವವರ ಸ್ಥಿತಿಗತಿಗಳ ವಿಷಯ ಆಲೋಚನೆ ಮಾಡಿ ಬರದದ್ದೇನಂದರೆ: "ಸಕಲ ಮನುಷ್ಯರ ಆಯುಷ್ಯವೆಲ್ಲಾ ಹುಟ್ಟಿದಂದಿನಿಂದ ಸಾಯುವ ವರೆಗೂ ಎಷ್ಟೋ ಕಷ್ಟವಾದದ್ದು. ನರಪುತ್ರರ ಮೇಲೆ ಎಂಥಾ ದೊಡ್ಡ ಹೊರೆ ಇಟ್ಟ ಹಾಗಾಯಿತು! ಯಾವಾಗಲೂ ಚಿಂತೆ ಭಯ ಆಶೆಗಳೇ, ಎಲ್ಲರಲ್ಲಿ ಕೋಪ ಮತ್ಸರ ಹೊಟ್ಟೆಕಿಚ್ಚು ನ್ಯಾಯ ಹಗೆ ವರದಾಟ ಮೊದಲಾದ ದುಷ್ಕೃತ್ಯಗಳು ಎಷ್ಟೋ! ಮತ್ತು ಅದೆಲ್ಲಾದರ ಕಡೆಯಲ್ಲಿ ಮರಣ ಪ್ರಾಪ್ತಿಯಾಗುವದು. ದೊಡ್ಡವನಾಗಲಿ ಕೇವಲ ಬಡವನಾಗಲಿ ಇದಕ್ಕೆ ತಪ್ಪಿಸಿ ಕೊಳ್ಳಲಾರನು." ಈ ವಾಕ್ಯಗಳೆಲ್ಲಾ ಪೂರ್ಣ ಸತ್ಯವೇ ಸರಿ. ಆದರೂ ನಮ್ಮನ್ನು ನಡಿಸುವ ದೇವರು ಅಂಥಾ ಕಷ್ಟಗಳು ಒಮ್ಮೆಯೇ ನಮ್ಮ ಮೇಲೆ ಹಾಕದೆ ಅದನ್ನು ಆಯಾ ಘಳಿಗೆ ದಿವಸ ತಿಂಗಳು ವರ್ಷಗಳಿಗೆ ಪಾಲು ಪಾಲಾಗಿಟ್ಟು, ನಾವು ಸೈರಿಸುವ ಹಾಗೆ ಮಾಡುತ್ತಾನೆ. ಹೀಗೆ ಪುನಹಾ

ಒಂದೊರ್ಷ ಬಿದ್ದು ಸಂದ, ಮತ್ತೊಂದು ಮೂಡಿ ಬಂದ
ಈ ದಿನಾತ ತಾನೆ ನಮ್ಮನ್ನು ತಂದಿದ್ದಾನೆ.
ಸಹಸ್ರ ಚಿಂತೆಯಲ್ಲು, ಹೃತ್ಕಾಯಕಷ್ಟದಲ್ಲು
ವಿಜಯ ಹೊಂದಿದ್ದೇವೆ; ಧೈರ್ಯ್ಯ ಪಡುತ್ತೇವೆ.

ವರ್ಷಾರಂಭದಲ್ಲಿ ಇದೇ ದೇವಭಕ್ತರಾಲೋಚನೆ; ಒಂದೊಂದು ವರ್ಷಕ್ಕೆ ಎಷ್ಟೆಷ್ಟು ಸಂಗತಿಗಳು ಶೇರಿಯುವೆ! ಎಷ್ಟೋ ಚಿಂತೆ, ಕಷ್ಟ, ನೋವು, ದುಃಖ ಮೊದಲಾದ ತಾಪತ್ರಯಗಳು ನರಪುತ್ರರಿಗೆ ಹನ್ನೆರಡು ಮಾಸದೊಳಗೆ ಬಂದಿದ್ದಾವು! ಎಷ್ಟು ಜನರು, ಈ ನಮ್ಮ ಪಂಚಾಂಗವನ್ನು ಓದಿದವರು ಸಹ, ಹೋದ ವರ್ಷದಲ್ಲಿ ಇಹವನ್ನು ಬಿಟ್ಟು, ಪರಕ್ಕೆ ಹೋದರು! ಅನೇಕರಿನ್ನೂ ಇರುತ್ತಾರೆ, ಸರಿ, ಆದರೆ ನಾವೀಗ ಶೇರಿದ ವರ್ಷಾಂತ್ಯದಲ್ಲಿ ಇರುವರೋ ಏನೋ? ಒಂದು ವೇಳೆ ಈ ಸಂವತ್ಸರದಲ್ಲಿ ನಮ್ಮ ಆಯುಷ್ಕಾಲವು ಮುಗಿಯಲಿಕ್ಕೆ ಸಾಕು. ಹಾಗಾದರೆ ಎಲ್ಲಿಗೆ ಹೋಗುವೆವು? ಸ್ವರ್ಗಕ್ಕೋ? ನರಕಕ್ಕೋ?

ಅನ್ಯದುಪ್ತಂ ಜಾತಮನ್ಯದಿತ್ಯೇತನ್ನೋಪಪದ್ಯತೇ|
ಉಪ್ಯತೆ ಯದ್ಧಿ ಯದ್ಬೀಜಂ ತತ್ತದೇವ ಪ್ರರೋಹತೇ ||

ಏನಲಾಗಿ ಬಿತ್ತಿದ್ದು ಬೇರೆ, ಹುಟ್ಟಿದ್ದು ಬೇರೆ, ಎಂದಿಗೂ ಆಗದು, ಯಾವ್ಯಾವ ಬೀಜ ಬಿತ್ತಲ್ಪಡುವದೋ ಅದೇ ಮೊಳಿಯುತ್ತದೆ ಎಂಬ ನೀತಿವಚನ ಉಂಟಷ್ಟೇ. ಮನುಷ್ಯನು ಯಾವದು ಬಿತ್ತುತ್ತಾನೋ ಅದನ್ನೇ ಹೊಂದುತ್ತಾನೆ. ಇಹದಲ್ಲಿರುವ ಪರ್ಯಂತರ ನಾವು ಮಾಡುವದೆಲ್ಲಾ ಪರಕ್ಕಾಗಿ ಒಂದು ಬೀಜ ಬಿತ್ತಿದಂತೆ ಆಗುತ್ತದೆ. ಪ್ರತಿ ಮನುಷ್ಯನಿಗೆ ಸಾವು ನೇಮಕವಾಯಿತು; ಸತ್ತ ಮೇಲೆ ಮನುಷ್ಯನಿಗೆ ಇಹದಲ್ಲಿ ಮಾಡಿದ ಕರ್ಮಗಳ ವಿಷಯ ವಿಚಾರಣೆಯಾಗಿ, ಮಾಡಿದ್ದಕ್ಕೆ ತಕ್ಕದ್ದು ಶಿಕ್ಷಾಹತ್ತದೆ. ಆದೇ ಇಲ್ಲಿರುವಾಗ ಬಿತ್ತಿದ ಬೀಜದ

ಫಲ; ಹಾಗಾದರೆ ನಮಗೆ ಅಲ್ಲಿ ಏನು ಶಿಕ್ಕೀತು? ನಾವು ಮಾಡಿದ್ದೆಲ್ಲಾ ಒಳ್ಳೇ ಬೀಜವೆಂಬ ಹಾಗೆ ಕಾಣ ಬರುವದು ಕಷ್ಟ. ಒಬ್ಬೊಬ್ಬನ ಮನಸ್ಸಾಕ್ಷಿ ಸಹ ಇದಕ್ಕೆ ದೃಷ್ಟಾಂತ ಕೊಡುತ್ತದೆ. ನರಜಾತಿಯವರಲ್ಲಿ ಒಬ್ಬೊಬ್ಬನು ಎಷ್ಟೋ ತಪ್ಪು ಪಾಪ ದ್ರೋಹಗಳನ್ನು ಮಾಡುತ್ತಾನೆ. ದೇವರ ಚಿತ್ತಕ್ಕೆ ವಿರೋಧವಾಗಿ ಎಷ್ಟೋ ಮಿಾರುವ ಕರ್ಮಗಳು ಎಷ್ಟೋ ರಕ್ತಾಪರಾಧಗಳು ಒಂದೊಂದು ದೇಶದಲ್ಲಿ ನಡಿಯುತ್ತವೆ. ಇಂಥಾ ಕರ್ಮಗಳಿಂದಲೇ ನಮಗೆ ಅನೇಕ ದುಃಖ ಕಷ್ಟ ವ್ಯಥೆಗಳು ಹುಟ್ಟಿಯವೆ. ಇದೆಲ್ಲಾ ಪಾಪದ್ರೋಹಗಳ ಮೇಲೆ ದೇವರು ಇಟ್ಟ ಶಾಪ ಶಿಕ್ಷೆಗಳೇ.

ಹೀಗಾಗಿದ್ದರೂ ನಮ್ಮ ದಯಾಳು ದೇವರು ಇಂಥಾ ಪಾಪಿಗಳಾದ ನಮಗೆ ಎಷ್ಟೋ ಕರುಣೆ ತೋರಿಸಿ, ಅನೇಕ ಕಷ್ಟಗಳಲ್ಲಿ ಸಹಾಯ ಮಾಡಿ, ಮೋಸ ಆಪತ್ತು ಗಂಡಾಂತರಗಳಲ್ಲಿ ನಮ್ಮನ್ನು ಪಾರಗಾಣಿಸಿ ಸಂರಕ್ಷಿಸುವದಲ್ಲದೆ, ಶರೀರಾತ್ಮಭಾವದ ಉಪಕಾರ ಸಂತೋಷಗಳನ್ನು ಕೊಟ್ಟು, ತಾಳ್ಮೆ ದೀರ್ಘಶಾಂತಿಯುಳ್ಳವನಾಗಿ ನಮ್ಮನ್ನು ಪರಾಂಬರಿಕೆ ಮಾಡುತ್ತಾನಲ್ಲವೋ? ನಮ್ಮ ಪುಣ್ಯ ಯೋಗ್ಯತೆಗಳನ್ನು ನೋಡಿ ಅಲ್ಲಾ, ಕೇವಲ ಪ್ರೀತಿ ಕರುಣೆಗಳಿಂದ ದೇವರು ನಮ್ಮನ್ನು ಈ ಪ್ರಕಾರ ನಡಿಸುತ್ತಾನೆ. ಎಷ್ಟು ಕೆಟ್ಟ ಪಾಪಿಯಾಗಿದ್ದರೂ ಯಾರಾದರೂ ನಾಶವಾಗಿ ಹೋಗ ಬಾರದು ಎಂಬದು ಮಾತ್ರವಲ್ಲಾ, ಎಲ್ಲರಿಗೆ ವಿಮೋಚನೆಯಾಗ ಬೇಕು, ಎಲ್ಲರು ಸ್ವರ್ಗಲೋಕದಲ್ಲಿ ನಿತ್ಯ ಭಾಗ್ಯಕ್ಕೆ ಶೇರ ಬೇಕೆಂಬದು ಅವನ ಚಿತ್ತವಾಗಿದೆ. ಅನೇಕರು ಇದನ್ನು ತಿಳಿಯದೆ ಪಾಪಕರ್ಮಗಳನ್ನು ಬಿಡಲೊಲ್ಲದೆ, ದೇವರ ಚಿತ್ತಕ್ಕೆ ವಿರೋಧವಾಗಿ ತಂತಮ್ಮ ದುರ್ಮಾರ್ಗಗಳಲ್ಲಿಯೂ ದ್ರೋಹಗಳಲ್ಲಿಯೂ ನಡಿಯುತ್ತಾ ದೇವರ ಶಿಕ್ಷೆಗೆ ತಪ್ಪಿಸಿ ಕೊಳ್ಳುತ್ತಾ, ನೀಚವಾದ್ದನ್ನೂ ತಮ್ಮನ್ನು ನಾಶನಕ್ಕೆ ವೈಯುವಂಥಾದ್ದನ್ನೂ ಹಿಡಿದು ದೇವರನ್ನು ಬಿಟ್ಟಿದ್ದಾರೆ. ಆದರೆ ಆತನ ಕೈಗೆ ತಪ್ಪಿಸಿ ಕೊಳ್ಳ ಕೂಡದು. ಅವನು ಅಂಥಾದ್ದು ನೋಡುವದಿಲ್ಲಾ ಎಂಬ ಮೂರ್ಖ ಆಲೋಚನೆ ಮಾತುಗಳು ನಮಗೆ ದೂರ ವಿರಲಿ. ಅವನು ನೋಡುತ್ತಾನೆ ಮಾತ್ರವಲ್ಲಾ, ದಯೆ ಪ್ರೀತಿಭಾವವುಳ್ಳವನಾಗಿ ನಮ್ಮನ್ನು ನೋಡಿ, ಈ ಹೊಸ ವರ್ಷದಲ್ಲಿ ಸಹ ನಮ್ಮ ಸಂಗಡಲಿದ್ದು, ನಮ್ಮ ಸಹಾಯಕನಾಗಿ, ಮುದಿ ವಯ್ಯದ ಪರ್ಯಂತರವೂ ನರೆಕೂದಲು ಬರುವ ಪರ್ಯಂತರವೂ ನಮ್ಮನ್ನು ಉದ್ಧಾರ ಮಾಡುವವನಾಗಿದ್ದಾನೆ; ಹೌದು, ಇಹಪರಗಳಲ್ಲಿ ನಮ್ಮ ರಕ್ಷಣೆಯ ದೇವರು ಅವನೇ. ಅವನಲ್ಲಿ ನಂಬಿ, ಧೈರ್ಯದಿಂದಿರ್ಯ ಪಡೋಣ; ಅವನ ದಯಾಸನಕ್ಕೆ ಶೇರಿ, ಈ ಹೊಸ ವರ್ಷಕ್ಕಾಗಿ ವಿಿನ್ನಹ ಪ್ರಾರ್ಥನೆಗಳನ್ನು ಅರಿಕೆ ಮಾಡುವಾ, ಏನಂದರೆ:

ಈ ಹಿರಿ ಕಿರಿಯರಲ್ಲಿ ನಿನ್ನೊಳ್ಮೆ ಕಾಂತಿ ಚಲ್ಲಿ,
ಕೊಟ್ಟಿಡು ನಮ್ಮ ಪಾದ ಪೋವಲ್ಲಿ ಆಶೀರ್ವಾದ!
ದುರ್ಗತಗಾಗು ಗತಿ! ವಿಮನಗಾಗು ಮತಿ!
ನಿರ್ಬಲಗಾಗು ಬಲ! ನಿಃಸ್ಥಲಗಾಗು ಸ್ಥಲ!
ರೋಗಿಷ್ಠರಿಂಗೆ ದಯ ಗೈದಿಹ ಕಷ್ಯ, ಭಯ
ತಾಳ್ವಾತ್ಮರಾತ್ಮಭಾರ ಕಂಡೀವು ಪರಿಹಾರ!

ಆತನು ಸರ್ವತ್ರಾಣಿ ಮಾತ್ರವಲ್ಲಾ, ಸರ್ವಜ್ಞಾನಿಯೂ ಆಗಿದ್ದಾನೆ; ಅದು ಕಾರಣ ಅಲ್ಪ ಬುದ್ಧಿಯುಳ್ಳವರಾದ ನಮಗೆ ಆತನ ಕೆಲಸ ಮಾರ್ಗಗಳಲ್ಲಿ ಅನೇಕ ಸಾರಿ ಡೊಂಕು ತಪ್ಪು

ಅನ್ಯಾಯ ಸಹ ಕಂಡ ಹಾಗೆ ಆದರೂ, ಆತನು ತಪ್ಪು ಅನ್ಯಾಯ ಮಾಡುವವನು ಅಲ್ಲವೇ ಅಲ್ಲಾ; ನಮಗೆ ಈಗ ತಿಳಿಯದ, ಕತ್ತಲೆಯಂತೆ ತೋರುವ ಸಂಗತಿಗಳೆಲ್ಲಾ ಕಡೆಯಲ್ಲಿ ಬೆಳಕಾಗುತ್ತವೆ. ಆ ಶ್ರೀಮಂತ ಯೋಸೇಫನ ಕಥೆ ನೆನಪು ಮಾಡೋಣ.* ದೇವರು ಎಂದೆಂದಿಗೂ ಬದುಕುವವನು; ನಮ್ಮ ಆಯುಷ್ಯ ಬೇಗ ಮುಗಿಯುತ್ತದೆ. ಈ ನಮ್ಮ ದೇವರ ಮೇಲೆ ಸ್ಥಿರವಾಗಿ ಭರವಸವಿಟ್ಟು, ವಿಶ್ವಾಸವೆಂಬ ಕೈಯಿಂದ ಆತನನ್ನು ಹಿಡುಕೊಂಡರೆ, ಆಗ ಈ ಲೋಕದಲ್ಲಿ ಸ್ವಲ್ಪವಾಗಲಿ ಹೆಚ್ಚಾಗಲಿ ಇನ್ನು ಉಳಿದಿರುವ ನಮ್ಮ ಆಯುಷ್ಕಾಲದಲ್ಲಿ ಇನ್ನು ಎಷ್ಟು ದುಃಖ ಕಷ್ಟಾದಿಗಳನ್ನು ತಾಳ ಬೇಕಾದರೂ, ಈ ಹೊಸ ವರ್ಷದಲ್ಲಿ ಸಹ ಏನೇನು ನಮ್ಮ ಮೇಲೆ ಬಂದರೂ, ನಾವು ಭಯ ಪಡುವದಕ್ಕೆ ಕಾರಣವಿಲ್ಲಾ; ನಮಗೆ ನಿಜ ಗತಿ ಉಂಟು. ಇಹದಲ್ಲೂ ಪರದಲ್ಲೂ ನಮ್ಮ ಗತಿ ದೇವರೇ.

ಬೋಧ್ಯವಾದ ಕಥೆಗಳು.

೧. ಆಪದ್ಬಾಂಧವರು.

ಆಪದ್ಬಾಂಧವರು, ಅಂದರೆ ಸುಖಕಾಲದಲ್ಲಿ ಮಾತ್ರವಲ್ಲಾ, ದುಃಖಕಾಲದಲ್ಲಿಯೂ ಆಪತ್ತಿನಲ್ಲಿಯೂ ಬಾಂಧವರೂ ಸ್ನೇಹಿತರೂ ಆಗಿರುವಂಥವರು ಬಿಳೀ ಆನೆಯಷ್ಟು ವಿರಳರು (ದುರ್ಲಭ್ಯರು) ಎಂಬುವ ಮಾತು ಉಂಟು. ಈ ಮಾತು ಹೌದೆಂತ ಸರ್ವರೂ ಒಪ್ಪಿ ಕೊಂಡಾರು; ಆದರೆ ಒಳ್ಳೇ ವಿಚಾರಬುದ್ಧಿ ಇದ್ದಂಥಾ ಒಬ್ಬಾನೊಬ್ಬ ಗೃಹಸ್ಥನು ಅದು ಹೌದಲ್ಲವೆಂದು ಹೇಳಿದನು, ಯಾಕಂದರೆ ತನ್ನ ಸ್ನೇಹ ಮಾಡಿಕೊಳ್ಳಲಿಕ್ಕೆ ಬಂದ ಹೇರಳ ಜನರು ಸ್ವಲ್ಪ ಸ್ನೇಹ ಮಾತ್ರವಾದರೂ ಆದ ಕೂಡಲೇ ಬಂದು, ತಮಗೆ ಹಣದ ಅವಸರ ಬಿತ್ತೆಂಧೇಳಿ, ಸಾಲ ಬೇಡಿ ಕೊಂಡರು; ಹೀಗಿರಲಾಗಿ ಆಪದ್ಬಾಂಧವರು ವಿರಳರಲ್ಲಾ, ಹೇರಳರೇ ಎಂದು ಕಾಣುತ್ತದೆ.

೨. ಕೈವಾರಕಮ್ಮಾರನು.

ಊರೂರು, ಗ್ರಾಮಗ್ರಾಮ, ಹಳ್ಳಿಪಳ್ಳಿಗೆ ಹೋಗಿ, ಜೌಳಿ ಮೊದಲಾದ ಮಾಲು ಮಾರುವವರು ತಿರುಗಾಡಿ, ವ್ಯಾಪಾರ ನಡಿಸಿ ಜೀವನ ಮಾಡುವಂತೆ ಕೈವಾರಕಮ್ಮಾರನು ಸಹ ಊರೂರು, ಗ್ರಾಮಗ್ರಾಮ, ಹಳ್ಳಿಪಳ್ಳಿಗಳಲ್ಲಿ ತಿರುಗಾಡಿ, ತನ್ನ ವ್ಯಾಪಾರ ನಡಿಸಿ, ಹೊಟ್ಟಿ ಹೊರಕೊಳ್ಳುತ್ತಿದ್ದನು. ಆದರೆ ಅವನ ವ್ಯಾಪಾರವೆಂದರೆ: ಕೈವಾರಗಳನ್ನು ಮಾಡಿ ಮಾರುವದು ಅಲ್ಲಾ, ಕುಟಿಲ ಕೃತ್ರಿಮಗಳನ್ನು ನಡಿಸಿ, ಠಕ್ಕಿಸಿ, ದಗೇ ಮಾಡಿ, ಜನರುಗಳನ್ನು ಭೋಳವಿಸುವದೇ. ಒಂದಾನೊಂದು ದಿವಸ ಅವನು ಮೂಢಗೇರಿ ಎಂಬ ಗ್ರಾಮಕ್ಕೆ ಬಂದು, ನೆಟ್ಟಗೆ ಪಟೇಲನಲ್ಲಿಗೆ ಹೋಗಿ, ಹೇಳಿದ್ದೇನಂದರೆ: "ಪಟೇಲರೇ! ನಿಮ್ಮ ಗ್ರಾಮಕ್ಕೆ ಹೆಚ್ಚು ಮಳೆ ಬೇಡವೋ? ಬರುವ ದಾರಿಯಲ್ಲಿ ನಿಮ್ಮ ಗ್ರಾಮಕ್ಕೆ ಶೇರಿದ ಗದ್ದಿಹೊಲಗಳನ್ನು ನೋಡಿ, ಬಹು ಕರಕರೆ ಪಟ್ಟೆ. ನಿಮ್ಮ

*ಕಡಿಗೆ ವಜೀರನಾದ ಯುವಗೋಪಾಲರತ್ನವೆಂಬೀ ಪುಸ್ತಕವು ಮಂಗಳೂರಿನ ಬುಕ್‌ಶಾಪಿನಲ್ಲಿ ತಿಕ್ಕುತ್ತದೆ.

ಬೆಟ್ಟುಪೈರು ನೀರಿಲ್ಲದೆ ಬೆಂದು ಹೋಗುತ್ತದೆ; ತಗ್ಗು ಗದ್ದೆಯ ಬೆಳೆಯಾದರೂ ಮಳೆ ಸಾಲದೆ ಬರಡಾಗುವ ಹಾಗೆ ಕಾಣಿಸುತ್ತದೆ." ಅದಕ್ಕೆ ಆ ಪಟೇಲನು: "ಏನು ಹೇಳಲಿ! ಮಳೆ ಸಾಲುವದಿಲ್ಲಾ, ಹೌದು; ಆದರೆ ಮಾಡುವದೇನು? ದೇವರಲ್ಲದೆ ಮಳೆ ಬಿಸಿಲು ಯಾರು ಹಿತವಾಗಿ ಮಾಡಿ ಕೊಡ ಬಹುದು?" ಎಂದನ್ನಲು, ಕೈವಾರಕಮ್ಮಾರನು ಪ್ರತ್ಯುತ್ತರವಾಗಿ ಹೇಳಿದ್ದೇನಂದರೆ: "ನಾನು ಮಳೆ ಬಿಸಿಲು ಹಿತವಾಗಿ ಬರ ಮಾಡ ಬಲ್ಲೆ. ಈ ವಿದ್ಯೆ ನನ್ನ ವೃತ್ತಿಯಾಗಿದೆ. ಮೇಘಮಂತ್ರ ಮೊದಲಾದ ಮಂತ್ರಗಳನ್ನು ನಾನು ಕಲಿತು ಕೊಂಡು, ಮಾಡ ಬಲ್ಲವನಾಗಿದ್ದೇನೆ. ಈ ವೃತ್ತಿಯಲ್ಲಿ ದೇಶಸಂಚಾರ ಮಾಡುತ್ತಿದ್ದೇನೆ. ಇತಲ್ಯ ದೇಶವು ನಿಂಬೆ ಕಿತ್ತಳಿ ಮೊದಲಾದ ಫಲಗಳು ಬೆಳೆದು ಹಣ್ಣಾಗುವ ದೇಶವೇ. ಅಲ್ಲಿ ಮಳೆ ಬಿಸಿಲು ಹಿತವಾಗಿ ಬರ ಮಾಡ ಬಲ್ಲವನವರು ಇದ್ದಾರೆ; ಇಲ್ಲವಾದರೆ ನಿಂಬೆ ಮುಂತಾದ್ದು ಅಲ್ಲಿ ಹ್ಯಾಗೆ ಬೆಳದು ಹಣ್ಣಾದೀತು? ಅಲ್ಲಿಂದಲೇ ನಾನು ಬಂದವನು. ಈ ವಿದ್ಯೆ ಇಲ್ಲಿ ಒಬ್ಬನಿಗೂ ಇಲ್ಲಾ." ಆ ಪಟೇಲನು ಭೋಳೆ ಮನುಷ್ಯನಾಗಿದ್ದದಲ್ಲದೆ ಬೇಗನೇ ಬಹಳ ಐಶ್ವರ್ಯವಂತನಾಗ ಬೇಕೆಂಬ ಮನಸ್ಸುಳ್ಳವನೂ ಆಗಿದ್ದು, ಕೈವಾರಕಮ್ಮಾರನ ಮಾತಿಗೆ ಮರುಳಾದನು. ಆದರೆ ಪರೀಕ್ಷೆಯಿಲ್ಲದೆ ಕಂಡ ಕಂಡವರನ್ನು ನಂಬ ಬಾರದು ಎಂಬುವ ಬುದ್ಧೀ ಮಾತನ್ನು ನೆನಸಿ, ತಾನು ಮೊದಲು ಪರೀಕ್ಷೆ ಮಾಡಿ ನೋಡ ಬೇಕೆಂದು ತನ್ನಲ್ಲಿ ಅಂದು ಕೊಂಡು, ಅವನು ಕೈವಾರಕಮ್ಮಾರನಿಗೆ ಹೇಳಿದ್ದೇನಂದರೆ: "ನಾಳೆ ಬೆಳಿಗ್ಯೆ ಆಕಾಶವನ್ನು ನಿರ್ಮಲ ಮಾಡಿ ಕೊಟ್ಟು, ಒಳ್ಳೇ ಬಿಸಿಲು ಹೊಡಿಸ ಬೇಕು; ಮಧ್ಯಾಹ್ನದ ಹೊತ್ತಿಗೆ ಮೋಡ ಕವಿದು ಬರ ಮಾಡ ಬೇಕು; ಸಂಜೆಗೆ ಒಳ್ಳೇ ಮಳೆ ಬೀಳ ಬೇಕು. ನೀವು ಹೀಗೆ ಮಾಡಿ ಕೊಟ್ಟರೆ, ನಂಬುತ್ತೇನೆ" ಎನಲು, ಕೈವಾರಕಮ್ಮಾರನು ಅಂದದೇನಂದರೆ: "ಪಟೇಲರೇ! ನನಗೆ ಒಂದು ಅರಿಕೆ ಉಂಟು: ಈ ಕೆಲಸವು ಸುಮಾರು ಖರ್ಚಿನದು. ಒಂದೇ ದಿನಕ್ಕೆ ಮಾತ್ರ ಇಷ್ಟು ಖರ್ಚು ಮುಟ್ಟಿಸಲಿಕ್ಕೆ ನನಗೆ ಮನಸ್ಸು ಬಾರದು. ಇಡೀ ಒಂದು ವರ್ಷಕ್ಕೆ ಹ್ಯಾಗೆ ಆಗ ಬೇಕೆಂದು ನೀವು ಅಪ್ಪಣೆ ಕೊಟ್ಟರೆ, ನಾನು ಮಾಡಿ ಕೊಡುತ್ತೇನೆ. ನನಗೆ ಒಂದು ವರ್ಷಕ್ಕೆ ಅಪ್ಪಣೆ ಆದರೆ, ನಿಮ್ಮ ಕಣಜ ಉಗ್ರಾಣಗಳು ಬೆಳೆ ಹಿಡಿಯಲಿಕ್ಕೆ ಸಾಲದ ಹಾಗೆ ಮಾಡಿ ಕೊಡುತ್ತೇನೆ. ಪರೀಕ್ಷೆ ಮಾಡಿ ನೋಡಿರಿ!" ಪಟೇಲನು ಒಂದು ವರ್ಷಕ್ಕೆ ಮಾಡಲಿಕ್ಕೆ ಎಷ್ಟು ಕೊಡ ಬೇಕೆಂದು ಕೇಳಿದ್ದಕ್ಕೆ ಕೈವಾರಕಮ್ಮಾರನು: "ಈಗ ನನಗೆ ಏನೂ ಕೊಡ ಬೇಡಿರಿ! ಈ ಕೆಲಸಕ್ಕೆ ಮೂರು ದಿವಸ ಹಿಡಿಯುವದು. ಒಂದೊಂದು ದಿವಸಕ್ಕೆ ಒಂದೊಂದು ರೂಪಾಯಿ ಮತ್ತು ಊಟಕ್ಕೆ ನೀವು ಕೊಡಿಸಿದರೆ, ಸದ್ಯಕ್ಕೆ ಸಾಕು. ಆ ಮೇಲೆ ಒಳ್ಳೇ ಸುಭಿಕ್ಷೆಯ ವರ್ಷಗಳಲ್ಲಿ ಆಗುವ ಬೆಳೆಗಿಂತ ಎಷ್ಟು ಹೆಚ್ಚಿಗೆ ಆಗುತ್ತದೋ, ಅಷ್ಟರ ದಶಾಂಶವನ್ನು (೧೦ನೇ ಪಾಲು) ನನಗೆ ಕೊಡ ಬೇಕು" ಎಂದು ಹೇಳಿದನು. ಪಟೇಲನು ಈ ಮಾತನ್ನು ಕೇಳಿ, ಕೈವಾರಕಮ್ಮಾರನು ಬಹು ದಾಕ್ಷಿಣ್ಯಪರನೆಂದು ನೆನಸಿ, ಅಷ್ಟು ಕೊಡಿಸುತ್ತೇನೆಂದು ಒಡಂಬಟ್ಟು, ಕರಾರುನಾಮೆ ಮಾಡಿಸಿ ಕೊಳ್ಳಲಿಕ್ಕೆ ಕೈವಾರಕಮ್ಮಾರನ ಕೈಯಲ್ಲಿ ಕಾಗದವನ್ನೂ ಲೇಖಣಿಯನ್ನೂ ಕೊಟ್ಟು, ವಾರ ವಾರಕ್ಕೆ ತಾನು ಹ್ಯಾಗೆ ಅಪ್ಪಣೆ ಕೊಡುತ್ತೇನೋ, ಹಾಗೆ ಮಳೆ ಬಿಸಿಲು ಘಾಳಿ

ಬರ ಮಾಡುವ ಮಾತನ್ನು ಬರದಿಟ್ಟು ಕೊಡ ಬೇಕೆಂದು ಹೇಳಿದ್ದಕ್ಕೆ ಕೈವಾರಕಮ್ಮಾರನು ಅಂದದೇನಂದರೆ: "ಪಟೇಲರೇ! ಹಾಗಾಗದು! ನೀವು ನಿಮ್ಮ ಗ್ರಾಮದ ಗೃಹಸ್ಥರನ್ನೂ ರೈತರನ್ನೂ ಈ ವಿಷಯದಲ್ಲಿ ಕೇಳದೆ, ಅವರ ಇಷ್ಟವನ್ನು ತಿಳುಕೊಳ್ಳದೆ, ಘಾಳಿ ಮಳೆ ಬಿಸಿಲನ್ನು ವಿಧಿಸಲಿಕ್ಕೆ ಕೂಡದು; ನೀವು ವಿಧಿಸಿದ್ದು ಅವರಿಗೆ ಆಗದಿದ್ದರೆ, ಭೇದ ಹುಟ್ಟಿ, ಕರಕರೆಗೆ ಕಾರಣವಾದೀತು. ಹೀಗಾಗದ ಹಾಗೆ ನೀವು ಇದರ ವಿಷಯವಾಗಿ ಅವರ ಸಮ್ಮತಿ ಕೇಳಿ ಕೊಂಡು, ನನಗೆ ವಿಧಿಸಿ ಕೊಡ ಬೇಕೆಂಬದು ನನ್ನ ಅರಿಕೆಯಾಗಿದೆ." ಈ ನ್ಯಾಯವಾದ ಮಾತಿನ ಮೇಲೆ ಪಟೇಲನು ಕೈವಾರಕಮ್ಮಾರನಲ್ಲಿ ಇನ್ನು ಹೆಚ್ಚು ನಂಬಿಕೆಯಿಟ್ಟು, "ನಿಮ್ಮ ಮಾತು ಬಹಳ ವಾಜಿಬಿ! ಈಹೊತ್ತೇ ಗ್ರಾಮದವರನ್ನು ಕೂಡಿಸಿ, ಈ ವಿಷಯದಲ್ಲಿ ಮಾತಾಡಿಸುತ್ತೇನೆ. ನೀವು ನಿಮ್ಮ ಬಿಡಾರಕ್ಕೆ ಹೋಗಿರಿ! ನಾನು ನಿಮ್ಮಲ್ಲಿ ಬಂದು, ಗ್ರಾಮದವರ ಇಷ್ಟವನ್ನು ತಿಳಿಸುತ್ತೇನೆ." ಕೈವಾರಕಮ್ಮಾರನು ತನ್ನ ಮನಸ್ಸಿನಲ್ಲಿ ಬಹಳ ಸಂತುಷ್ಟನಾಗಿ, ತನ್ನ ಬಿಡಾರಕ್ಕೆ ಹೋದನು. ಮತ್ತು ಪಟೇಲನು ಡಂಗರ ಹೊಯಿಸಿ, ಗ್ರಾಮದ ಗೃಹಸ್ಥರೆಲ್ಲರನ್ನು ನೆರವಿಸಿ ಕೊಂಡು, ತನಗೂ ಕೈವಾರಕಮ್ಮಾರನಿಗೂ ನಡೆದ ಸಂಗತಿಯನ್ನೆಲ್ಲಾ ತಿಳಿಸಿ, ಸಭೆಯ ಅನುಜ್ಞೆ ಬೇಡಿ ಕೊಂಡನು. ಆದರೆ ಮಳೆ ಬಿಸಿಲಿನ ವಿಷಯದಲ್ಲಿ ಗ್ರಾಮದವರ ಇಷ್ಟವು ಒಬ್ಬನದಕ್ಕೆ ಒಬ್ಬನದು ಏನೂ ಸರಿ ಬೀಳದೆ, ಮೊದಲಿನ ಕೂಟದಲ್ಲಿ ಗ್ರಾಮದವರೊಳಗೆ ಸಮ್ಮತಿಯಾಗದೆ ಹೋದ ಕಾರಣ ಇನ್ನೊಂದು ಕೂಟವು, ಎರಡನೇ ಕೂಟದಲ್ಲಿಯೂ ಒಪ್ಪಿಕೆ ಆಗದ್ದರಿಂದ ಇನ್ನೊಂದು ಕೂಟವು ಅವಶ್ಯವಾಗಿ, ಹೀಗೆ ಒಂದರ ಮೇಲೆ ಒಂದಾಗಿ ಏಳು ಕೂಟಗಳು ಆದಾಗ್ಯೂ, ಭೇದವು ಹೆಚ್ಚುತ್ತಾ ಬಂದದ್ದಲ್ಲದೆ, ಸಮ್ಮತಿಯಾಗುವ ಮಾತು ಏನೂ ತೋರದ ಕಾರಣ ಗ್ರಾಮದವರಲ್ಲಿ ಸ್ವಲ್ಪ ಹೆಚ್ಚು ವಿವೇಕಬುದ್ಧಿ ಇದ್ದವನೊಬ್ಬನು ಆಲೋಚನೆ ಕೊಟ್ಟು ಹೇಳಿದ್ದೇನಂದರೆ: "ಈ ಸಂಗತಿಯಲ್ಲಿ ಭೇದವು ಹೆಚ್ಚುವದಲ್ಲದೆ, ಸಮ್ಮತಿಯಾಗುವ ಮಾರ್ಗವೂ ಏನಾದರೂ ಉಪಯೋಗವೂ ಕಾಣದ ಕಾರಣ, ಈ ಕೈವಾರಕಮ್ಮಾರನಿಗೆ ಈ ಒಂಭತ್ತು ದಿನದ ಮಜೂರಿಯೂ ಊಟದ ಖರ್ಚೂ ಕೊಟ್ಟು, ಬಂದ ದಾರಿ ಹಿಡಿಯ ಹೇಳಿದರಾದೀತು ಎಂದು ನನಗೆ ತೋರುತ್ತದೆ." ಈ ಆಲೋಚನೆಗೆ ಕಡೆಯಲ್ಲಿ ಎಲ್ಲರು ಒಪ್ಪಿ ಕೊಳ್ಳಲಾಗಿ, ಪಟೇಲನು ಕೈವಾರಕಮ್ಮಾರನನ್ನು ಕರಿಸಿ, ಸಭೆಯ ನಿರ್ಣಯ ತಿಳಿಸಿ, ಊಟದ ಖರ್ಚೂ ಒಂಭತ್ತು ರೂಪಾಯಿಯೂ ಕೊಟ್ಟು, ಕಳುಹಿಸಿದನು. ಆ ಠಕ್ಕನು ಹಣವನ್ನು ತೆಗೆದು ಕೊಂಡು, ಕೈ ಮುಗಿದು, ತನ್ನ ಠಕ್ಕು ನಡಿಸಿ, ಕಾಲಕ್ಷೇಪ ಮಾಡಲಿಕ್ಕೆ ತನಗೆ ತಿರಿಗಿ ತಕ್ಕ ಜನರು ಶಿಕ್ಕಿದ್ದಕ್ಕೆ ನಕ್ಕು, ನಡೆದನು.

ದೇವರೊಬ್ಬನೇ ಆಕಾಶದ ಒಡೆಯನಾಗಿ, ಸೂರ್ಯನಿಗೂ ವಾಯುವಿಗೂ ಮೋಡಕ್ಕೂ ಅಪ್ಪಣೆ ಕೊಟ್ಟು, ತನ್ನ ಮನಸ್ಸಿದ್ದ ಹಾಗೆ ಘಾಳಿ ಮಳೆ ಬಿಸಿಲನ್ನು ಕಳುಹಿಸುವಂಥಾದು ಒಳ್ಳೇದು; ಮತ್ತು ಆತನು ಯಾರನ್ನೂ ಕೇಳದೆ, ಮುಖದಾಕ್ಷಿಣ್ಯ ನೋಡದೆ, ಈ ವಿಷಯದಲ್ಲಿ ನಡಿಸುವಂಥಾದು ಎಲ್ಲಾ ಲೋಕಕ್ಕೆ ಮಹೋಪಕಾರವೇ.

ವಿವಿಧ ವಿಷಯಗಳು.

ಹಿಂದು ಜನರೊಳಗೆ ವಿಪರೀತ ಪದ್ಧತಿ ಒಂದು ಏನಂದರೆ, ಗಂಡಸರು ಕಾಲಿಗೆ ಕೆರ ಹಾಕಿ ಕೊಳ್ಳ ಬಹುದು, ತಲೆಯ ಮೇಲೆ ಕೊಡೆ ಹಿಡಿಯ ಬಹುದು; ಆದರೆ ಹೆಂಗಸರು ಹಾಗೆ ಮಾಡ ಬಾರದು. ವಾಸ್ತವಿಕವಾಗಿ ನೋಡಿದರೆ, ಸ್ತ್ರೀಜಾತಿ ಸೂಕ್ಷ್ಮಶರೀರವುಳ್ಳವರಾಗಿರುವದರಿಂದ ಮೇಲೆ ಹೇಳಿದ ಎರಡು ಸ್ವತಂತ್ರ ಸ್ತ್ರೀಯರಿಗೂ ಇರುವದು ಬಹು ಅಗತ್ಯವಾಗಿದೆ.

ವಾತಸಂಬಂಧದಿಂದ ಶರೀರದ ಗಂಟು ಹಿಡುಕೊಂಡರೆ, ಆ ಸ್ಥಳಕ್ಕೆ ಜೇನುನೊಣ ಕಚ್ಚಿಸಿದ್ದಲ್ಲಿ ಕೋಗ ದೂರವಾಗುತ್ತದೆಂತ ಒಬ್ಬ ಯುರೋಪಿಯನ್ ಒಕ್ಕಲಿಗನು ಅನುಭವ ಮಾಡಿದ್ದಾನೆ.

ಈ ಪೃಥ್ವಿಯ ಮೇಲೆ ಹೆಚ್ಚು ಕಡಿಮೆ ೧,೫೦೫ ಭಾಷೆಗಳಿದ್ದಾವೆ; ಯುರೋಪಿನಲ್ಲಿ ೫೮೬; ಆಸ್ಯದಲ್ಲಿ ೫೫೬; ಅಫ್ರಿಕದಲ್ಲಿ ೨೬೫; ಅಮೇರಿಕದಲ್ಲಿ ೧೦೬.—ಜನಸಂಖ್ಯೆ ಎಷ್ಟಂದರೆ: ಯುರೋಪಿನಲ್ಲಿ ೪೧೨,೬೫೪,೪೪೪; ಆಸ್ಯದಲ್ಲಿ ೮೪೧,೦೦೦,೦೦೦; ಅಫ್ರಿಕದಲ್ಲಿ ೨೦೫,೨೧೫,೫೦೦; ಔಸ್ಟ್ರಾಲಿಯದಲ್ಲಿಯೂ ದ್ವೀಪಾಂತರಗಳಲ್ಲಿಯೂ ೪,೪೧೧,೩೦೦; ಅಮೇರಿಕದಲ್ಲಿ ೮೬,೧೧೬,೦೦೦; ಅಂತು ೧,೪೩೫,೧೪೫,೩೦೦. ಈ ಲೆಕ್ಕ ಭರವಸಯೋಗ್ಯವಾದದ್ದು; ಇದರ ಮೇರೆಗೆ ಈ ವರೆಗೆ ಸಾಧಾರಣವಾಗಿ ನೆನಸುತ್ತಿದ್ದ ಸಂಖ್ಯೆಗಿಂತ ಒಂದು ವರೆ ಕೋಟಿ ಮನುಷ್ಯರು ವರ್ಧನೆಯಾದರೆಂತ ಕಾಣುತ್ತದೆ.

ಕೆರೊಸಿನ್ ಎಂಬ ಕಲ್ಲೆಣ್ಣೆ ಈಗ ನಮ್ಮ ದೇಶದಲ್ಲಿಯೂ ಬಹುತಾ ಪ್ರಯೋಗಕ್ಕೆ ಬಂದದೆ; ಇದು ಬಹಳ ಅಗ್ಗವಾಗಿಯೂ, ಅದರಿಂದ ಉರಿಸಿದ ದೀಪಗಳ ಬೆಳಕು ಬಹು ಚಲೋದೂ ಆಗಿದೆ. ಆದರೆ ಇದರ ಪ್ರಯೋಗದ ವಿಷಯ ಕೆಲವು ಸೂಚನೆಗಳು ಅವಶ್ಯವೆಂತ ಕಾಣುತ್ತದೆ. ಈ ಕೆರೊಸಿನ್ ಎಣ್ಣೆ ಅಮೇರಿಕದಲ್ಲಿಯೂ ಬೇರೆ ಕಡೆಗಳಲ್ಲಿಯೂ ಭೂಮಿಯಲ್ಲಿ ದೊರಕುತ್ತದೆ. ಭೂಮಿಯೊಳಗೆ ಭಾವಿಯ ಹಾಗೆ ಆಳವಾದ ಖನಿಗಳನ್ನು ಅಗಿಯುವಾಗ್ಯೆ ಆ ಎಣ್ಣೆ ಬುಗ್ಗೆಗಳಲ್ಲಿ ಊರುತ್ತಾ ಬರುತ್ತದೆ; ಕೆಲವು ಭಾವಿಗಳಿಂದ ಇನ್ನೂರು ಮುನ್ನೂರು ಪೀಪಾಯಿ ಶಿಕ್ಕುತ್ತದೆ; ಮೊಗದು ಮೇಲಕ್ಕೆ ತಂದು, ಶುದ್ಧ ಮಾಡಿ, ಡಬ್ಬೆಗಳಲ್ಲಿ ತುಂಬಿಸಿ, ನಾನಾ ದೇಶಗಳಿಗೆ ಕಳುಹಿಸುತ್ತಾರೆ. ಈ ಎಣ್ಣೆ ಮಹಾ ಜ್ವಾಲಾಗ್ರಾಹಿಯಾಗಿದೆ; ಹಾಗಂದರೆ ಅದಕ್ಕೆ ಜ್ವಾಲೆಯಾಗಲಿ ದೀಪದ ಕಿಂಚಿತ್ತು ಜ್ಯೋತಿಯಾಗಲಿ ಹತ್ತಿದರೆ, ಅಥವಾ ಉರಿಯುವ ಬತ್ತಿ ಒಳಗೆ ಬಿದ್ದರೆ, ಅದು ಏಕಾಏಕಿ ಉರಿದು ಒಡಿಯುವದು. ಡಬ್ಬೆಯ ಹೊರ ಭಾಗದಲ್ಲಿ ಎಣ್ಣೆ ಹರಿದು ಬಂದದಿದ್ದರೆ, ಅದಕ್ಕೆ ದೀಪ ತಾಗಿದರೆ, ಉರಿದು ಕ್ಷಣದಲ್ಲಿ ಜ್ವಾಲೆ ಒಳಗೆ ಹೋಗಿ, ಎಣ್ಣೆ ಎಲ್ಲಾ ಉರಿದು ಹೋಗುವದು. ಒಳಗೆ ಪೆಂಕಿ ತಾಗಿದರೆ, ಡಬ್ಬೆ ಒಡದು ಎಣ್ಣೆ ನಾಲ್ಕು ಕಡೆ ಚಲ್ಲಿ ವಸ್ತ್ರಗಳು ಕಟ್ಟಿಗೆ ಮುಂತಾದವುಗಳಿಗೆ ಹಿಡಿದು, ಸುಟ್ಟು ಹೋಗುವವು; ಮನುಷ್ಯರು ಹತ್ತರವಿದ್ದರೆ, ಮೈ ಸುಟ್ಟು ಹೋಗಿ, ಸಾಯುವರು; ಹೀಗೆ ಬಹಳ ಸಾರಿ ಮೋಸವಾಗಿದೆ; ಆದ್ದರಿಂದ ಈ ಎಣ್ಣೆ ಉರಿಸಲಿಕ್ಕೆ ಮಾಡಿದ ವಿಂಗಡ ದೀಪಗಳಲ್ಲಿ ಅಲ್ಲದೆ ಬೇರೆ ದೀಪಗಳಲ್ಲಾಗಲೀ ಹಣತೆಗಳಲ್ಲಾಗಲೀ ದೀವಟಿಗೆಗಳಲ್ಲಾಗಲೀ ಹಾಕಿ ಉರಿಸ ಬಾರದು. ಮತ್ತು ಈ ಎಣ್ಣೆ ಉರಿಸುವ ಪೌರುಷತ್ಯವನ್ನು ಹುಡುಗರಕೈಗೂ ಎಚ್ಚರಿಕೆ ಇಲ್ಲದ ಸೆಡ್ಡರ ಕೈಗೂ ಒಪ್ಪಿಸ ಬಾರದು. ಅದನ್ನು ಭಯವಾಗಿ ಉಪಯೋಗಿಸುವದರಿಂದ ಏನೂ ಅಪಾಯ ಬರು

ವದಿಲ್ಲ. ಈ ಎಣ್ಣೆಯಿಂದ ಶರೀರಕ್ಕೆ ಗುಣ ಉಂಟೆಂದು ಹೇಳ್ಳುತ್ತಾರೆ; ಅದರ ವಾಸನೆ ಒಳಗೆ ತ ಕ್ಕೊಳ್ಳುವದರಿಂದ, ಕೆಮ್ಮು ಮುಂತಾದ ರೋಗಗಳು ದೂರವಾಗುತ್ತವೆ; ಕೆರೊಸಿನ್ ಎಣ್ಣೆ ಶುದ್ಧ ಮಾಡುವ ಒಂದು ಕಾರಖಾನೆಯಲ್ಲಿ ಒಬ್ಬನಿಗಾದರೂ ಕೆಮ್ಮು ನೆಗಡಿ ಉಂಟಾಗಲಿಲ್ಲವೆಂದೂ, ಕೆಮ್ಮು ಉಳ್ಳವರಾಗಿ ಅದರಲ್ಲಿ ಕೆಲಸಕ್ಕೆ ಶೇರಿದವರಿಗೆ ಸ್ವಲ್ಪ ದಿವಸಗಳಲ್ಲಿ ಅದರ ಲಕ್ಷಣಗ ಳೆಲ್ಲಾ ಕಾಣದೆ ಹೋದವೆಂದೂ ಅನುಭವದಿಂದ ಗೊತ್ತಾಗಿದೆ.

ಒಂದು ನಿಮಿಷದಲ್ಲಿ ೨,೦೦೦ ವರ್ತಮಾನಗಳನ್ನು ತಂತಿಟಪ್ಪಾಲಿನಲ್ಲಿ ಕಳುಹಿಸಲಿಕ್ಕಾ ಗುವ ನೂತನವಾದ ಯಂತ್ರವು ಅಮೇರಿಕದ ನ್ಯೂಯೊರ್ಕ್ ಪಟ್ಟಣದಲ್ಲಿ ಕಲ್ಪಿಸಿದ್ದಾರೆ; ಈ ವರೆಗೆ ಒಂದು ನಿಮಿಷದಲ್ಲಿ ಇಪ್ಪತ್ತು ಮಾತುಗಳನ್ನು ಮಾತ್ರ ಕಳುಹಿಸ ಬಹುದಿತ್ತು. ಇದೇ ತಂತಿಟಪ್ಪಾಲಿನಲ್ಲಿ ಇನ್ನೊಂದು ಹೊಸ ಯುಕ್ತಿ ಏನಂದರೆ: ಈ ವರೆಗೆ ತಂತಿಟಪ್ಪಾಲು ಅಕ್ಷರಗಳ ಸಾಜ್ಞೆಗಳನ್ನು ಮಾತ್ರ ಮಾಡುತ್ತಿತ್ತು; ಅಥವಾ ಅಕ್ಷರವನ್ನು ಮುದ್ರಿಸುತ್ತಿತ್ತು; ಈಗ ನಿಜವಾಗಿ ಬರೆಯುತ್ತದೆ. ತಂತಿಟಪ್ಪಾಲಿನವನು ತಂತಿಯ ಒಂದು ತುದಿಯಲ್ಲಿ ಕೂತು ಕೊಂಡು, ಲೇಖಣಿಯನ್ನು ಅಲಗಿಸುವಾಗ ಆಕರ್ಷಶಕ್ತಿಯಿಂದ ಆಚೆ ತುದಿಯಲ್ಲಿ ಮನು ಷ್ಯನು ಬರೆಯುವಂತೆ ಲೇಖಣಿ ಬರೆಯುತ್ತದೆ; ಆ ಬರಹ ವೋಡಿಯೆಲ್ಲಾ, ಸ್ಪಷ್ಟವಾಗಿ ಓದಲಿಕ್ಕಾಗುವ ಬರಹವಾಗಿದೆ.

ಮದ್ರಾಸ ಸಂಸ್ಥಾನದಲ್ಲಿ ಇಪ್ಪತ್ತೆಂಟುವರೆ ಕೋಟಿ ಎಕ್ಕರೆ ಸಾಗುವಳ್ಳಿ ಮಾಡ ತಕ್ಕ ಭೂಮಿಯಿದೆ; ಇದರಲ್ಲಿ ಇಪ್ಪತ್ತಮೂರುವರೆ ಕೋಟಿ ಎಕ್ಕರೆ ಮಾತ್ರ ಸಾಗುವಳ್ಳಿಯಾಗಿ, ಉಳಿದದ್ದು ಬಂಜರೆಂತ ಬಿಡುತ್ತಾರೆ; ಇದರ ಹೊರ್ತು ವರ್ಷದಾರರು ದರ ವರ್ಷಕ್ಕೆ ಹತ್ತು ಲಕ್ಷ ಸಾಗುವಳ್ಳಿ ಮಾಡದೆ ಬಿಡುತ್ತಾರೆ. ಹೀಗೆ ಸಾಗುವಳ್ಳಿ ಮಾಡದೆ ಬಿಡುವದು ಕೆಲ ವರ್ಷ ಗಳಿಂದ ಹೆಚ್ಚುತ್ತಾ ಬಂದದರಿಂದ ಉತ್ಪತ್ತಿಯೂ ಕಡಿಮೆಯಾಗುತ್ತಾ ಬರುವದಾಯಿತು. ಊರಿನ ನೇಗಲುಗಳಿಂದ ಉತ್ತರೆ, ನೇಗಲು ಭೂಮಿಯೊಳಗೆ ಆಳವಾಗಿ ಹೋಗುವದಿಲ್ಲವಾದ ಕಾರಣ ವಿಲಾಯತಿ ನಮೂನೆಯ ನೇಗಲುಗಳನ್ನು ತರಿಸಿ, ಈ ದೇಶದಲ್ಲಿ ರೂಢಿ ಮಾಡ ಬೇ ಕೆಂತ ಸರಕಾರದವರು ಆಲೋಚಿಸುತ್ತಾ, ಅಮೇರಿಕದ ನೇಗಲು ತಕ್ಕದೆಂತ ಗೊತ್ತು ಮಾಡಿ ದರು; ಅದು ಒಬ್ಬನು ಹೊರುವಷ್ಟು ಹಗುರವೂ ಊರಿನ ಎತ್ತುಗಳು ಎಳೆಯುವಷ್ಟು ಸುಲ ಭವೂ ಅಗ್ಗವೂ ಆಗಿದೆ; ಕ್ರಯ ಎಂಟುವರೆ ರೂಪಾಯಿ ಮಾತ್ರ; ಉತ್ತರ ಹಿಂದುಸ್ಥಾನ ದಲ್ಲಿ ಈ ತರದ ನೇಗಲುಗಳಿಂದ ಕೆಲ ಜಮಿನಾನುದಾರರ ಹೊಲಗದ್ದೆಗಳಲ್ಲಿ ಉತ್ತು ಪರೀಕ್ಷೆ ಮಾಡಿದರು. ಇನ್ನು ಮುಂದೆ ಸಾಧಾರಣ ಒಕ್ಕಲಿಗರಿಗೂ ಅದರ ಪ್ರಯೋಗ ಕಲಿಸ ಲಾದೀತಂತೆ. ನಮ್ಮ ಕಡೆಯ ಐಶ್ವರ್ಯವಂತ ವರ್ಷದಾರರು ಆ ತರದ ನೇಗಲುಗಳನ್ನು ತ ರಿಸಿದರೆ, ಭೂಮಿಯ ಸಾಗುವಳ್ಳಿಯೂ ಉತ್ತಮವಾದೀತು, ಬಡಿಗಿಯವರಿಗೆ ಕಮ್ಮಾರರಿಗೆ ಕೆಲಸ ದೊರಕಿದ ಹಾಗೂ ಆಗುವದು.

ವಿದ್ಯುದ್ದೀಪಗಳು ಅಂದರೆ ಮಿಂಚಿನ ಶಕ್ತಿಯಿಂದ ಉರಿಯುವ ದೀಪಗಳು ಇನ್ನು ಪ್ರಯೋಗಕ್ಕೆ ಬರುವಂತೆ ತೋರುತ್ತವೆ; ಈ ದೀಪಗಳಿಗೆ ಎಣ್ಣೆ ಅವಶ್ಯವಿಲ್ಲ; ಪ್ರಭೆಯು ಬಹಳ ಚಲೋದು; ಒಂದು ದೊಡ್ಡ ಕೋಣೆಯಲ್ಲಿ ಒಂದೇ ದೀಪವಿದ್ದರೂ ಅದರ ಬೆಳಕಿನಲ್ಲಿ ಬಹು ಸೂಕ್ಷ್ಮವಾದ ಕೆಲಸಗಳನ್ನು ಮಾಡ ಬಹುದು. ಖರ್ಚು ಬಹಳ ಕಡಿಮೆ.

ದಕ್ಷಿಣ ಹಿಂದುಸ್ಥಾನದಲ್ಲಿ ರೂಢಿಯಾಗಿ ಎಣಿಸುವ

ಶಕಗಳ ಮೊಕಾಬಿಲೆ ಪಟ್ಟಿ.

ಕ್ರಿಸ್ತಶಕ A. D.		ಹಿಂದು ಶಕಗಳು				ಫಸಲಿ		ಮಹಮ್ಮದಿ ಹಿಜರಿ	
		ಚಾಂದ್ರಮಾನ		ಸೌರಮಾನ					
		ಸಂವತ್ಸರಗಳು	ಶಾಲಿವಾಹನ ಶಕ	ಮಲಯಾಳ ಕೊಲ್ಲಮ್					
1807	1867	ಪ್ರಭವ	1729	1789	982	1042	1216	1276	1222	1284
1808	1868	ವಿಭವ	1730	1790	983	1043	1217	1277	1223	1285
1809	1869	ಶುಕ್ಲ	1731	1791	984	1044	1218	1278	1224	1286
1810	1870	ಪ್ರಮೋದೂತ	1732	1792	985	1045	1219	1279	1225	1287
1811	1871	ಪ್ರಜೋತ್ಪತ್ತಿ	1733	1793	986	1046	1220	1280	1226	1288
1812	1872	ಆಂಗೀರಸ	1734	1794	987	1047	1221	1281	1227	1289
1813	1873	ಶ್ರೀಮುಖ	1735	1795	988	1048	1222	1282	1228-29	1290
1814	1874	ಭಾವ	1736	1796	989	1049	1223	1283	1230	1291
1815	1875	ಯುವ	1737	1797	990	1050	1224	1284	1231	1292
1816	1876	ಧಾತು	1738	1798	991	1051	1225	1285	1232	1293
1817	1877	ಈಶ್ವರ	1739	1799	992	1052	1226	1286	1233	1294-95
1818	1878	ಬಹುಧಾನ್ಯ	1740	1800	993	1053	1227	1287	1234	1296
1819	1879	ಪ್ರಮಾಥಿ	1741	1801	994	1054	1228	1288	1235	1297
1820	1880	ವಿಕ್ರಮ	1742	1802	995	1055	1229	1289	1236	1298
1821	1881	ವಿಷು	1743	1803	996	1056	1230	1290	1237	1299
1822	1882	ಚಿತ್ರಭಾನು	1744	1804	997	1057	1231	1291	1238	1300
1823	1883	ಸ್ವಭಾನು	1745	1805	998	1058	1232	1292	1239	1301
1824	1884	ತಾರಣ	1746	1806	999	1059	1233	1293	1240	1302
1825	1885	ಪಾರ್ಥಿವ	1747	1807	1000	1060	1234	1294	1241	1303
1826	1886	ವ್ಯಯ	1748	1808	1001	1061	1235	1295	1242	1304
1827	1887	ಸರ್ವಜಿತು	1749	1809	1002	1062	1236	1296	1243	1305
1828	1888	ಸರ್ವಧಾರಿ	1750	1810	1003	1063	1237	1297	1244	1306
1829	1889	ವಿರೋಧಿ	1751	1811	1004	1064	1238	1298	1245	1307
1830	1890	ವಿಕೃತಿ	1752	1812	1005	1065	1239	1299	1246	1308
1831	1891	ಖರ	1753	1813	1006	1066	1240	1300	1247	1309
1832	1892	ನಂದನ	1754	1814	1007	1067	1241	1301	1248	1310
1833	1893	ವಿಜಯ	1755	1815	1008	1068	1242	1302	1249	1311
1834	1894	ಜಯ	1756	1816	1009	1069	1243	1303	1250	1312

ಕ್ರಿಸ್ತಶಕ		ಸಂವತ್ಸರಗಳು	ಶಾಲಿವಾಹನ ಶಕ		ಮಲಯಾಳ ಕೊಲ್ಲಮ್		ಫಸಲಿ		ಮಹಮ್ಮದಿ ಹಿಜರಿ	
1835	1895	ಮನ್ಮಥ	1757	1817	1010	1070	1244	1304	1251	1313
1836	1896	ದುರ್ಮುಖಿ	1758	1818	1011	1071	1245	1305	1252	1314
1837	1897	ಹೇವಿಳಂಬಿ	1759	1819	1012	1072	1246	1306	1253	1315
1838	1898	ವಿಳಂಬಿ	1760	1820	1013	1073	1247	1307	1254	1316
1839	1899	ವಿಕಾರಿ	1761	1821	1014	1074	1248	1308	1255	1317
1840	1900	ಶಾರ್ವರಿ	1762	1822	1015	1075	1249	1309	1256	1318
1841	1901	ಪ್ಲವ	1763	1823	1016	1076	1250	1310	1257	1319
1842	1902	ಶುಭಕೃತು	1764	1824	1017	1077	1251	1311	1258	1320
1843	1903	ಶೋಭಕೃತು	1765	1825	1018	1078	1252	1312	1259	1321
1844	1904	ಕ್ರೋಧಿ	1766	1826	1019	1079	1253	1313	1260	1322
1845	1905	ವಿಶ್ವಾವಸು	1767	1827	1020	1080	1254	1314	1261-62	1323
1846	1906	ಪರಾಭವ	1768	1828	1021	1081	1255	1315	1263	1324
1847	1907	ಪ್ಲವಂಗ	1769	1829	1022	1082	1256	1316	1264	1325
1848	1908	ಕೀಲಕ	1770	1830	1023	1083	1257	1317	1265	1326
1849	1909	ಸೌಮ್ಯ	1771	1831	1024	1084	1258	1318	1266	1327-28
1850	1910	ಸಾಧಾರಣ	1772	1832	1025	1085	1259	1319	1267	1329
1851	1911	ವಿರೋಧಿಕೃತು	1773	1833	1026	1086	1260	1320	1268	1330
1852	1912	ಪರಿಧಾವಿ	1774	1834	1027	1087	1261	1321	1269	1331
1853	1913	ಪ್ರಮಾದೀಚ	1775	1835	1028	1088	1262	1322	1270	1332
1854	1914	ಆನಂದ	1776	1836	1029	1089	1263	1323	1271	1333
1855	1915	ರಾಕ್ಷಸ	1777	1837	1030	1090	1264	1324	1272	1334
1856	1916	ನಳ	1778	1838	1031	1091	1265	1325	1273	1335
1857	1917	ಪಿಂಗಳ	1779	1839	1032	1092	1266	1326	1274	1336
1858	1918	ಕಾಳಯುಕ್ತಿ	1780	1840	1033	1093	1267	1327	1275	1337
1859	1919	ಸಿದ್ಧಾರ್ಥಿ	1781	1841	1034	1094	1268	1328	1276	1338
1860	1920	ರೌದ್ರಿ	1782	1842	1035	1095	1269	1329	1277	1339
1861	1921	ದುರ್ಮತಿ	1783	1843	1036	1096	1270	1330	1278	1340
1862	1922	ದುಂದುಭಿ	1784	1844	1037	1097	1271	1331	1279	1341
1863	1923	ರುಧಿರೋದ್ಗಾರಿ	1785	1845	1038	1098	1272	1332	1280	1342
1864	1924	ರಕ್ತಾಕ್ಷಿ	1786	1846	1039	1099	1273	1333	1281	1343
1865	1925	ಕ್ರೋಧನ	1787	1847	1040	1100	1274	1334	1282	1344
1866	1926	ಕ್ಷಯ	1788	1848	1041	1101	1275	1335	1283	1345

ಸೂಚನೆ: 1. ಕ್ರಿಸ್ತಾಬ್ದವೆಂಬ ಇಸವಿ ಜನವರಿ 1ನೇ ತಾರೀಕಿಗೆ ಪ್ರಾರಂಭವಾಗುವದು.
2. ಸಂವತ್ಸರವೂ ಶಾಲಿವಾಹನ ಶಕವೂ (ಒಂದೇ ದಿವಸ) ಮಾರ್ಚಿ-ಏಪ್ರಿಲಲ್ಲಿ ಪ್ರಾರಂಭವಾಗುವದು.
3. ಮಲಯಾಳ ಕೊಲ್ಲಮ್ ಎಂಬ ಕೇರಳ ಶಕವು ಅಗೊಸ್ತು ತಿಂಗಳಲ್ಲಿ "
4. ಫಸಲಿಯು ಜುಲಾಯಿ 1ನೇ ತಾರೀಕಿಗೆ "
5. ಮಹಮ್ಮದಿ ಹಿಜರಿ ಸಾಮಾನ್ಯವಾಗಿ ದಶಂಬರ-ಜನವರಿ ತಿಂಗಳಲ್ಲಿ "

ತಸೇ ಹಾಸಲನ್ನು ಕುರಿತ ಆಕ್ಟು.

(ತಸೇ ತೀರ್ವೆಯ ವಿಷಯದಲ್ಲಿ ಉಂಟಾದ ೧೮೭೯ನೇ ಇಸವಿಯ 1ನೇ ಆಕ್ಟಿನಿಂದ ಸಂಕ್ಷೇಪಿಸಿದ್ದು.)

೪. (Bond) "ಪತ್ರ" ಎಂಬದು *a*) ಸಂಗತ್ಯಾನುಸಾರವಾಗಿ ಯಾವದೊಂದು ಕೃತ್ಯ ಮಾಡಿದರೆ, ಯಾ ಮಾಡದೆ ಹೋದರೆ, ಪತ್ರ ರದ್ದಾಗ ತಕ್ಕದ್ದೆಂಬ ಕರ್ತವ್ಯದ ಮೇಲೆ ಒಬ್ಬನು ಮತ್ತೊಬ್ಬನಿಗೆ ಹಣ ಕೊಡುವವಕ್ಕೆ ಬದ್ಧನಾಗುವ ಯಾವದೊಂದು ದಸ್ತಾವೇಜು; *b*) ಒಬ್ಬನು ಇನ್ನೊಬ್ಬನಿಗೆ ಹಣ ಕೊಡಲಿಕ್ಕೆ ಬದ್ಧನಾಗುವ ಮತ್ತು ಆ ಹಣ ಅನುಜ್ಞೇ ಮೇರೆಗೆ ಆಗಲಿ ಇಂಥವನ ಕೈಯ ಆಗಲಿ ಕೊಡ ತಕ್ಕದ್ದಲ್ಲವ ಮತ್ತು ಒಂದು ಸಾಕ್ಷಿ ದಸ್ಕತು ಇರುವ ಯಾವದೊಂದು ದಸ್ತಾವೇಜು; *c*) ಒಬ್ಬ ಮನುಷ್ಯನು ಇನ್ನೊಬ್ಬನಿಗೆ ಧಾನ್ಯವಾಗಲೀ ವ್ಯವಸಾಯದ ಜೇರೆ ಹುಟ್ಟುವಳಿ ಆಗಲೀ ಒಪ್ಪಿಸಿ ಕೊಡುವದಕ್ಕೆ ಬದ್ಧನೆಂದು, ದಸ್ಕತು ನಿಶೀ ಬರಹು ಕೊಡುವ ದಸ್ತಾವೇಜು, ಎಂದು ಅರ್ಥ ಕೊಡುತ್ತದೆ.

೬. (Cheque) "ಚಕ್ಕ್" ಅಂದರೆ ಒಬ್ಬ ಸಾವಕಾರನ ಹೆಸರಿನಿಂದ ಬರಿಯೋಣಾಗಿ, ಕೇಳಿದಾಗಲೇ (ಹಣ) ಕೊಡ ಬೇಕೆಂಬ ವಟಾಯಿಸ ತಕ್ಕ ಹುಂಡಿ ಎಂಬ ಅಭಿಪ್ರಾಯ.

೯. (Conveyance) "ಕ್ರಯಪತ್ರ" ಅಂದರೆ ಯಾವ ದಸ್ತಾವೇಜಿನಿಂದ ಸ್ಥಿರ ಯಾ ಚರ ಸೊತ್ತನ್ನು ಇನ್ನೊಬ್ಬನಿಗೆ ವಿಕ್ರಯವಾಗಿ ಪರಾಧೀನವಾಗುತ್ತದೋ ಆ ದಸ್ತಾವೇಜು.

೧೪. (Instrument of partition) "ವಿಭಾಗಪತ್ರ" ಇಲ್ಲವೆ "ಘಾರೀಖಿತ್ತು ದಸ್ತಾವೇಜು" ಅಂದರೆ ಯಾವ ದಸ್ತಾವೇಜಿನಿಂದ ಒಂದು ಸೊತ್ತಿನ ಸಮಮಾಲಿಕರು ಅಂಥಾ ಸೊತ್ತನ್ನು ಪ್ರತ್ಯಪ್ರತ್ಯೇಕ ಹಂಚಿ ಕೊಳ್ಳುತ್ತಾರೋ ಯಾ ಹಾಗೆ ಹಂಚಿ ಕೊಳ್ಳಲಿಕ್ಕೆ ಸಮ್ಮತಿ ಪಡುತ್ತಾರೋ, ಆ ದಸ್ತಾವೇಜು; ಇಲ್ಲವೆ ವಿಭಾಗ ಮಾಡಿ ಕೊಳ್ಳ ತಕ್ಕ ಬಗ್ಗೆ ಯಾವ ರೇವನಿ ಅಧಿಕಾರಸ್ಥರಾಗಲಿ ಕೊಡುವ ಆಜ್ಞೆರ ಹುಕುಮ್.

೧೭. (Lease) "ಗೇಣಿಚೀಟು" ಅಂದರೆ ಯಾವದೊಂದು ಸ್ಥಿರಸೊತ್ತಿನ ಗೇಣಿಚೀಟೆಂದು ಅರ್ಥ ಕೊಡುವದಲ್ಲದೆ, *a*) ಪಟ್ಟಾ; *b*) ಸ್ಥಿರಸೊತ್ತನ್ನು ವ್ಯವಸಾಯ ಮಾಡುವದಕ್ಕೆ ಆಗಲೀ ಅನುಭೋಗದಲ್ಲಿ ಇಟ್ಟು ಕೊಳ್ಳುವದಕ್ಕಾಗಲೀ ಅದಕ್ಕಾಗಿ ಗೇಣಿ ತೆರಲಿಕ್ಕಾಗಲೀ (ಗೇಣಿಚೀಟಿನ ಎದುರ್ನುಡಿಯಾಗಿ ಅಲ್ಲದೆ) ಬರಕೊಡುವ ಒಂದು ಕಬೂಲಿಯಾತ್ ಅಥವಾ ದಸ್ತಾವೇಜು; *c*) ಯಾವ ತರದ ಸುಂಕಗಳನ್ನಾಗಲೀ ಗುತ್ತಿಗೆಗೆ ಕೊಡೋಣಾಗುವ ಅಭಿಪ್ರಾಯವುಳ್ಳ ದಸ್ತಾವೇಜು; *d*) ಗೇಣಿಗೆ ಕೊಡ ಬೇಕೆಂದು ಅಪೇಕ್ಷಿಸಿ ಬರಕೊಂಡ ಮನವಿಯ ಅರಿಕೆ ನಡಿಸ ಬಹುದೆಂತಾ ಅನ್ವಯ ಕೊಡುವ ಬರಹಾಮೂಲಕವಾದ ಮಾತುಗಳು, ಇವುಗಳನ್ನು ಅಡಗಿಸಿ ಕೊಂಡಿರುತ್ತದೆ.

೧೫. (Mortgage-deed) "ಅಡಮಾನಪತ್ರ" ಎಂಬದು ಸಾಲವಾಗಿ ಕೊಟ್ಟ ಯಾ ಕೊಡುವ ವೊಬಲಗಿನ ಖಾತರೀ ಬಗ್ಗೆ, ಅಥವಾ ಹಾಲೀ ಇರುವ ಯಾ ಇನ್ನು ಮೇಲೆ ಆಗುವ ಸಾಲದ ಖಾತರೀ ಬಗ್ಗೆ, ಅಥವಾ ಒಂದು ಒಪ್ಪಂದ ನೆರವೇರಿಸುವವರ ಖಾತರೀ ಬಗ್ಗೆ ಒಬ್ಬ ಮನುಷ್ಯನು ಫಲಾನಾ ಸೊತ್ತಿನಲ್ಲಿ ತನಗಿರುವ ಹಕ್ಕನ್ನು ಮತ್ತೊಬ್ಬನಿಗೆ ಯಾ ಮತ್ತೊಬ್ಬನ ಹೆಸರಿನಲ್ಲಿ ವರ್ಗ ಮಾಡುವ ಇಲ್ಲವೆ ಹಕ್ಕು ಉಂಟು ಮಾಡುವ ಪ್ರತಿ ದಸ್ತಾವೇಜು.

೧೬. (Power-of-attorney) "ಪವರ್-ಒಫ್-ಎಟ್ಟರ್ನಿ" ಎಂಬದು ಇದನ್ನು ಬರಕೊಡುವವನ ಬದಲಾಗಿ ಇದರಲ್ಲಿ ನಮೂದಿಸಲ್ಪಟ್ಟವನು ಫಲಾನಾ ಕೆಲಸ ನೋಡಲಿಕ್ಕೆ ಅಧಿಕಾರ ಕೊಡುವ (ಜಾರಿ ಇರುವ ಕೋರ್ಟ ರುಸುಮಿಗೆ ಅನ್ಯಥಾ ಸುರಿಯಾಗಿರದ) ದಸ್ತಾವೇಜು.

೧೭. (Receipt) "ರಸೀದಿ" ಅಂದರೆ ಯಾವ ಹಣವನ್ನಾಗಲೀ ಬಿಲ್ ಒಫ್ ಎಕ್ಸ್‌ಚೆಂಜ್ ಎಂಬ ವಟಾಯಿಸ ತಕ್ಕ ಹುಂಡಿ, ಚೆಕ್ಕ್, ಪ್ರೊಮಿಸರಿ ನೋಟನ್ನಾಗಲೀ ಈಸು ಕೊಂಡಿರುವದಾಗಿ ಯಾವ

ದರಿಂದ ಒಪ್ಪಿಕೊಳ್ಳೋಣವಾಗುತ್ತದೋ, ಅಥವಾ ಒಂದು ಸಾಲ ತೀರಿಸುವದರಲ್ಲಿ ಇತರ ಯಾವ ಚರ ಸೊತ್ತನ್ನಾಗಲೀ ಈಸು ಕೊಂಡಿರುವದಾಗಿ ಯಾವದರಿಂದ ಒಪ್ಪಿಕೊಳ್ಳೋಣವಾಗುತ್ತದೋ, ಅಥವಾ ಯಾವ ಸಾಲವಾಗಲೀ ತಗಾದೆಯಾಗಲೀ ಸಂದಾಯವಾಗಿರುವದಾಗಿ ಯಾವದರಿಂದ ಒಪ್ಪಿಕೊಳ್ಳೋಣವಾಗುತ್ತದೋ, ಇಲ್ಲವೆ ಯಾವದು ಅಂಥಾ ಒಪ್ಪಿತವನ್ನು ಸೂಚಿಸುತ್ತದೋ ಅಂಥಾ ಯಾವ ಕರಾವಾಗಲೀ ಯಾದಾಸ್ತು ಆಗಲೀ ಲಿಖಿತವಾಗಲೀ ಪ್ರಕಟಣೆ ಆಗಲೀ ಎಂದು ಅರ್ಥ ಕೊಡುತ್ತದೆ. ಇದಕ್ಕೆ ಯಾರ ದಸ್ಕತು ಇದ್ದಾಗ್ಯೂ ಇಲ್ಲದೆ ಇದ್ದಾಗ್ಯೂ ಚಿಂತೆ ಇಲ್ಲ.

೧೫. **(Settlement)** "ವ್ಯವಸ್ಥಾಪತ್ರ" ಅಂದರೆ *a*) ವಿವಾಹ ಮಾಡಿ ಕೊಳ್ಳುವದಕ್ಕೋಸ್ಕರ, *b*) ವ್ಯವಸ್ಥೆ ಮಾಡುವವನು ತನ್ನ ಸೊತ್ತನ್ನು ತನ್ನ ಕುಟುಂಬದವರಿಗಾಗಲೀ ಬೇರೆ ಯಾರಿಗೆ ಕೊಡಬೇಕೆಂದನ್ನುತ್ತಾನೋ ಅವರಿಗಾಗಲೀ ಹಂಚಿ ಕೊಡುವ ಉದ್ದಿಶ್ಯ, ಅಥವಾ *c*) ಮತಸಂಬಂಧದ ಇಲ್ಲವೆ ಧರ್ಮಸಂಬಂಧದ ಉದ್ದಿಶ್ಯ ಸ್ಥಿರ ಚರ ಸೊತ್ತಿನ ವಿಲೆವಾರಿ ಬಾಬತು ಆಗುವ (ಮರಣಶಾಸನವಲ್ಲದ ಬೇರೆ) ಬರೆಹಾಮೂಲಕವಾದ ಪತ್ರ ಎಂದು ಅರ್ಥವಾಗುತ್ತದೆ. ಈ ಮಾತಿನಲ್ಲಿ ಹಾಗೆ ವಿಲೆವಾರಿ ಮಾಡುತ್ತೇನೆಂತ ಬರಹಾಮೂಲಕವಾಗಿ ಮಾಡುವ ಒಡಂಬಡಿಕೆ ಸಹ ಕೇರುತ್ತದೆ. (೩ನೇ ಪ್ರಕರಣ.)

ಯಾವ ವಿಕ್ರಯ, ಗೇಣಿ, ಅಡಮಾನ, ಇಲ್ಲವೆ ವ್ಯವಸ್ಥೆಯಲ್ಲಿ ಕಾರ್ಯ ಪೂರ್ತಿ ಆಗುವ ಬಗ್ಯೆ ಕೆಲವು ದಸ್ತಾವೇಜುಗಳು ಉಪಯೋಗಿಸಲ್ಪಟ್ಟರೆ, ಅಂಥಾ ಕ್ರಯಪತ್ರ, ಗೇಣಿಜೀಟು, ಅಡಮಾನ ಪತ್ರ, ಇಲ್ಲವೆ ವ್ಯವಸ್ಥಾಪತ್ರಕ್ಕಾಗಿ ನಿಶ್ಚಯಿಸಿರುವಂಥಾ ಹಾಸಲಿಗೆ ಮುಖ್ಯ ದಸ್ತಾವೇಜು ಮಾತ್ರ ಗುರಿಯಾಗ ಬೇಕು, ಮತ್ತು ಅದಕ್ಕೆ ಸಮ್ಮಂಧವಾದ ಇತರ ದಸ್ತಾವೇಜುಗಳ ಪೈಕಿ ಬಂದೊಂದಕ್ಕೆ ನಿರಖಿರುವ ಹಾಸಲಿಗೆ ಬದಲಾಗಿ ಒಂದು ರೂಪಾಯಿ ಹಾಸಲಿಗೆ ಗುರಿಯಾಗ ತಕ್ಕದ್ದು. (೬ನೇ ಪ್ರಕರಣ.)

ಯಾವ ದಸ್ತಾವೇಜಿಗಾಗಲೀ ತಸೇ ಹಚ್ಚ ತಕ್ಕ ಮನುಷ್ಯನು ಆ ದಸ್ತಾವೇಜನ್ನು ಬರಹು, ಆ ಸ್ಟಾಂಪನ್ನು ಪುನಹಾ ಉಪಯೋಗಕ್ಕೆ ಬಾರದ ಹಾಗೆ ರದ್ದು ಮಾಡ ತಕ್ಕದ್ದು. ಆ ಪ್ರಕಾರ ಸ್ಟಾಂಪು ರದ್ದು ಮಾಡದೆ ಇರುವ ಯಾವದೊಂದು ದಸ್ತಾವೇಜು ಆ ಸ್ಟಾಂಪು ಸಮ್ಮಂಧ ಪಡುವಷ್ಟರ ಮಟ್ಟಿಗೆ ತಸೆ ಹಚ್ಚಿಲ್ಲವೆಂದು ಎಣಿಸಲಾದೀತು. (೧೧ನೇ ಪ್ರಕರಣ.)

ತಸೇ ಕಾಗದದ ಮೇಲೆ ಆಗ ತಕ್ಕ ಪ್ರತಿ ದಸ್ತಾವೇಜನ್ನು, ಅದರ ತಸೇ ತೋರಲ್ಪಡುವಂತೆ ಮತ್ತು ಇತರ ದಸ್ತಾವೇಜುಗಳಿಗೆ ಉಪಯೋಗವಾಗದಂತೆ ಇಲ್ಲವೆ ಲಗಾವಾಗದಂತೆ ಬರಿಯ ತಕ್ಕದ್ದು. (೧೨ನೇ ಪ್ರಕರಣ.)

ತಸೇ ಹಾಸಲಿಗೆ ಗುರಿಯಾದ ದಸ್ತಾವೇಜನ್ನು ಬರಿಯಲ್ಪಟ್ಟಿರುವಂಥಾ ತಸೆ ಕಾಗದದ ತುನಿಕೆಯಲ್ಲಿ ಹಾಸಲಿಗೆ ಗುರಿಯಾಗುವಂಥಾ ಬೇರೆ ದಸ್ತಾವೇಜನ್ನು ಬರಿಯ ಕೂಡದು. ಪರಂತು ಸದರಿ ದಸ್ತಾವೇಜಿನಿಂದ ಹುಟ್ಟಿದ ಯಾ ಸಾಕ್ಷ್ಯವಾದ ಯಾವ ಹಕ್ಕನ್ನಾಗಲೀ ವರ್ಗ ಮಾಡುವ ಬಗ್ಯೆ, ಅಥವಾ ಹಣ ಯಾ ಜೀನಸುಗಳ ಸಂದಾಯ ಯಾ ಒಪ್ಪಿಗೆ ಸದರಿ ದಸ್ತಾವೇಜಿನಿಂದ ಬಂದೋಬಸ್ತು ಮಾಡೋಣವಾಗಿ ಪ್ಪರೆ, ಅಂಥಾ ಹಣ ಯಾ ಜೀನಸು ಬಂತೆಂದು ಒಪ್ಪಿಕೊಳ್ಳುವ ಉದ್ದಿಶ್ಯ ಒಂದು ದಸ್ತಾವೇಜಿನ ಮೇಲೆ, ಸರಿಯಾದ ತಸೆ ಇರುವಂಥಾ ಇಲ್ಲವೆ ಹಾಸಲಿಗೆ ಗುರಿಯಾಗದೆ ಇರುವಂಥಾ ಯಾವ ಯಾದಾಸ್ತನ್ನಾದರೂ ಮಾಡ ಕೂಡದೆಂದು ಇದರಿಂದ ಆತಂಕ ಪಡಿಸುವದಿಲ್ಲ. (೧೩ನೇ ಪ್ರಕರಣ.)

ಇಪ್ಪತ್ತು ರೂಪಾಯಿಗೆ ಮಿರಿರುವ ಯಾವ ಹಣವನ್ನಾಗಲೀ, ಅಷ್ಟಕ್ಕೆ ಮಿರಿದ ಯಾವ ಬಿಲ್ ಒಫ್ ಎಕ್ಸ್‌ಚೆಂಜ್, ಚಕ್ಕು, ಇಲ್ಲವೆ ಪ್ರೊಮಿಸರಿ ನೋಟನ್ನಾಗಲಿ, ಇಲ್ಲವೆ ಒಂದು ಸಾಲ ತೀರಿಸುವದರಲ್ಲಿ ಇಪ್ಪತ್ತು ರೂಪಾಯಿಗೆ ಮಿರಿರುವ ಯಾವ ಚರಸೊತ್ತನ್ನಾಗಲೀ ಬರ ಮಾಡಿಕೊಳ್ಳುವ ಯಾವ ಮನುಷ್ಯನಾಗಲೂ ತನಗೆ ಅಂಥಾ ಹಣ, ಬಿಲ್, ಚಕ್ಕು, ನೋಟು, ಇಲ್ಲವೆ ಸೊತ್ತನ್ನು ಒಪ್ಪಿಸುವಂಥವನಿಂದ ಕ್ರಮವಾದ ಸ್ಟಾಂಪು ಇರುವ ರಶೀದಿ ಪಡಕೊಳ್ಳ ಬೇಕು. (೫೩ನೇ ಪ್ರಕರಣ.)

ಸ್ಟಾಂಪುಗಳನ್ನು ಮಾರಲಿಕ್ಕೆ ನೇಮಕ ಪಟ್ಟ ಯಾವ ಮನುಷ್ಯನಾಗಲಿ, ಕಾಯಿದೆ ಪ್ರಕಾರ ನಡಕೊಳ್ಳದೆ ಹೋದರೆ, ಮತ್ತು ಆ ಪ್ರಕಾರ ನೇಮಕ ಪಡದ ಯಾವ ಮನುಷ್ಯನಾಗಲಿ ಸ್ಟಾಂಪುಗಳನ್ನು ವಿಕ್ರಯಿಸಿದರೆ ಯಾ ವಿಕ್ರಯಿಸುವದಾಗಿ ಹೇಳಿದರೆ, ಆತನು ೬ ತಿಂಗಳ ವರೆಗಿನ ಕೈದಿಗಾಗಲೀ ೫೦೦ ರೂಪಾಯಿ ವರೆಗಿನ ಜುಲ್ಮಾನೆಗಾಗಲೀ ಇವೆರಡು ಶಿಕ್ಷೆಗಳಿಗಾಗಲೀ ಗುರಿಯಾಗುತ್ತಾನೆ. (೬೮ನೇ ಪ್ರಕರಣ.)

ಠಸೆ ಹಾಸಲಿನ ಪಟ್ಟಿ.

ದಸ್ತಾವೇಜಿನ ವಿವರಣೆ:	ಸ್ಟಾಂಪ್ ಹಾಸಲು:
1. (Acknowledgment) ಇಪ್ಪತ್ತು ರೂಪಾಯಿಗೆ ಮೀರಿರುವ ಸಾಲದ ಪಾವತೀ ಬಿಸ್ಪೀತ (ಯಾನೆ ರಸೀದಿ)	೧ ಆಣೆ
2. (Administration-bond) ಎಡ್ಮಿನಿಸ್ಟ್ರೇಶನ್ ಬೊಂಡ್ (ಅಂದರೆ ಸೊತ್ತಿನ ಮೇಲೆ ಅಧಿಕಾರ ನಡಿಸುವ ಬಗ್ಯೆ ಹುಟ್ಟುವ ಪತ್ರ) . .	14ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
3. (Affidavit) ಅಫಿದಾವಿತ್ (ಅಂದರೆ ಪ್ರಮಾಣ ಮಾಡಿಸಲಿಕ್ಕೆ ಅಧಿಕಾರ ಉಳ್ಳವನ ಮುಂದೆ ಪ್ರಮಾಣದ ಮೇಲಾಗಲೀ ಸತ್ಯದ ಮೇಲಾಗಲೀ ಬರಹಾಮೂಲಕವಾಗಿ ಕೊಡುವ ವಾಂಙ್ಮೂಲ ಇಲ್ಲವೆ "ಡಿಕ್ಲರೇಶನ್" ಯಾನೆ ಹೇಳಿಕೆ	೧ ರೂಪಾಯಿ
5. (Agreement) ಒಡಂಬಡಿಕೆ ಇಲ್ಲವೆ ಒಡಂಬಡಿಕೆಯ ಯಾ ಪಾಸ್ತು:—	
a) (Government security) ಗವರ್ನಮೆಂಟ ಸೆಕ್ಯೂರಿಟಿ ಎಂಬ ಸರ್ಕಾರ್ಯದ ಸಾಲಪತ್ರವನ್ನಾಗಲೀ ಒಂದು ಸಂಘದ ಹಿಸೆಯನ್ನಾಗಲೀ ವಟಾಯಿಸ ತಕ್ಕ ಹುಂಡಿಯನ್ನಾಗಲೀ ವಿಕ್ರಯಿಸುವ ವಿಷಯದಲ್ಲಿ ಆಗಿದ್ದರೆ.	೧ ಆಣೆ
b) ಬೊಂಬಾಯಿ ಖಾತೆಯಲ್ಲಿರುವ ಒಂದು ಭೂಮಿಯ ಮೂಲಗಾರನಾಗಲೀ ಭೋಗೊಟಿದಾರನಾಗಲೀ ಗವರ್ನಮೆಂಟಿಗೆ ತನ್ನ ಹಕ್ಕನ್ನು ಬಿಟ್ಟು ಕೊಟ್ಟು, ಅದಕ್ಕೆ ಬದಲಾಗಿ ಬೇರೊಂದು ಭೂಮಿಯ ಹಕ್ಕನ್ನು ಸ್ವೀಕರಿಸುವ ವಿಷಯದಲ್ಲ್ಯಾಗಿದ್ದರೆ	೪ ಆಣೆ
c) ಈ ಆಕ್ಟಿನಿಂದ ಅನ್ಯಥಾ ಏರ್ಪಡಿಸದೆ ಇರುವ ಸಂಗತಿಯಲ್ಲಿ . .	೯ ಆಣೆ
6. (Appointment) ನೇಮಕ (ಅಂದರೆ ಟ್ರಸ್ಟಿಗಳ ಇಲ್ಲವೆ ಸ್ಥಿರಯಾ ಚರ ಸೊತ್ತುಗಳ ಅಧಿಕಾರದ ಅಮಲಿನಲ್ಲಿ ಆದ ನೇಮಕ) ಮರಣಶಾಸನವಲ್ಲದ ಯಾವ ಬರವಣಿಕೆಯಿಂದಾಗಲಿ ಮಾಡಲ್ಪಟ್ಟಿದ್ದರೆ . . .	೧೫ ರೂಪಾಯಿ
7. (Appraisement) ಅಂದಾಜುಪಟ್ಟಿ (ಯಾ ಕಿಮ್ಮತುಚೀಟು— ಒಂದು ವ್ಯಾಜ್ಯ ನಡಿಯುತ್ತಿರುವಾಗ ಕೋರ್ಟಿನವರ ಅಪ್ಪಣೆ ಮೇಲಲ್ಲದೆ ಅನ್ಯಥಾ ತಯಾರು ಮಾಡೋಣಾದರೆ)	10ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
8. ಯಾವದೊಂದು ಸಂಘದ (Articles) ನಿಬಂಧನೆಗಳು . .	೨೫ ರೂಪಾಯಿ
9. ಯಾವದೊಂದು ಹೈಕೋರ್ಟಿನಲ್ಲಿ ಎಟ್ಟರ್ನಿ ಆಗುವ ಬಗ್ಯೆ ಪ್ರಫಪುತಾಕ್ಲರ್ಕ ಯಾನೆ ಗುಮಸ್ತನಾಗುವವನು ಬದ್ಧನಾಗುವ (Articles of clerkship) ಕರಾರು	೨೫೦ ರೂಪಾಯಿ
ಹವಾಲ್ತಿ	21ನೇ ಮತ್ತು 60ನೇ ಅಂಕೆಗಳನ್ನು ನೋಡು.
10. ಪಂಚಾಯಿತರ ಇಲ್ಲವೆ ಮಧ್ಯಸ್ಥರ (Award) ಎವೊರ್ಡ ಯಾನೆ ಇತ್ಯರ್ಥ (ಅಂದರೆ ಒಂದು ವ್ಯಾಜ್ಯ ನಡಿಯುತ್ತಿರುವಾಗ ಕೋರ್ಟಿನವರ ಹುಕುಮಿನ ಮೇಲಲ್ಲದೆ ಅನ್ಯಥಾ ಒಬ್ಬ ಪಂಚಾಯಿತದಾರನಿಗೆ ರಿಫೆರ್ ಮಾಡಲಾಗಿ ಅತನಿಂದ ಬರಹಾಮೂಲಕವಾಗಿ ಕೊಡೋಣಾಗುವ ಫೈಸಲು):—	
a) ಸದರಿ ಇತ್ಯರ್ಥಕ್ಕೆ ಕಾರಣವಾದ ಸೊತ್ತಿನ ಮೊಬಲಗು ೧೦೦೦ ರೂಪಾಯಿಗೆ ಮೀರದಿದ್ದರೆ	13ನೇ ಅಂಕೆಯಲ್ಲಿ ಹೇಳಿರುವಷ್ಟೆ ಠಸೆ
b) ಇತರ ಸಂಗತಿಯಲ್ಲಿ	೫ ರೂಪಾಯಿ
11. (Bill of Exchange or Promissory Note) ಬಿಲ್ ಒಫ್ ಎಕ್ಸ್‌ಚೆಂಜ್ ಯಾ ಪ್ರೊಮಿಸರಿ ನೋಟು (ಅಂದರೆ ವಟಾಯಿಸ ತಕ್ಕ ಹುಂಡಿಯಾ ವಾಯಿದೆಚೀಟು. ಇದರಲ್ಲಿ ಚಕ್ಕೆ, ಪತ್ರ, ಬೆಂಕನೋಟು, ಇಲ್ಲವೆ ಕರೆನ್ಸಿ ನೋಟು ಶೇರುಆದಿಲ್ಲ):—	
a) ಕೇಳಿದಾಗಲೇ ಪಾವತಿ ಆಗ ತಕ್ಕದ್ದಾಗಿ, ೨೦ ರೂಪಾಯಿಗೆ ಮೀರದಿದ್ದರೆ	೧ ಆಣೆ

	ಒಂದೇ ಬರಿಯೋಣಾದರೆ		ದುಬಾರೆ ಬರಿಯೋಣಾದರೆ, ಪ್ರತಿ ೧೦ಕ್ಕೆ		ತಿಬಾರೆ ಬರಿಯೋಣಾದರೆ, ಪ್ರತಿ ೧೦ಕ್ಕೆ	
b) ಕೇಳಿದಾಗಲೇ ಅಲ್ಲದೆ ಅನ್ಯಥಾ ಪಾವತಿಯಾಗ ತಕ್ಕ ದ್ದಾಗಿ, ಬರದ ಯಾ ಕಂಡ ತಾರೀಕಿನಿಂದ ಒಂದು ಸಂವತ್ಸರಕ್ಕೆ ಮಿಾರದ ವಾಯಿದೆ ಇದ್ದರೆ:	ರೂ.	ಆ.	ರೂ.	ಆ.	ರೂ.	ಆ.
ನಮೂದಿಸಿದ ರೂಪಾಯಿ ೨೦೦ಕ್ಕೆ ಮಿಾರದಿದ್ದರೆ	೦	೨	೦	೧	೦	೧
ರೂಪಾಯಿ ೨೦೦ ಕ್ಕೆ ಮಿಾರಿ ೪೦೦ " "	೦	೪	೦	೨	೦	೨
" ೪೦೦ " ೬೦೦ " "	೦	೬	೦	೩	೦	೩
" ೬೦೦ " ೧೦೦೦ " "	೦	೧೦	೦	೫	೦	೪
" ೧೦೦೦ " ೧೨೦೦ " "	೦	೧೨	೦	೬	೦	೪
" ೧೨೦೦ " ೧೬೦೦ " "	೧	೦	೦	೮	೦	೬
" ೧೬೦೦ " ೨೫೦೦ " "	೧	೬	೦	೧೨	೦	೮
೨೫೦೦ ರೂಪಾಯಿ ಮೇಲೆ ೧೦೦೦೦ ರೂ. ವರೆಗೆ ಪ್ರತಿ ರೂ. ೨೫೦೦ಕ್ಕೆ ಯಾ ಅದರ ಅಂತಕ್ಕೆ	೧	೬	೦	೧೨	೦	೮
೧೦೦೦೦ ರೂಪಾಯಿ ಮೇಲೆ ೬೦೦೦ ರೂಪಾಯಿ ವರೆಗೆ ಪ್ರತಿ ರೂ. ೫೦೦೦ಕ್ಕೆ ಯಾ ಅದರ ಅಂಶಕ್ಕೆ.	೩	೦	೧	೬	೧	೦
೬೦೦೦೦ ರೂಪಾಯಿ ಮೇಲೆ ಪ್ರತಿ ರೂ. ೧೦೦೦೦ಕ್ಕೆ ಯಾ ಅದರ ಅಂತಕ್ಕೆ	೬	೦	೩	೦	೨	೦
c) ಬರದ ತಾರೀಕಿನಿಂದ ಇಲ್ಲವೆ ಕಂಡ ತಾರೀಕಿನಿಂದ ಒಂದು ಸಂವತ್ಸರದ ಮೇಲೆ ಪಾವತಿ ಆಗ ತಕ್ಕದ್ದಾದರೆ—	13ನೇ ಅಂಕೆಯಲ್ಲಿ ಹೇಳಿರುವಷ್ಟೇ ತಸೆ					
12. (Bill of Lading) ಬಿಲ್ ಒಫ್ ಲೇಡಿಂಗ್ ಎಂಬ ಸಾಮಾನು (ಜಹಜಿನ ಮೇಲೆ) ಭರಾವಣಿಚೀಟು	೪ ಆಣೆ					
13. ಪತ್ರ (ಈ ಆಕ್ಟಿನಿಂದ ಅನ್ಯಥಾ ನಿಬಂಧಿಸಲ್ಪಡದೆ ಇರುವಂಥಾದ್ದು):—						
ಇದರ ಮೊಬಲಗು ೧೦ ರೂಪಾಯಿಗೆ ಮಿಾರದಿದ್ದರೆ	೨ ಆಣೆ					
೧೦ ರೂಪಾಯಿಗೆ ಮಿಾರಿ ರೂಪಾಯಿ ೫೦ಕ್ಕೆ ,, ...	೪ ಆಣೆ					
೫೦ ,, ,, ,, ೧೦೦ ,, ,, ...	೮ ಆಣೆ					
೧೦೦ ರೂ. ಮೇಲೆ ೧೦೦೦ ರೂ. ವರೆಗೆ ಪ್ರತಿ ರೂ. ೧೦೦ಕ್ಕೆ ಯಾ ಅದರಂಶಕ್ಕೆ	೮ ಆಣೆ					
೧೦೦೦ ,, ,, ಪ್ರತಿ ರೂ. ೫೦೦ಕ್ಕೆ ಯಾ ಅದರ ಅಂಶಕ್ಕೆ . . .	೨ ರೂಪಾಯಿ ೮ ಆಣೆ					
14. (Bond or Mortgage-deed) ಪತ್ರ ಅಥವಾ ಅಡಮಾನ ಪತ್ರ (ಒಂದು ಕೆಲಸವನ್ನು ಸರಿಯಾಗಿ ನೆರವೇರಿಸ ತಕ್ಕ ಬಗ್ಗೆ ಅಥವಾ ತದ್ವಾರಾ ವಸೂಲಾದ ಋಣಕ್ಕೆ ಸಬಬು ಕೊಡ ತಕ್ಕ ಬಗ್ಗೆ ಜಾಮೀನಾಗಿ ಬರಕೊಡುವಂಥಾದ್ದು):—						
a) ಪತ್ರದ ಮೊಬಲಗು ೧೦೦ ರೂಪಾಯಿಗೆ ಮಿಾರದಿದ್ದರೆ—	13ನೇ ಅಂಕೆಯಲ್ಲಿ ಹೇಳಿರುವಷ್ಟೆ ತಸೆ					
b) ಇತರ ಸಂಗತಿಯಲ್ಲಿ	೫ ರೂಪಾಯಿ					
